ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ ಸೆಪ್ಟೆಂಬರ್ 25, 1988 ಸಂಪುಟ-10 ಸಂಚಿಕೆ-39 ರೂ. 1-00

ಒಳಪುಟಗಳಲ್ಲಿ....

ಜನತೆಯ ಐಕ್ಯಹೋರಾಟಕ್ಕೆ ದೊಡ್ಡ ವಿಜಯ

ಮಾನಹಾನಿ ಮಸೂದೆಯನ್ನು ಕೈಬಿಡಲು ಸರ್ಕಾರದ ನಿರ್ಧಾರ

ಆಗಸ್ಟ್ 29 ರಿಂದ ಸುಮಾರು ಮೂರು ವಾರ ಸಂಸತ್ತಿನಿಂದ ಹಿಡಿದು ದೇಶದ ಮೂಲೆ ಮೂಲೆಯವರೆಗೆ ಎಲ್ಲಾ ಜನವಿಭಾಗಗಳಿಂದ ಏಕಕಂಠದಲ್ಲಿ ತೀವ್ರ ವಿರೋಧವನ್ನು ಎದುರಿಸಬೇಕಾಗಿ ಬಂದ, ಆಳುವ ಪಕ್ಷಕ್ಕೆ ನಿಷ್ಠರಾದ ಪತ್ರಕರ್ತರೂ ಬೆಂಬಲಿಸಲಾಗದ ಕರಾಳ ಮಾನಹಾನಿ ವಿಧೇಯಕವನ್ನು ಕೊನೆಗೂ ಕೈಬಿಡಲು ರಾಜೀವ ಗಾಂಧಿ ಸರ್ಕಾರ ನಿರ್ಧರಿಸಿದೆ.

ಸೆಪ್ಟಂಬರ್ 22 ರಂದು ಪ್ರಧಾನ ಮಂತ್ರಿಗಳು ಒಂದು ಹೇಳಿಕೆ ನೀಡಿ "ವ್ಯಾಪಕ ಹಾಗೂ ಪೂರ್ಣ ರೀತಿಯ ರಾಷ್ಟ್ರೀಯ ಚರ್ಚೆ ನಡೆಯಲು ಅನುವಾಗುವಂತೆ, ನಮ್ಮ ಪರಂಪರೆಗೆ ಅನುಗುಣವಾಗಿ ಮಾನಹಾನಿ ವಿಧೇಯಕ, 1988 ನ್ನು ಕಾನೂನಾಗಿ ಮಾಡಬಾರದು ಎಂದು ನಿರ್ಧರಿಸಿದ್ದೇವೆ" ಎಂದು ತಿಳಿಯಪಡಿಸಿದ್ದಾರೆ.

ಕೆಲವೇ ದಿನಗಳ ಹಿಂದೆ ಈ ಮಸೂದೆ ಸರಿಯಾದ ದಿಕ್ಕಿನಲ್ಲಿ ತಾವಿಟ್ಟ ಹೆಜ್ಜೆ ಎಂದು ಖಡಾಖಂಡಿತವಾಗಿ ನುಡಿದ, ಪ್ರತಿಭಟನೆಯನ್ನು ಮಸೂದೆ ಓದುವ ತೊಂದರೆಯನ್ನೇ ತೆಗೆದುಕೊಳ್ಳದವರ ಬೊಬ್ಬೆ ಎಂದು ಕುಹಕವಾಡಿದ, ಮಸೂದೆಯನ್ನು ಹಿಂತೆಗೆದುಕೊಳ್ಳಲಾಗದು, ಪತ್ರಿಕಾರಂಗ ಸರ್ಕಾರದ ಆಹ್ವಾನವನ್ನು ಸ್ವೀಕರಿಸಿ ತನ್ನಲ್ಲಿಗೆ ಬಂದು ಮಸೂದೆ ಅನಗತ್ಯ ಎಂದು ಮನವರಿಕೆ ಮಾಡಿಸಿಕೊಡಬೇಕು ಎಂದು ಗುಡುಗಿದ ಪ್ರಧಾನ ಮಂತ್ರಿಗಳೇ ಈಗ ಇದ್ದಕ್ಕಿದ್ದಂತೆ ತಮ್ಮ 'ಪರಂಪರೆ'ಯನ್ನು ನೆನಪಿಸಿಕೊಂಡು, ಅದರ ನೆರಳಲ್ಲಿ ಮುಖ ಮರೆಸಿಕೊಂಡು ಮಸೂದೆ ಹಿಂತೆಗೆದುಕೊಂಡಿದ್ದಾರೆ.

ಈ ಕುಪ್ರಸಿದ್ಧ ಮಸೂದೆಯನ್ನು ಸರಕಾರ ಹಿಂತೆಗೆದುಕೊಂಡಿರುವುದು ಪತ್ರಿಕಾರಂಗದ ಒಮ್ಮತದ ವಿರೋಧವೂ ಸೇರಿದಂತೆ ಸಮಸ್ತ ಜನತೆಯ, ಎಲ್ಲಾ ಜನವಿಭಾಗಗಳ ಐಕ್ಯ ಹೋರಾಟಕ್ಕೆ ದೊರೆತ ಒಂದು ದೊಡ್ಡ ವಿಜಯ ಎಂದು ಸಿ.ಪಿ.ಐ.(ಎಂ)ನ ಪಾಲಿಟ್ ಬ್ಯೂರೋ ವರ್ಣಿಸಿದೆ. ಕಾಂಗ್ರೆಸ್(ಐ) ಆಡಳಿತ ತಮ್ಮ ಮೂಲಭೂತ ಹಕ್ಕುಗಳ ಮೇಲೆ ನಡೆಸುವ ಯಾವುದೇ ಸರ್ವಾಧಿಕಾರೀ ಹಲ್ಲೆಯನ್ನು ಜನತೆ ಸಹಿಸಲಾರರು ಎಂಬುದನ್ನು ಈ ವಿಜಯ ತೋರಿಸಿಕೊಟ್ಟಿದೆ ಎಂದು ಪಾಲಿಟ್ ಬ್ಯೂರೋ ಹೇಳಿದೆ.

ಹೋರಾಟದ ಕರೆಗೆ ಓಗೊಟ್ಟ ಎಲ್ಲ ಜನವಿಭಾಗಗಳನ್ನು ಪಾಲಿಟ್‌ಬ್ಯೂರೋ ಈ ಅಮೋಘ ವಿಜಯಕ್ಕಾಗಿ ಅಭಿನಂದಿಸಿದೆ.

ಈ ಮಸೂದೆಯನ್ನು ಆಗಸ್ಟ್ 29 ರಂದು ಲೋಕಸಭೆಯಲ್ಲಿ ಸದ್ದಿಲ್ಲದೆ ಮಂಡಿಸಿ, ತರಾತುರಿಯಲ್ಲಿ ಅದೇ ದಿನ ಪಾಸುಮಾಡಿಸಿಕೊಳ್ಳಬೇಕು, ಸೆಪ್ಟಂಬರ್ 5 ರಂದು ರಾಜ್ಯ ಸಭೆಯಲ್ಲೂ ಪಾಸುಮಾಡಿಸಿಕೊಳ್ಳಬೇಕು ಎಂದು ರಾಜೀವ್ ಸರ್ಕಾರದ ಹಂಚಿಕೆಯಿದ್ದಿರಬೇಕು. ಆದರೆ ಲೋಕಸಭೆಯಲ್ಲಿ ವಿರೋಧ ಪಕ್ಷಗಳು ಇದಕ್ಕೆ ತೀವ್ರ ಪ್ರತಿಭಟನೆ ವ್ಯಕ್ತಪಡಿಸಿ, ಸಭಾತ್ಯಾಗ ಮಾಡಿದರು. ಆದರೂ ಸರ್ಕಾರ ವಿರೋಧವನ್ನು ನಿರ್ಲಕ್ಷಿಸಿ ಮರುದಿನ ಅದನ್ನು ಪಾಸುಮಾಡಿಸಿಕೊಂಡಿತು. ಇಷ್ಟೊಂದು ತರಾತುರಿಯೇಕೆ ಎಂದು ಕೇಳಿದಾಗ ಎಂಟು ಗಂಟೆಗಳ ಚರ್ಚೆಗೆ ಅವಕಾಶ ನೀಡಿದೆವಲ್ಲಾ ಎಂಬ ಮೊಂಡು ಉತ್ತರ ಬಂತು. ಬಹುಶಃ ಆಗ ರಾಜೀವಗಾಂಧಿಯವರಿಗೆ ಮುಂಬರಲಿದ್ದ ಬಿರುಗಾಳಿಯ ಅಂದಾಜೂ ಇರಲಿಲ್ಲ.

[8ನೇ ಪುಟಕ್ಕೆ]

'ಭೂಮಿ ಕೊಡಿ, ನೀರು ಕೊಡಿ'

ಅ. 4ರಂದು ವಿಧಾನಸೌಧಕ್ಕೆ ರೈತರ ಲಗ್ಗೆ

ಅಕ್ಟೋಬರ್ 3 ರಿಂದ ಹತ್ತು ದಿನಗಳ ಕಾಲ ಮಾತ್ರ ನಡೆಯಲಿರುವ ಸಂಕ್ಷಿಪ್ತ ಅಧಿವೇಶನವನ್ನು ರಾಜ್ಯದ ನೀರಾವರಿ ಸಮಸ್ಯೆಯ ಪರಿಹಾರಕ್ಕಾಗಿ ಮೀಸಲಿಡುತ್ತೇವೆಂದು ಮುಖ್ಯಮಂತ್ರಿಯವರು ಘೋಷಿಸಿದ್ದಾರೆ. ರಾಜ್ಯ ರೈತರ ಪ್ರಮುಖ ಪ್ರಶ್ನೆಗಳಲ್ಲೊಂದನ್ನು ಚರ್ಚಿಸಲಿರುವ ಈ ಅಧಿವೇಶನ ಸ್ವಾಗತಾರ್ಹ.

ರಾಜ್ಯದ ರೈತರ ಸಮಸ್ಯೆಗಳಿಗಾಗಿ ಇತ್ತೀಚೆಗೆ ತಾನೇ ರಾಜ್ಯಾದ್ಯಂತ ಪ್ರಬಲ ಚಳುವಳಿ ಹೂಡಿ ಬಂಧನಕ್ಕೊಳಗಾದ ಕರ್ನಾಟಕದ ರೈತರು ಅಕ್ಟೋಬರ್ 4 ರಂದು ವಿಧಾನಸೌಧಕ್ಕೆ ನಮಗೆ ಭೂಮಿ ಕೊಡಿ ನೀರು ಕೊಡಿ ಎಂಬ ಬೇಡಿಕೆಯನ್ನು ರಾಜ್ಯದ ಜನತೆಯ ಮುಂದಿಡಲು ಧಾವಿಸಿ ಬರಲಿದ್ದಾರೆ.

ಪ್ರಾಂತ ರೈತಸಂಘದ ಪದಾಧಿಕಾರಿಗಳ ಸಭೆಯಲ್ಲಿ ಸಿ ಮತ್ತು ಡಿ ಭೂಮಿ ಪ್ರಶ್ನೆ ಕುರಿತು ಚರ್ಚಿಸಿ ಈ ಭೂಮಿ ಸಾಗುವಳಿದಾರರಿಗೆ ಪಟ್ಟಾ ಕೊಡಬೇಕೆಂದು ಪ್ಲಾಂಟೇಷನ್ ಮಾಲೀಕರಿಂದ ಅತಿಕ್ರಮಣ ಮಾಡಿದ ಭೂಮಿಯನ್ನು ವಾಪಸ್ಸು ಪಡೆದ ಭೂರಹಿತರಿಗೆ ಹಂಚಲು ಒತ್ತಾಯಿಸಿ ಅಕ್ಟೋಬರ್ 3 ರಂದು ಪ್ರಾರಂಭವಾಗುವ ರಾಜ್ಯ ವಿಧಾನಸಭೆ ಅಧಿವೇಶನದ ಸಂದರ್ಭದಲ್ಲಿ ಅಕ್ಟೋಬರ್ 4ರಂದು ವಿಧಾನಸೌಧಕ್ಕೆ ರೈತರ ಬೃಹತ್ ರ‍್ಯಾಲಿಯೊಂದನ್ನು ನಡೆಸಲು ನಿರ್ಧರಿಸಲಾಯಿತು. ರಾಜ್ಯದ ಎಲ್ಲಾ ಕಡೆಗಳಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಅಕ್ಟೋಬರ್ 3 ರಂದೆ ರೈಲ್ವೆ ನಿಲ್ದಾಣದಲ್ಲಿ ಬಂದು ಸೇರಬೇಕೆಂದು ಕರೆ ನೀಡಿತು.

ಸೆಪ್ಟೆಂಬರ್ ಚಳುವಳಿಯಲ್ಲಿ ಭಾಗವಹಿಸಿದ ಎಲ್ಲಾ ಘಟಕಗಳು ಈ ಚಳುವಳಿಯಲ್ಲಿ ತಮಗಾದ ಅನುಭವ, ಭಾಗವಹಿಸಿದ ವಿವರವನ್ನೊಳಗೊಂಡ ವಿವರವಾದ ವರದಿಯನ್ನು ರಾಜ್ಯಸಮಿತಿಗೆ ಕಳುಹಿಸಬೇಕೆಂದು ವಿನಂತಿಸಿದೆ.

ಐಕ್ಯತೆಯ ತರಾತುರಿಯಲ್ಲಿ ಜನತಾ ಅನೈಕ್ಯತೆ

ನಿಜವಾದ ಬದಲಿಯ ಅಗತ್ಯ

—ಕಾ॥ ಹರಿಕಿಶನ್‌ಸಿಂಗ್ ಸುರ್ಜೀತ್

ಇತ್ತೀಚೆಗೆ ಪ್ರಮುಖ ದಿನಪತ್ರಿಕೆಗಳು ಜನತಾ ಬಿಕ್ಕಟ್ಟು ಬಗ್ಗೆ ಬರೆಯುತ್ತಾ, ರಾಜೀವಗಾಂಧಿಗೆ ಬದಲಿ ಒದಗಿಸುವ ಬದಲು ಅನೈಕ್ಯತೆ ಹೆಚ್ಚಾಗುತ್ತಿದೆ ಎಂದು ಒತ್ತಿ ಹೇಳುತ್ತಿವೆ. ಸೆಪ್ಟೆಂಬರ್ 23 ರಂದು ಅಜಿತ್‌ಸಿಂಗ್ ಕರೆದಿರುವ ಸಮಾವೇಶ ಮತ್ತು ಸೆಪ್ಟೆಂಬರ್ 30 ರಂದು ರಾಮಕೃಷ್ಣ ಹೆಗಡೆ ಮತ್ತಿತರ ನಾಯಕರು ಕರೆದಿರುವ ಸಮಾವೇಶ ರಾಜಕೀಯ ಬೆಳವಣಿಗೆಗಳಿಗೆ ದಿಕ್ಸೂಚಿಯಾಗಿದೆ. ವಿರೋಧ ಪಕ್ಷಗಳ ಐಕ್ಯತೆಯ ಬದಲು ಪ್ರತಿ ವಿರೋಧ ಪಕ್ಷದೊಳಗೆ ಅನೈಕ್ಯತೆ ಹೆಚ್ಚುತ್ತಿದೆ. ಇಂತಹುದೇ ಸಮಸ್ಯೆ ಲೋಕದಳದ ಒಳಗೆ ಇದೆ. ಶ್ರೀ ದೇವಿಲಾಲ್ ಮತ್ತು ಶ್ರೀ ಬಹುಗುಣರ ನಡುವಿನ ಭಿನ್ನಾಭಿಪ್ರಾಯ ಜನತಾ ಬಿಕ್ಕಟ್ಟಿಗಿಂತಲೂ ಹಳೆಯದು.

ಇದೆಲ್ಲಾ ನಡೆಯುತ್ತಿರುವುದು ರಾಜೀವ ಗಾಂಧಿ ಸರ್ಕಾರದ ಆರ್ಥಿಕ ನೀತಿಗಳು, ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಹೆಬ್ಬಾಗಿಲು ತೆರೆಯುವ ಮತ್ತು, ಅದಕ್ಕಾಗಿ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಆಕ್ರಮಣ ಮಾಡಲು ಹೊಸದ ನೀತಿಗಳಿಂದ ರೋಸಿಹೋಗಿ, ಅದನ್ನು ಕಿತ್ತುಹಾಕಲು ವಿರೋಧ ಪಕ್ಷಗಳ ಐಕ್ಯತೆ ಬಗ್ಗೆ ಜನತೆ ಅತೀವ ಆಸಕ್ತಿ ತೋರಿಸುತ್ತಿರುವ ಈಗಿನ ಕಾಲ ಘಟ್ಟದಲ್ಲಿ. ಇತ್ತೀಚೆಗೆ ಸರ್ಕಾರ ತಂದಿರುವ ಮಾನಹಾನಿ ಮಸೂದೆ ಮತ್ತು ಅದಕ್ಕೆ ವ್ಯಕ್ತವಾಗಿರುವ ವ್ಯಾಪಕ ವಿರೋಧ ಮುಂಬರುವ ಘಟನೆಗಳ ಮುನ್ಸೂಚನೆ. ಸರ್ಕಾರ ತನ್ನ ಕುಕೃತ್ಯಗಳನ್ನು ಮುಚ್ಚಿಕೊಳ್ಳಲು ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲು ಹಿಂದೆ ಮುಂದೆ ನೋಡುವುದಿಲ್ಲ. ಅದರ ಜೊತೆಗೆ ರಾಜಕೀಯ ಪಕ್ಷದ ಭೇದವಿಲ್ಲದೆ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಿಸಲು ಜನತೆ ಕಟಿಬದ್ಧವಾಗಿರುವುದು ಅಷ್ಟೇ ಸ್ಪಷ್ಟವಾಗಿ ಕಂಡುಬರುತ್ತದೆ. ಈ ಮಸೂದೆಗೆ ಕಾಂಗ್ರೆಸ್ ಬೆಂಬಲಿಗರೂ ಮತ್ತು ಹಿರಿಯ ನಾಯಕರೂ ತೀವ್ರ ವಿರೋಧ ವ್ಯಕ್ತಪಡಿಸಿರುವುದು ಗಮನಾರ್ಹ. ಮಸೂದೆಯ ವಿರುದ್ಧ ಜನತಾ ಚಳುವಳಿ ವ್ಯಾಪಕವಾಗಿ ರೂಪುಗೊಳ್ಳುತ್ತಿದ್ದು ಇದನ್ನು ಹಿಂತೆಗೆದುಕೊಳ್ಳದೆ ಸರ್ಕಾರಕ್ಕೆ ಬೇರೆ ಮಾರ್ಗವೇ ಉಳಿದಿಲ್ಲ.

ಲೋಕಸಭೆ ಮತ್ತು ವಿಧಾನಸಭೆ ಮರು ಚುನಾವಣೆಗಳ ಫಲಿತಾಂಶ ಕಾಂಗ್ರೆಸ್ ಸರ್ಕಾರದ ವಿರುದ್ಧ ಇರುವ ಅತೃಪ್ತಿಯನ್ನು ಹೊರಗೆಡವಿದೆ. ಎಲ್ಲಾ ದುಡಿಯುವ ಜನವಿಭಾಗಗಳು ತಮ್ಮ ಹಿತಾಸಕ್ತಿಗಳನ್ನು ಕಾಪಾಡಲು ಸಮರಶೀಲ ಹೋರಾಟದಲ್ಲಿ ತೊಡಗಿವೆ. ಇದನ್ನು ಹಾಳುಗೆಡವಲು ಸಾಮ್ರಾಜ್ಯಶಾಹಿ ಕುಮ್ಮಕ್ಕಿನಿಂದ ಹರಡುತ್ತಿರುವ ವಿಚ್ಛಿದ್ರಕಾರಿ ಕೋಮುವಾದಿ ಚಟುವಟಿಕೆಗಳೂ ತೊಡಗಿವೆ.

ಈ ಸಂದರ್ಭದಲ್ಲಿ ನಮ್ಮ ಪಕ್ಷ, ಸಿ.ಪಿ.ಐ (ಎಂ), ಎಡ ಮತ್ತು ಜಾತ್ಯಾತೀತ ಪಕ್ಷಗಳ ಐಕ್ಯತೆ ಆಧಾರದ ಮೇಲೆ ರಾಜೀವ ಗಾಂಧಿಗೆ ಬದಲಿ ಸರ್ಕಾರ ರಚಿಸುವ ಘೋಷಣೆಯನ್ನು ಜನತೆಯ ಮುಂದಿಟ್ಟಿದೆ. ಈ ಹಿನ್ನೆಲೆಯಲ್ಲಿ ಕೆಲವು ವಿರೋಧ ಪಕ್ಷಗಳು ವಿಲೀನವಾಗುವ ಬಗ್ಗೆ ಮಾತುಕತೆ ನಡೆಸುವುದು ಒಳ್ಳೆಯ ಬೆಳವಣಿಗೆ ಎಂದು ನಾವು ಸ್ವಾಗತಿಸಿದೆವು. ಆದರೆ ಈ ವಿಲೀನದ ತರಾತುರಿ ಇನ್ನಷ್ಟು ಅನೈಕ್ಯತೆಗೆ ಮಾತ್ರ ಎಡೆ ಕೊಟ್ಟಿರುವುದನ್ನು ನಾವು ಕಾಣುತ್ತೇವೆ.

ಜುಲೈ 26 ರಂದು ನಾಲ್ಕು ರಾಷ್ಟ್ರೀಯ ಪಕ್ಷಗಳು ವಿಲೀನವಾಗಿ ರಚಿತವಾದ ಪಕ್ಷದ

(8ನೇ ಪುಟಕ್ಕೆ)

ಕರ್ನಾಟಕಕ್ಕೆ ಕಳಂಕ ತರುವ ಘಟನೆಗಳು

ಬೀದರ್‌ನಲ್ಲಿ ಇತ್ತೀಚೆಗೆ ಗಣೇಶ ಚತುರ್ಥಿ ಸಮಾರಂಭದ ವೇಳೆ ನಡೆದ 'ಸಿಖ್ ವಿದ್ಯಾರ್ಥಿಗಳ' ಮೇಲೆ ನಡೆದ ದೌರ್ಜನ್ಯವು ಕರ್ನಾಟಕ ರಾಜ್ಯಕ್ಕೆ ಕಳಂಕ ತರುವ ಘಟನೆಯಾಗಿದೆ.

ಇಂದಿರಾಗಾಂಧಿ ಕೊಲೆಯ ಹಿನ್ನೆಲೆಯಲ್ಲಿ ದಿಲ್ಲಿಯನ್ನು ದೇಶದ ಉತ್ತರ ಭಾಗದಲ್ಲಿ ಹಲವಾರು ರಾಜ್ಯಗಳಲ್ಲಿ ಸಾವಿರಾರು ಮಂದಿ ಸಿಖ್‌ರ ಕೊಲೆಯಾದ ಸಂದರ್ಭದಲ್ಲೂ ಸಂಯಮ ತೋರಿಸಿದ ಕರ್ನಾಟಕದಲ್ಲಿ ಇದೀಗ ಬೀದರ್‌ನಲ್ಲಿ ಸಂಭವಿಸಿದ ಘಟನೆಗಳು ತೀರಾ ಹೇಯ ಮತ್ತು ಖಂಡನೀಯ.

ಹತ್ತಾರು ವರ್ಷಗಳಿಂದ ಶಾಂತ ರೀತಿಯಲ್ಲಿ ಕನ್ನಡಿಗರೊಡನೆ ಬೆರತು ಜೀವನ ಮಾಡುತ್ತಿದ್ದ ಸಿಖ್ ವಿದ್ಯಾರ್ಥಿಗಳ ಮೇಲೆ ಅವರು ನಡೆಸುತ್ತಿರುವ ಎಂಜಿನಿಯರಿಂಗ್ ಕಾಲೇಜು ಪ್ರಿನ್ಸಿಪಾಲ್ ಮತ್ತಿತರರ ಮೇಲೆ ನಡೆದ ಅಮಾನುಷ ದಾಳಿ, ಹತ್ಯೆ, ಕೊಲೆ, ಮನೆ ಸುಡುವಿಕೆ ಇತ್ಯಾದಿ ಅಮಾನುಷ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕರ್ನಾಟಕ ಘಟಕವು ಈ ಘಟನೆಗಳನ್ನು ತೀವ್ರವಾಗಿ ಖಂಡಿಸುತ್ತದೆ ಎಂದು ರಾಜ್ಯ ಕಾರ್ಯದರ್ಶಿ ಕಾ॥ ಪಿ. ರಾಮಚಂದ್ರ ರಾವ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

[8ನೇ ಪುಟಕ್ಕೆ]

ಮಾನಹಾನಿ ಮಸೂದೆ ಕುರಿತು ಸಂಕಿರಣ

'ಮಾನಹಾನಿ ಮಸೂದೆ ಪ್ರಜಾಪ್ರಭುತ್ವದ ಮೇಲಿನ ಹಲ್ಲೆ'

'ಮಾನಹಾನಿ ಮಸೂದೆ ಎಂಬುದು ಹಿಂಬಾಗಿಲಿನ ಮೂಲಕ ತುರ್ತುಪರಿಸ್ಥಿತಿಯನ್ನು ಮತ್ತೆ ಹೇರುವ ತಂತ್ರ. ಈ ಮಸೂದೆ ತಂದಿರುವುದರ ಹಿಂದೆ ಆಳವಾದ, ಗಹನವಾದ ಸಂಚಿದೆ. 59 ನೇ ತಿದ್ದುಪಡಿಯ ಮುಂದುವರಿಕೆ ಈ ಮಾನಹಾನಿ ಮಸೂದೆ' ಎಂದು ವಿವಿಧ ಕ್ಷೇತ್ರಗಳ ಗಣ್ಯರು ಒಮ್ಮತ ಅಭಿಪ್ರಾಯ ನೀಡಿದರು.

ಬೆಂಗಳೂರಿನ ಸೆನೆಟ್ ಹಾಲ್‌ನಲ್ಲಿ ಸ್ವಾತಿ ಸಿಂಡಿಕೇಟ್ಸ್ ಸುದ್ದಿ ಬರಹಗಳ ಸಂಸ್ಥೆ ಮಾನಹಾನಿ ಮಸೂದೆ ಕುರಿತು ಏರ್ಪಡಿಸಿದ್ದ ಸಂಕಿರಣ-ಸಂವಾದದಲ್ಲಿ ಪಾಲ್ಗೊಂಡಿದ್ದ ಲಂಕೇಶ್ ಪತ್ರಿಕೆಯ ಸಂಪಾದಕ ಪಿ. ಲಂಕೇಶ್, ವಿಧಾನ ಪರಿಷತ್ ಸದಸ್ಯ, ಕಾಂಗ್ರೆಸ್‌ನ ಎ. ಕೆ. ಸುಬ್ಬಯ್ಯ, ಕರ್ನಾಟಕ ಪತ್ರಿಕಾ ಅಕಾಡೆಮಿಯ ಅಧ್ಯಕ್ಷ ಜಿ. ನಾರಾಯಣ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಎಸ್ ಸೂರ್ಯನಾರಾಯಣರಾವ್, ವಕೀಲ ಸಿ. ಹೆಚ್. ಹನುಮಂತರಾಯ ಹಾಗೂ ವಿಷಯವನ್ನು ಪ್ರಸ್ತಾಪಿಸಿದ ಬೆಂಗಳೂರು ವಿಶ್ವವಿದ್ಯಾಲಯದ ಸಿ. ವೀರಣ್ಣ ಮಾನಹಾನಿ ಮಸೂದೆಯನ್ನು ಈ ತಕ್ಷಣವೇ ಕೈಬಿಡಬೇಕೆಂದು ಒತ್ತಾಯಿಸಿದರು.

ಮಸೂದೆಯನ್ನು ಅತ್ಯಂತ ತರಾತುರಿಯಲ್ಲಿ ಮಂಡಿಸಿ ಅನುಮೋದನೆ ಪಡೆಯುವಲ್ಲಿ ವಿಫಲರಾದ ರಾಜೀವಗಾಂಧಿಯವರು ತುರ್ತುಪರಿಸ್ಥಿತಿಯನ್ನು ಮತ್ತೆ ಹೇರಲು ಈ ಮಸೂದೆಯ ಮೂಲಕ ಪ್ರಯತ್ನ ಪಡುತ್ತಿದ್ದಾರೆ. ಪಂಜಾಬ್‌ನಲ್ಲಿ ತಂದಂತಹ 59 ನೇ ತಿದ್ದುಪಡಿ ಮತ್ತು ಅದೇ ದಿಕ್ಕಿನಲ್ಲಿ ಸಾಗುವ ಕೈಗಾರಿಕಾ ಸಂಬಂಧ ಮಸೂದೆ ಹಾಗೂ ಕಾರ್ಮಿಕ ಸಂಘಟನೆ ತಿದ್ದುಪಡಿ, ಆಸ್ಪತ್ರೆ, ಶಿಕ್ಷಣ ಸಂಬಂಧಗಳ ಮಸೂದೆಯ ಮುಂದುವರಿದ ಭಾಗ ಎಂದು ಹೇಳುತ್ತಾ ಪತ್ರಿಕೆಗಳು ರಾಜೀವಗಾಂಧಿಯವರ ಹಾಗೂ ಆಡಳಿತ ಪಕ್ಷದ ಹುಳುಕುಗಳನ್ನು, ಭ್ರಷ್ಟಾಚಾರವನ್ನು ಹೆಚ್ಚು ಹೆಚ್ಚು ಬಯಲಿಗೆಳೆಯುತ್ತಿದೆ. ಬೋಫೋರ್ಸ್, ಫೇರ್‌ಫ್ಯಾಕ್ಸ್‌ಗಳಾದಿಯಾಗಿ ರಾಜೀವ್‌ಗಾಂಧಿಯವರ ಭ್ರಷ್ಟಾಚಾರ ಪತ್ರಿಕೆಗಳ ಮೂಲಕ ಬಯಲಿಗೆ ಬಿದ್ದಿದೆ. ಆದರಿಂದಾಗಿ ಪ್ರಜಾಪ್ರಭುತ್ವದ ನಿಜ ಮೌಲ್ಯಗಳನ್ನು ಎತ್ತಿಹಿಡಿಯುವ ಪತ್ರಿಕೆಗಳ ಮೇಲೆ ಅಂಕುಶಗಳ ಹೇರಲು ರಾಜೀವ್‌ಗಾಂಧಿ ಯತ್ನಿಸುತ್ತಿದ್ದಾರೆ ಎಂದು ಬಣ್ಣಿಸಿದರು.

ಮಾನಹಾನಿ ಮಸೂದೆ ಎಂಬುದು ಮೇಲು ನೋಟಕ್ಕೆ ಪತ್ರಿಕೆಗಳ, ಪತ್ರಕರ್ತರ ವಿರುದ್ಧವಾದರೂ ಇದು ಆಳದಲ್ಲಿ ಪ್ರತಿಯೊಬ್ಬ ನಾಗರೀಕನ ಅಭಿಪ್ರಾಯ ಸ್ವಾತಂತ್ರ್ಯವನ್ನು ಹೊಸಕಿ ಹಾಕುವ ಮಸೂದೆ. ಈ ಮಸೂದೆ ಜಾರಿಗೆ ಬರಲು ಅವಕಾಶ ಮಾಡಿಕೊಟ್ಟಲ್ಲಿ, ನಂತರ ನಾಗರೀಕರ ಮೇಲೆ ಗದಾಪ್ರಹಾರ ಮಾಡುವ ಮತ್ತೊಂದು ಮಸೂದೆ ಜಾರಿಗೆ ಬಂದರೂ ಆಶ್ಚರ್ಯವಿಲ್ಲ ಎಂದರು.

ಈ ಮಾನಹಾನಿ ಮಸೂದೆ ಎಷ್ಟು ಕೆಡುಕಾದದ್ದು ಇದರ ಆಳವಾದ ಉದ್ದೇಶ ಏನು ಎಂಬುದು ಪ್ರತಿಯೊಬ್ಬ ನಾಗರೀಕರಿಗೂ ಗೊತ್ತಾಗುವ ಕೆಲಸವಾಗಬೇಕು. ಈ ಎಚ್ಚರ ಪ್ರಜ್ಞೆ ಕೇಂದ್ರ ಸರಕಾರದ ವಿರುದ್ಧ ಜನಾಭಿಪ್ರಾಯವನ್ನು ಉಂಟು ಮಾಡಿದರೆ ಮಸೂದೆಯಿರಲಿ ರಾಜೀವ್ ಗಾಂಧಿಯವರ ಎಲ್ಲಾ ಕರಾಳ ಮಸೂದೆಗಳನ್ನೂ ಇಲ್ಲವಾಗಿಸಬಹುದು ಎಂದರು.

ಬೋಫೋರ್ಸ್‌ನಂಥ ಅನ್ಯವಹಾರಗಳಿರಲಿ, ದಿನನಿತ್ಯ ಸಾಮಾನ್ಯಜನತೆ ಎದುರಿಸುವ ಲಂಚ, ಭ್ರಷ್ಟಾಚಾರದ ಪ್ರಕರಣಗಳನ್ನು ಬರೆಯಲು ಅವಕಾಶ ನೀಡಿದ ಈ ಮಸೂದೆಯಿಂದ ಪತ್ರಿಕೆಗಳಿಗಿಂತಲೂ ನೇರವಾಗಿ ಜನಸಮುದಾಯಕ್ಕೆ ಹಾನಿಯಾಗುತ್ತದೆ. ಇಂತಹ ಮಸೂದೆ ಜನರ ಕೈಯ ಕೋಳ, ನಾಲಿಗೆಗೆ ಕತ್ತರಿ. ಆದ್ದರಿಂದ ನಾಗರೀಕರು ಹೆಚ್ಚು ಹೆಚ್ಚಾಗಿ ಈ ಮಸೂದೆಯ ವಿರುದ್ಧ ಎದ್ದು ಬರಬೇಕು' ಎಂದರು.

'ಮಾನಹಾನಿಯಾಗದಂತೆ ರಕ್ಷಣೆ ನೀಡಲು ಈಗಾಗಲೆ ಸಾಕಷ್ಟು ಕಾನೂನುಗಳಿರುವಾಗ ಹೊಸತೊಂದು ಕಾನೂನಿನ ಅವಶ್ಯಕತೆ ಇರಲಿಲ್ಲ' ಎಂದ ಕಾಂಗ್ರೆಸ್‌ನ ಎ. ಕೆ. ಸುಬ್ಬಯ್ಯ ದಡ್ಡರ ಅಭಿಪ್ರಾಯದ ಈ ಮಸೂದೆಯನ್ನು ಕೇಂದ್ರ ಸರ್ಕಾರ ಕೂಡಲೇ ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತಲೇ ಈ ಮಸೂದೆ ಪತ್ರಿಕೆಗಳ ಸ್ವಾತಂತ್ರ್ಯವನ್ನು ಹರಣಮಾಡುತ್ತದೆ ಎಂಬ ವಾದ ತಮಗೆ ಅರ್ಥವಾಗಿಲ್ಲ ಎನ್ನುತ್ತಾ ಯಾರ ಮಾನಹಾನಿ ಆಗಿರುತ್ತದೋ ಅವರು ನ್ಯಾಯಾಲಯಕ್ಕೆ ಹೋಗುತ್ತಾರೆ ಕೇಂದ್ರ ಸರ್ಕಾರವೇನೂ ಹೋಗುವುದಿಲ್ಲವಲ್ಲ ಎಂದರು.

ಈ ಸಂದರ್ಭದಲ್ಲಿ ಎ. ಕೆ. ಸುಬ್ಬಯ್ಯನವರ ಮಾತುಗಳ ವಿರುದ್ಧ ಪ್ರೇಕ್ಷಕರಿಂದ ಪ್ರತಿಭಟನೆ ವ್ಯಕ್ತವಾಯಿತು. ಪತ್ರಿಕಾ ಸ್ವಾತಂತ್ರ್ಯಕ್ಕೆ ಧಕ್ಕೆ ತಾರದ, ತುರ್ತುಪರಿಸ್ಥಿತಿಯ ಭೀತಿ ಹುಟ್ಟಿಸದ ಮಸೂದೆ ಇದು ಎಂದ ಎ. ಕೆ. ಸುಬ್ಬಯ್ಯನವರನ್ನು ನಂತರದ ಎಲ್ಲಾ ಭಾಷಣಕಾರರೂ ಟೀಕಿಸಿದರಲ್ಲದೆ ಮಾನಹಾನಿ ಮಸೂದೆ ಹೇಗೆ ತುರ್ತುಪರಿಸ್ಥಿತಿಗೆ ನೇರವಾಗಿ ಹಾದಿ ಮಾಡುತ್ತದೆ ಎಂಬುದನ್ನು ಎಳೆ ಎಳೆಯಾಗಿ ಬಿಡಿಸಿದರು.

ಸರ್ಕಾರ ಮತ್ತು ಪತ್ರಿಕೋದ್ಯಮದ ನಡುವಿನ ಹೋರಾಟ ಇದಾದರೆ ಮಸೂದೆಯನ್ನು ವಾಪಸು ಪಡೆಯಬೇಕು. ಇದರ ಬದಲಿಗೆ ಪತ್ರಿಕಾ ಸ್ವಾತಂತ್ರ್ಯ ಹಾಗೂ ನಾಗರಿಕ ಸ್ವಾತಂತ್ರ್ಯದ ನಡುವಿನ ಹೋರಾಟ ಇದು ಎನ್ನುವುದಾದರೆ ನಾಗರಿಕ ಸ್ವಾತಂತ್ರ್ಯವೇ ಗೆಲ್ಲಬೇಕು ಮತ್ತು ಮಸೂದೆ ಇರಬೇಕು ಎನ್ನುತ್ತಾ, ಪತ್ರಿಕೆ ಅತ್ಯಂತ ಪ್ರಬಲ ಮಾಧ್ಯಮ ಮಾಡಬಾರದ್ದನ್ನು ಮಾಡಲು ಸ್ವಾತಂತ್ರ್ಯ ಬೇಕು ಎಂದು ಪತ್ರಿಕೆಗಳು ಕೇಳಿದರೆ ಅದನ್ನು ಕೊಡಲಾಗದು ಎನ್ನುತ್ತಾ, ಎ. ಕೆ. ಸುಬ್ಬಯ್ಯ ತಮ್ಮ ಇದೇ ಭಾಷಣದಲ್ಲಿ ತಮ್ಮ ಇಬ್ಬಂದಿತನವನ್ನು ವ್ಯಕ್ತಪಡಿಸಿದರು.

ಮಸೂದೆಯ ಎಲ್ಲಾ ವಿವರಗಳನ್ನು ಚರ್ಚಿಸಿದ ವಕೀಲ ಸಿ. ಹೆಚ್. ಹನುಮಂತರಾಯರು ಈ ಮಸೂದೆ ಜಾರಿಗೆ ಬಂದಲ್ಲಿ ಇರುವ ದಾರಿ ಎರಡೇ. ಪತ್ರಕರ್ತರೆಲ್ಲ ಹೊಗಳುಭಟ್ಟರಾಗಬೇಕು ಇಲ್ಲವೇ ಕೋಳತೊಟ್ಟು ಜೈಲು ಸೇರಬೇಕು ಎಂದರು. ಸರ್ಕಾರ ತನ್ನ ಪರವಾದ ಫಿರ್ಯಾದಿಗಳಿಗೆ ರಕ್ಷಣೆ ನೀಡಲೆಂದು ಜಾರಿಗೆ ತರಲು ಪ್ರಯತ್ನಿಸುತ್ತಿರುವ ಈ ದುರುದ್ದೇಶಪೂರಿತ ಮಸೂದೆಯನ್ನು ಪುನಃ ಯೋಚಿಸದೆ ಹಿಂದೆಗೆದುಕೊಳ್ಳಬೇಕೆಂದು ಒತ್ತಾಯಿಸಿ ಈ ನಿಟ್ಟಿನಲ್ಲಿ ಪತ್ರಕರ್ತರಿಗೆ ವಕೀಲರೆಲ್ಲರ ಬೆಂಬಲ ಇದೆಯೆಂದು ಪ್ರಕಟಿಸಿದರು.

ನಿಧಾನ ವಿಷದಂತೆ ಒಂದೊಂದೇ ಪತ್ರಿಕೆಯನ್ನು ಈ ಮಸೂದೆ ಬಲಿತೆಗೆದುಕೊಳ್ಳುತ್ತಾ ಹೋಗುತ್ತದೆ ಎಂದ ಹನುಮಂತರಾಯರು ಆಗ ಉಳಿಯುವುದು ರಾಜೀವರ ತುತ್ತೂರಿ ನ್ಯಾಷನಲ್ ಹೆರಾಲ್ಡ್ ಒಂದೇ ಎಂದರು. ದೇಶದ ಯಾವುದೇ ನ್ಯಾಯಾಲಯದಲ್ಲಾದರೂ ಮೊಕದ್ದಮೆ ಹೂಡಬಹುದು. ಸಮ್ಮರಿ ಟ್ರಾಯಲ್‌ನಲ್ಲಿ ಇನ್‌ಕ್ಯಾಮೆರಾ ವಿಚಾರಣೆಯಾಗಬೇಕು. ಮೊದಲ ಸಮನ್ಸ್‌ನಲ್ಲೇ ಆಪಾದಿತ ತನ್ನ ಪರವಾದ ಎಲ್ಲಾ ಸಾಕ್ಷ್ಯಾಧಾರಗಳನ್ನು ನ್ಯಾಯಾಲಯಕ್ಕೆ ಒಪ್ಪಿಸಬೇಕು ಎಂಬ ಅಂಶಗಳು ಪತ್ರಕರ್ತರನ್ನು ಬಲಿತೆಗೆದುಕೊಳ್ಳಲು ಇರುವ ಅಂಶಗಳು ಎಂದರು. ಈ ಮಸೂದೆಯ ಮೂಲ ದೋಷವೇ ಪತ್ರಿಕೆಗಳ ವಿರುದ್ಧ ಸುಳ್ಳು ದೂರು ಸಲ್ಲಿಸಿದ ಪಿರ್ಯಾದಿಗೆ ಯಾವ ಶಿಕ್ಷೆ ಕೊಡಬೇಕು ಎಂಬ ಅಂಶವೇ ಈ ಮಸೂದೆಯಲ್ಲಿಲ್ಲ. ಸರ್ಕಾರ ಈ ಮಸೂದೆ ತರುವುದಕ್ಕಿಂತ ಮುಂಚೆಯೇ ಪಿರ್ಯಾದಿ ಯಾರು, ಆರೋಪಿ ಯಾರು ಎಂಬುದನ್ನು ಯೋಚಿಸಿ ತಂದಂತಿದೆ ಎಂದರು.

ಕಾಂಗ್ರೆಸ್ ಪಕ್ಷದ ನಡವಳಿಕೆಗೆ ಈ ಮಸೂದೆ ಅನುಗುಣವಾಗಿದೆ ಎಂದು ಪತ್ರಿಕಾ ಅಕಾಡೆಮಿ ಅಧ್ಯಕ್ಷ ಜಿ. ನಾರಾಯಣ ಕಾಂಗ್ರೆಸ್ ಪಕ್ಷ ಸರ್ವಾಧಿಕಾರಿ ಪಕ್ಷ. ಆ ಪಕ್ಷದ ಮನಸ್ಥಿತಿಗೆ ಅನುಗುಣವಾಗಿ ಈ ಮಸೂದೆಯೂ ಇದೆ. ಈ ಮಸೂದೆ ಸತ್ಯವರನ್ನು ಕುರಿತು ಮಾತನಾಡಲೂ ಹಿಂದೆಗೆಯುವಂತೆ ಮಾಡುತ್ತದೆ ಎಂದು ಹೇಳಿ ಮಸೂದೆಯ ವಿರುದ್ಧ ಜನಾಭಿಪ್ರಾಯ ಬೆಳೆದು ಬರಬೇಕಾದ ಅವಶ್ಯಕತೆಯನ್ನು ಸಾರಿದರು.

'ಪ್ರಜಾಪ್ರಭುತ್ವಕ್ಕೆ ಕೊಡಲಿಪೆಟ್ಟು' ಎಂದು ಮಸೂದೆಯನ್ನು ಟೀಕಿಸಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಎಸ್. ಸೂರ್ಯನಾರಾಯಣರಾವ್, ಈ ಮಸೂದೆ ಕೇವಲ ಪತ್ರಿಕೆಗಳ ಬಾಯಿ ಮುಚ್ಚಿಸುವುದಲ್ಲ, ಯಾವುದೇ ಸಂಘ, ಸಂಸ್ಥೆ ಹಾಗೂ ಸಂಘಟನೆಯ ಪ್ರಕಟಣೆಗಳಿಗೂ [ಮುದ್ರಣಗೊಂಡ ಎಲ್ಲವೂ-ಹಸ್ತಪತ್ರಿಕೆ, ಕಿರುಪುಸ್ತಕ-ಎಲ್ಲವೂ ಸೇರುತ್ತದೆ] ಕಡಿವಾಣ ಹಾಕಲು ಯತ್ನಿಸುತ್ತದೆ ಎಂದು ಮಸೂದೆಯ ಮತ್ತೊಂದು ಗದಾಪ್ರಹಾರದ ಅಂಶವನ್ನು ಪರಿಚಯಿಸುತ್ತಾ '59ನೇ ತಿದ್ದುಪಡಿ, ಕೈಗಾರಿಕಾ ಸಂಬಂಧ ಮಸೂದೆ ಹಾಗೂ ಕಾರ್ಮಿಕ ಸಂಘಟನೆ ತಿದ್ದುಪಡಿ ಇವೆಲ್ಲವೂ ಸರ್ಕಾರದ ಅನ್ಯಾಯವನ್ನು ಮುಚ್ಚಿಡುವ ಕುಪ್ರಯತ್ನ' ಎಂದು ಹೇಳಿ ಈ ಮಸೂದೆ ಅಧಿಕಾರಶಾಹಿಯ ಮುನ್ಸೂಚನೆ ಎಂದರು.

ಸಂಕಿರಣದ ಆರಂಭದಲ್ಲಿ ಸಿ. ವೀರಣ್ಣ ವಿಷಯವನ್ನು ಪ್ರಸ್ತಾಪಿಸುತ್ತಾ, ದಿಢೀರಾಗಿ ಈ ಮಸೂದೆ ಜಾರಿಯಾಗಲು ಇದ್ದ ಸಂದರ್ಭವನ್ನು ವಿವರಿಸಿದರು.

ಇಡೀ ಸಂಕಿರಣ-ಸಂವಾದ ಅರ್ಥಪೂರ್ಣವಾಗಿದ್ದು ವಿವಿಧ ಕ್ಷೇತ್ರಗಳ ಜನರ ಅಭಿಪ್ರಾಯ ವಿನಿಮಯಕ್ಕೆ ಈ ಸಂಕಿರಣ ಕಾರಣವಾದದ್ದು ಎ. ಕೆ. ಸುಬ್ಬಯ್ಯನವರ ಬಂಡಾಯದ ಪೊಳ್ಳುತನ ಬಹಿರಂಗವಾದುದು ಸ್ವಾಗತಾರ್ಹ. ಸ್ವಾತಿ ಸಿಂಡಿಕೇಟ್ಸ್ ಏರ್ಪಡಿಸಿದ್ದ ಈ ಸಂಕಿರಣ

[6 ನೇ ಪುಟಕ್ಕೆ]

ಮಸೂದೆ ಕುರಿತು ಇ. ಎಂ. ಎಸ್.

'ಮಾನಹಾನಿ ಮಸೂದೆ ಪ್ರಜಾಪ್ರಭುತ್ವ ಹಕ್ಕುಗಳನ್ನು ಕಡಿತಗೊಳಿಸುವಂತಹದ್ದು. ಪತ್ರಿಕೆಗಳ ವಿರುದ್ಧ ಸೆನ್ಸಾರ್ ಹೇರಿದ ಕ್ರಮಗಳನ್ನು ರಾಜಾರಾಂ ಮೋಹನ್‌ರಾಯ್‌ರವರ ಕಾಲದಲ್ಲಿಯೇ ಪ್ರತಿಭಟಿಸಲಾಗಿತ್ತು. ಆದರೆ ಇಂದಿನ ಮಸೂದೆಯ ವಿರುದ್ಧದ ಪ್ರತಿಭಟನೆ ಬ್ರಿಟಿಷರ ಕಾಲದ ಸೆನ್ಸಾರ್‌ಷಿಪ್ ವಿರುದ್ಧದ ಪ್ರತಿಭಟನೆಯನ್ನೂ ಮೀರಿ ಮುಂದೆ ನಡೆದಿದೆ ಎಲ್ಲೆಡೆಗಳಿಂದಲೂ ಈ ಮಸೂದೆಯ ವಿರುದ್ಧ ಕೇಳಿಬರುತ್ತಿರುವ ಕೂಗು ಹಾಗೂ ಮೆರವಣಿಗೆ, ಧರಣಿಗಳು ಜನರು ತಮ್ಮ ಪ್ರಜಾಪ್ರಭುತ್ವ ಹಕ್ಕುಗಳನ್ನು ಹತ್ತಿಕ್ಕುವ ಯಾವುದೇ ಕ್ರಮದ ವಿರುದ್ಧ ನಡೆಸುತ್ತಿರುವ ಪ್ರತಿಭಟನೆ.

ಇದೀಗ ಎಲ್ಲೆಡೆ ಪ್ರಾರಂಭವಾಗಿರುವ ಈ ವ್ಯಾಪಕ ಪ್ರತಿಭಟನೆಯನ್ನು ಕಾರ್ಮಿಕ, ಭೂಹೀನ ಕೆಲಸಗಾರರು, ವಿದ್ಯಾರ್ಥಿಗಳು, ಹೆಂಗಸರು ರೈತರು ಹಾಗೂ ಮಧ್ಯಮವರ್ಗದವರು ಕೈಗೆತ್ತಿಕೊಂಡು ಈ ಮಸೂದೆಯನ್ನು ಸೋಲಿಸುವವರೆಗೂ ಹೋರಾಟ ನಡೆಸಬೇಕು.

ಈ ಮಸೂದೆ ರಾಜೀವ್‌ಗಾಂಧಿಯವರ ಸರ್ಕಾರ ಮುಳುಗಿದ್ದು, ಅವರ ಹತ್ತಿರದವರು ನಡೆಸುತ್ತಿದ್ದ ಭ್ರಷ್ಟಾಚಾರವನ್ನು ಪತ್ರಿಕೆಗಳು ಬಯಲಿಗೆಳೆದುದರ ಫಲವಾಗಿ ಸರ್ಕಾರ ಈ ನ್ಯೂನತೆಗಳನ್ನು ಮುಚ್ಚಿಹಾಕಲು ಪ್ರಯತ್ನಿಸಿ ವಿಫಲವಾಗಿ ಇದೀಗ ಇಡೀ ಪತ್ರಿಕೆಗಳ ಬಾಯನ್ನೇ ಮುಚ್ಚಿಸಲು ಈ ಕರಾಳ ಮಸೂದೆ ತಂದಿದೆ.

ಸರ್ಕಾರದ ಭ್ರಷ್ಟಾಚಾರ ನೀತಿಯನ್ನು ಬಯಲಿಗೆಳೆದದ್ದಕ್ಕಾಗಿ ಕಾಂಗ್ರೆಸ್ ಪದೇ ಪದೇ ಚುನಾವಣೆಗಳಲ್ಲಿ ಸೋಲುತ್ತಿದೆ. ತ್ರಿಪುರಾದಲ್ಲಿ ಚುನಾವಣೆಗಳಲ್ಲಿ ಸೋಲುತ್ತಿದ್ದುದಕ್ಕಾಗಿಯೇ ರಿಗ್ಗಿಂಗ್ ನಡೆಸಲಾಯಿತು. ಸರ್ಕಾರವನ್ನು, ರಾಜೀವರನ್ನು ಇನ್ನೂ ಹೆಚ್ಚು ಬಯಲಿಗೆಳೆಯುವುದು ಕಾಂಗ್ರೆಸ್ ಇನ್ನೂ ಹೆಚ್ಚು ಕುಸಿಯುವುದಕ್ಕೆ ಕಾರಣವಾಗುತ್ತಿದೆ. ಆದಕ್ಕಾಗಿಯೇ ಈ ಕರಾಳ ಮಸೂದೆಯೂ ಮಂಡಿಸಲ್ಪಟ್ಟಿದೆ.

ಪಿ. ಡಿ. ಸಂಪಾದಕೀಯ

ಪತ್ರಿಕೆ ಮತ್ತು ಪ್ರಜೆಗಳು

ಮಾನಹಾನಿ ವಿಧೇಯಕವನ್ನು ವಿರೋಧಿಸಿ ಸೆಪ್ಟೆಂಬರ್ 6 ರಂದು ನಡೆದ ಇಡೀ ದೇಶದ ಪತ್ರಿಕೆಗಳ ಹಾಗೂ ಪತ್ರಕರ್ತರ ಮುಷ್ಕರಕ್ಕೆ ಇಡೀ ಜನವರ್ಗ ಹೃತ್ಪೂರ್ವಕವಾಗಿ ಬೆಂಬಲಿಸಿದೆ. ಎಲ್ಲಾ ರಾಜಕೀಯ ಪಕ್ಷಗಳು, ಟ್ರೇಡ್ ಯೂನಿಯನ್‌ಗಳು, ರೈತ, ಕೃಷಿ ಕಾರ್ಮಿಕರ ಸಂಘಟನೆಗಳು ಹಾಗೂ ಮಧ್ಯಮ ವರ್ಗದ ನೌಕರರು ಪತ್ರಿಕೆಗಳ ಸ್ವಾತಂತ್ರ್ಯವನ್ನು ರಕ್ಷಿಸುವ ಕರೆಗೆ ಇಂಬಾಗಿದ್ದಾರೆ.

ಲೋಕಸಭೆಯಲ್ಲಿ ಮಾನಹಾನಿಮಸೂದೆಯನ್ನು ಮಂಡಿಸುವ ಮುಂಚೆಯೇ ಈ ಬಗ್ಗೆ ಸುದ್ದಿ ತಿಳಿದ ತಕ್ಷಣವೇ ಎಲ್ಲಾ ಜನವರ್ಗ ತಮ್ಮ ಹಕ್ಕುಗಳ ಮೇಲಿನ ಈ ಮತ್ತೊಂದು ಪ್ರಹಾರವನ್ನು ವಿರೋಧಿಸಿದ್ದಾರೆ. 1875ರ ತುರ್ತುಪರಿಸ್ಥಿತಿಯನ್ನು ಪುನಃ ಹೇರಲು ಪ್ರಯತ್ನಿಸಿದರೆ ಜನ ವರ್ಗ ಅದರ ವಿರುದ್ಧ ಎದ್ದು ನಿಲ್ಲುತ್ತದೆ, ಹೋರಾಡುತ್ತದೆ ಎಂಬುದು ಸ್ಪಷ್ಟವಾಗಿದೆ.

ಜನರ ಈ ಪ್ರತಿಭಟನೆಯಿಂದ ಹೆದರಿದ ರಾಜೀವ್ ರಾಜ್ಯಸಭೆಯಲ್ಲಿ ಮಂಡಿಸುವ ಧೈರ್ಯ ತೋರಿಸಿ ಆದಕ್ಕೆ ಅಭಿಪ್ರಾಯ ಸ್ವಾಗತಿಸಿ ತಿದ್ದುಪಡಿ ತರುತ್ತೇವೆ ಎಂದು ಹೇಳುತ್ತಲೇ 'ಮಸೂದೆ' ಸರಿಯಾದ ದಿಕ್ಕಿನಲ್ಲಿ ನಾವು ಹಾಕಿರುವ ಹೆಜ್ಜೆ ಎಂದು ಹೇಳುತ್ತಾ ಮಸೂದೆ ಓದದವರು ಅದನ್ನು ಪ್ರತಿಭಟಿಸುತ್ತಿದ್ದಾರೆ ಎಂದು ಕುಹಕವಾಡಿದ್ದಾರೆ.

ಹುದ್ದೆಗಳಲ್ಲಿಲ್ಲದ ಕಾಂಗ್ರೆಸ್‌ನ ನಾಯಕರೇ ರಾಜೀವರ ಈ ಹೆಜ್ಜೆಯನ್ನು ವಿರೋಧಿಸಿ ಮಸೂದೆಯನ್ನು ಮಂಡಿಸಿದರೆ ಕಾಂಗ್ರೆಸ್‌ನ ಚುನಾವಣಾ ಭವಿಷ್ಯ ಹಾಳಾಗುತ್ತದೆ ಎಂದಿದ್ದಾರೆ. 'ಹಿಂದು' ಪತ್ರಿಕೆ ಗುರುತಿಸಿರುವಂತೆ ಪಕ್ಷದಲ್ಲಿ ಪ್ರಮುಖರಾದವರು ಮಾತ್ರವೇ ಅಲ್ಲದ ರಾಜೀವರಿಗೆ ನಿಷ್ಠೆ ತೋರಿಸುತ್ತಿರುವ ಹಲವರು ಈ ಮಸೂದೆಯ ವಿರುದ್ಧ ಇರುವ ಭಿನ್ನಾಭಿಪ್ರಾಯವನ್ನು ಮುಂದಿಟ್ಟಿದ್ದಾರೆ'

ಕಮಲಾಪತಿ ತ್ರಿಪಾಠಿ, ಎಚ್. ಎನ್. ನಂಜೇಗೌಡ ಇದನ್ನು ಸಂವಿಧಾನ ಭಯೋತ್ಪಾದಕತೆ ಎಂದು ಕರೆದಿದ್ದಾರೆ. ಪತ್ರಿಕೆಗಳ ಮುಷ್ಕರದ ನಂತರ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿ ಸಭೆ ಸೇರಿದಾಗ ಪಕ್ಷವು ಈ ಮಸೂದೆಯನ್ನು ಜಾರಿಮಾಡಬಾರದೆಂದು ಹೇಳಿದೆ.

ಮುಂದಿನ ಚುನಾವಣೆಯ ಬಗ್ಗೆ ಭಯಪಡುತ್ತಾ ಕಾಂಗ್ರೆಸ್ ಅಭಿಪ್ರಾಯದಲ್ಲಿದ್ದಾರೆ. ರಾಜೀವ್‌ಗಾಂಧಿಯವರು ಕೆಲವು ತಿದ್ದುಪಡಿ ಮಾಡುವುದರೊಂದಿಗೆ ಈ ಮಸೂದೆ ಇರಬೇಕೆಂದು ಬಯಸಿದ್ದಾರೆ. ಸೆಪ್ಟೆಂಬರ್ 6 ರ ಮುಷ್ಕರದಲ್ಲಿ ಭಾಗವಹಿಸಿದ ಏಕೈಕ ಪತ್ರಿಕೆ, ನ್ಯಾಷನಲ್ ಹೆರಾಲ್ಡ್‌ನ ಬೆಳ್ಳಿಹಬ್ಬದಲ್ಲಿ ಮಾತನಾಡುತ್ತಾ ರಾಜೀವ್ ಪತ್ರಿಕೆಗಳು ಮಾಡುತ್ತಿರುವ ವ್ಯಕ್ತಿಯ ಮಾನಹಾನಿಯನ್ನು ಕುರಿತು ಹಲವಾರು ಉದಾಹರಣೆ ನೀಡಿದ್ದಾರೆ.

ಅಧಿಕಾರದಲ್ಲಿರುವವರ ನಡತೆಗಳನ್ನು ಬಯಲಿಗೆಳೆಯುವುದು ಪ್ರಜಾಪ್ರಭುತ್ವ ಸರಿಯಾದ ರೀತಿಯಲ್ಲಿ ಕೆಲಸ ಮಾಡಲು ಇರುವ ಅಗತ್ಯ ಮಾರ್ಗ. ಜವಾಹರಲಾಲ್ ನೆಹರು ಪ್ರಧಾನಿಯಾಗಿದ್ದಾಗ ಮುಂದ್ರಾ, ಕೈರನ್‌ಗಳು ಬಯಲಿಗೆಬಿದ್ದಿದ್ದಾರೆ. ಇದೀಗ

[6ನೇ ಪುಟಕ್ಕೆ]

ಪ್ರಜಾವಾಣಿ ಪತ್ರ

ಭಾರತೀಯ ಪತ್ರಿಕೋದ್ಯಮಿಗಳು ರಾಜೀವ್ ಗಾಂಧಿಯವರು ಮಂಡಿಸಲಿರುವ ಮಾನಹಾನಿ ಮಸೂದೆಯನ್ನು ವಿರೋಧಿಸಿ ಇತ್ತೀಚೆಗೆ ಪ್ರತಿಭಟನೆಯನ್ನು ಸಲ್ಲಿಸಿದರು.

ಇದನ್ನು ನೋಡಿದರೆ ಚರಿತ್ರೆಯಲ್ಲಿ ಓದಿದ 15ನೆಯ ಲೂಯಿಯು ನೆನಪಾಗುತ್ತಿದೆ. 15 ನೇ ಲೂಯಿ (1715 ರಿಂದ 1774) ತನ್ನ ಆಡಳಿತ ನೀತಿ ಕುರಿತು ಕೇಳುವ ಅಥವಾ ವಿರೋಧಿಸುವ ಹಕ್ಕನ್ನು ಯಾರಿಗೂ ನೀಡಿರಲಿಲ್ಲ. ಸರ್ಕಾರಿ ಕಾರ್ಯವನ್ನಾಗಲೀ ಅಥವಾ ಅವನ ವೈಯುಕ್ತಿಕ ಆಡಳಿತವನ್ನಾಗಲೀ ವಿರೋಧಿಸುವ, ಟೀಕಿಸುವ ಅವಕಾಶ ಇರಲಿಲ್ಲ. ವಿರುದ್ಧವಾಗಿ ಟೀಕಿಸಿದರೆ ಅಂತಹವರನ್ನು ಯಾವುದೇ ವಿಚಾರಣೆ ಇಲ್ಲದೇ ಜೈಲಿಗೆ ಕಳುಹಿಸಿ ಉಗ್ರಶಿಕ್ಷೆಯನ್ನು ನೀಡುತ್ತಿದ್ದ.

ನಾವುಗಳು ಅಂತಹ ಶಿಕ್ಷೆಗೆ ಒಳಪಡುವುದಿಲ್ಲವೆಂದು ಆಶಿಸುತ್ತೇನೆ.

— ಕೆ. ಮಲ್ಲಿಕಾರ್ಜುನ
ದಾವಣಗೆರೆ.

ಸಂತ್ರಸ್ತರಿಗೆ ನೆರವು ನೀಡಲು ಒತ್ತಾಯ

ಕಳೆದ 2 ತಿಂಗಳಿಂದ ನಗರದಲ್ಲಿ ಸತತವಾಗಿ ಸುರಿಯುತ್ತಿರುವ ಧಾರಾಕಾರ ಮಳೆಯ ಪರಿಣಾಮವಾಗಿ ನೂರಾರು ಮಂದಿ ಮನೆಗಳನ್ನು ಕಳೆದುಕೊಂಡು ಪ್ರಾಣ ತೆತ್ತ ಸುದ್ದಿಗಳು ದಿನನಿತ್ಯವೂ ಬರುತ್ತಿದೆ. ಈ ಕುರಿತು ಬೆಂಗಳೂರು ನಗರ ಪಾಲಿಕೆ ನಿರ್ಲಕ್ಷ್ಯತೆ, ಅಸಮರ್ಪಕ ಕಾರ್ಯ, ಅಧಿಕಾರಿಗಳ ಹಾಗೂ ಕಂಟ್ರಾಕ್ಟರುಗಳ ಭ್ರಷ್ಟಾಚಾರದಿಂದಾಗಿ ನಗರ ಜನತೆ ತೀವ್ರ ರೀತಿಯ ತೊಂದರೆಗೊಳಗಾಗಿದ್ದಾರೆ. ನಗರಸಭೆ ಈ ಕೂಡಲೆ ಕ್ರಮ ಕೈಗೊಂಡು ನೊಂದ ಜನತೆಗೆ ನೆರವು ನೀಡಲು ಒತ್ತಾಯಿಸಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬೆಂಗಳೂರು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಸೆಪ್ಟೆಂಬರ್ 20 ರಂದು ಮೈಸೂರು ಬ್ಯಾಂಕ್ ವೃತ್ತದಿಂದ ಕಾರ್ಪೊರೇಷನ್ ಆಡಳಿತ ಕಛೇರಿಗೆ ಮೆರವಣಿಗೆ ನಡೆಸಿ ಧರಣಿ ಸತ್ಯಾಗ್ರಹ ನಡೆಸಲಾಯಿತು.

ಸಭೆಯನ್ನುದ್ದೇಶಿಸಿ ಮಾತನಾಡಿದ ಜಿಲ್ಲಾ ಕಾರ್ಯದರ್ಶಿ ಕಾ|| ಎಸ್. ಸೂರ್ಯನಾರಾಯಣ ರಾವ್‌ರವರು ನಗರದ ಹಲವಾರು ಬಡಾವಣೆಯ ಜನತೆ ಮಳೆಯ ನೀರಿನಿಂದ ತುಂಬ ತೊಂದರೆಗೀಡಾಗಿದ್ದು 1987 ರ ಅಂತರರಾಷ್ಟ್ರೀಯ ವಸತಿ ವರ್ಷವಾಗಿ ಆಚರಿಸುವ ಸಂದರ್ಭದಲ್ಲೆ ಜನರನ್ನು ನಿರ್ವಸತಿ ಹೀನರನ್ನಾಗಿಸುವುದನ್ನು ತಪ್ಪಿಸಬೇಕೆಂದು ಒತ್ತಾಯಿಸಿದರು.

ಮಳೆಯಿಂದ ಅನಾಹುತಕ್ಕೀಡಾಗಿ ಸತ್ತವರ ಕುಟುಂಬಕ್ಕೆ 20 ಸಾವಿರ ಹಾಗೂ ಗಾಯಗೊಂಡು ನಷ್ಟವುಂಟಾದವರಿಗೆ 5 ಸಾವಿರ ಪರಿಹಾರವನ್ನು ನೀಡಬೇಕೆಂದು, ಸರ್ಕಾರ ಒದಗಿಸಿರುವ 3 ಕೋಟಿ ಪರಿಹಾರ ಏನೇನಕ್ಕೂ ಸಾಲದಾಗಿದ್ದು ಇನ್ನೂ ಹೆಚ್ಚಿನ ನೆರವನ್ನು ಕೇಂದ್ರ ಸರ್ಕಾರದ ಸಹಾಯದೊಂದಿಗೆ ಒದಗಿಸಬೇಕೆಂದು ಒತ್ತಾಯಿಸಲಾಗಿದೆ. ರಸ್ತೆ ರಿಪೇರಿ, ಚರಂಡಿ ಮಣ್ಣು ತೆಗೆಯುವುದು, ವೃಷಭಾವತಿ ಕಣಿವೆಯಲ್ಲಿ ಬರುವ ಕೊಳಚೆಯನ್ನು ತೆಗೆಯಬೇಕು. ಮೇಯರ್‌ರವರು ಉದ್ದೇಶಿಸಿರುವ 'ವೀಲ್ ಟ್ಯಾಕ್ಸ್' ಕೈಬಿಡಬೇಕು. ಕೇಂದ್ರ ಸ್ವಾಮ್ಯದ ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಸಂತ್ರಸ್ತರಿಗೆ ಅರ್ಥಪೂರ್ಣ ಸಾಲಗಳನ್ನು ಕೊಡಬೇಕು ಮುಂತಾದ ಬೇಡಿಕೆಗಳ ಮನವಿಯೊಂದನ್ನು ಮೇಯರ್‌ರವರಿಗೆ ನೀಡಿ ಒತ್ತಾಯಿಸಲಾಯಿತು.

ನಿಯೋಗದಲ್ಲಿ ಕಾ|| ಸೂರ್ಯನಾರಾಯಣ ರಾವ್, ಪಿ. ಜಗನ್ನಾಥ್, ಆರ್. ಶ್ರೀನಿವಾಸ್, ಪಿ. ಕೆ. ಸುಬ್ರಮಣಿಯವರುಗಳು ಇದ್ದರು.

ಪಕ್ಷದ ರಾಜ್ಯ ಸಮ್ಮೇಳನದ ಸ್ವಾಗತ ಸಮಿತಿ

ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದಂತೆ ದಿ. 17.9.88 ರಂದು ಜರುಗಿದ ಬೆಂಗಳೂರು ಜಿಲ್ಲೆಯ ಪಕ್ಷದ ಸದಸ್ಯರ ಮತ್ತು ಹಿತೈಷಿಗಳ ಹಾಗೂ ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳ ಸಭೆಯಲ್ಲಿ ಪಕ್ಷದ 13ನೇ ರಾಜ್ಯ ಸಮ್ಮೇಳನದ ಸಿದ್ಧತೆಗಾಗಿ ಸ್ವಾಗತ ಸಮಿತಿಯೊಂದನ್ನು ರಚಿಸಲಾಗಿದೆ. ಸ್ವಾಗತ ಸಮಿತಿಯಲ್ಲಿ ಒಟ್ಟು 125 ಮಂದಿ ಸದಸ್ಯರಿದ್ದು ಪದಾಧಿಕಾರಿಗಳ ವಿವರ ಕೆಳಕಂಡಂತಿದೆ.

ಅಧ್ಯಕ್ಷ : ಎಸ್. ಸೂರ್ಯನಾರಾಯಣರಾವ್
ಉಪಾಧ್ಯಕ್ಷರು : ಟಿ.ಎಸ್. ಅನಂತರಾಮ್
ವಿ. ಗೋಪಾಲಗೌಡ
ಎನ್. ವೀರಾಸ್ವಾಮಿ
ಪ್ರ. ಕಾರ್ಯದರ್ಶಿ : ಹೆಚ್.ಎನ್. ನಾಗಮೋಹನದಾಸ್
ಕಾರ್ಯದರ್ಶಿಗಳು : ಎಸ್.ಆರ್. ಆರಾಧ್ಯ
ಆರ್. ಶ್ರೀನಿವಾಸ್
ಕೆ.ವಿ. ಶ್ರೀನಿವಾಸ್
ಪಿ. ಜಗನ್ನಾಥ್.
ಖಜಾಂಚಿಗಳು : ಎಸ್. ರೇವಣ್ಣ,

ಸ್ವಯಂ ಸೇವಕರ ಸಮಿತಿ, ಪ್ರಚಾರ, ಹಣಕಾಸು, ಮತ್ತು ಸಾಂಸ್ಕೃತಿಕ ಉಪಸಮಿತಿಗಳನ್ನು ಸಹ ರಚಿಸಲಾಗಿದೆ. 1 ಲಕ್ಷ ರೂ. ಸಮ್ಮೇಳನ ನಿಧಿಸಂಗ್ರಹಿಸಲು ಕರೆನೀಡಲಾಗಿದ್ದು ಸಮ್ಮೇಳನವನ್ನು ಯಶಸ್ವಿಗೊಳಿಸಲು ಬೆಂಗಳೂರು ಜಿಲ್ಲೆಯ ಸಮಸ್ತ ಜನತೆ ಸಂಪೂರ್ಣ ನೆರವು ನೀಡಬೇಕಾಗಿ ಸ್ವಾಗತ ಸಮಿತಿ ಕೋರಿದೆ.

ಶಿವಮೊಗ್ಗ ಜಿಲ್ಲಾ ಸಮ್ಮೇಳನ

ಪಕ್ಷದ ಶಿವಮೊಗ್ಗ ಜಿಲ್ಲಾ ಸಮ್ಮೇಳನ ಸೆಪ್ಟೆಂಬರ್ 17 ರಂದು ಭದ್ರಾವತಿಯ ಪುರಸಭಾ ಭವನದಲ್ಲಿ ಜರುಗಿತು. ಪಕ್ಷದ ರಾಜ್ಯ ಸಮಿತಿ ಸೆಕ್ರೆಟಾರಿಯೇಟ್ ಸದಸ್ಯರಾದ ಕಾಂ|| ಸಿ. ನಂಜುಂಡಪ್ಪ, ಕೆ. ಆರ್. ಶ್ರೀಯಾನ್‌ರವರು ಮುಖ್ಯ ಅತಿಥಿಗಳಾಗಿ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಕಾಂ|| ನಂಜುಂಡಪ್ಪನವರು ಸಮ್ಮೇಳನ ಉದ್ಘಾಟಿಸಿದರು. ಪ್ರಾರಂಭದಲ್ಲಿ ಅಗಲಿದ ಸಂಗಾತಿಗಳಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಕಾಂಗ್ರೆಸ್‌ನ ಸ್ವಾರ್ಥ ಸಂಕುಚಿತ ನೀತಿಯಿಂದಾಗಿ ಪಂಜಾಬ್ ಬಗೆಹರಿಯದೆ ಉಳಿದಿದೆ. ಕರಾಳ ಮಸೂದೆಗಳನ್ನು ಜಾರಿಗೊಳಿಸುವ ಮೂಲಕ ರಾಜೀವ್ ಸರ್ಕಾರ ಸರ್ವಾಧಿಕಾರದತ್ತ ಸಾಗುತ್ತಿದೆ. ಜನತೆ ಇತ್ತೀಚೆಗೆ ಬೆಳೆಸಿಕೊಂಡುಬರುತ್ತಿರುವ ದೇಶವ್ಯಾಪಿ ಚಳುವಳಿಗಳು ಇನ್ನೂ ತೀವ್ರಗೊಂಡು ಎಡ-ಜಾತ್ಯಾತೀತಪಕ್ಷಗಳುಜನತೆಗೆ ಬಾಧಿಸುತ್ತಿರುವ ಸಮಸ್ಯೆಗಳ ಕುರಿತು ಕಾರ್ಯಕ್ರಮದ ಆಧಾರದಲ್ಲಿ ಹೋರಾಟ ರೂಪಿಸಬೇಕೆಂದು ಕಾ|| ಸಿ. ನಂಜುಂಡಪ್ಪನವರು ಕರೆ ನೀಡಿದರು. ನೂತನ ಜಿಲ್ಲಾ ಸಮಿತಿಗೆ ಕಾ|| ಎಸ್.ಬಿ. ಶಿವಶಂಕರ್, ಕೆ.ಎಂ. ಶ್ರೀನಿವಾಸ್, ಎಲ್ ರಂಗೇಗೌಡ ನರಸಿಂಹಯ್ಯ, ಸುಕುಮಾರನ್, ಇವರುಗಳು ಆಯ್ಕೆಗೊಂಡರು. ಕಾ|| ಎಸ್. ಬಿ. ಶಿವಶಂಕರ್ ಕಾರ್ಯದರ್ಶಿಯಾಗಿ ಮರು ಆಯ್ಕೆಗೊಂಡರು.

ವಿ.ಐ.ಎಸ್‌ಎಲ್. ಕಾರ್ಖಾನೆಯನ್ನು ಕೇಂದ್ರ ಸರ್ಕಾರ ಕೂಡಲೇ ವಹಿಸಿಕೊಳ್ಳಬೇಕು, ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ನೀಡಬೇಕು, ಖಾಸಗಿ ಬಸ್ ರಾಷ್ಟ್ರೀಕರಿಸಬೇಕು, ಪಡಿತರ ಕಡಿತ ರದ್ದುಗೊಳಿಸಬೇಕು, ಖಾಲಿ ಇರುವ ಎಲ್ಲಾ ಹುದ್ದೆಗಳ ಭರ್ತಿ ಜೀವನಾವಶ್ಯಕ ವಸ್ತುಗಳ ಸಮರ್ಪಕ ವಿತರಣೆ, ಕರಾಳ ಶಾಸನಗಳ ವಾಪಸಾತಿ ರೈತರ ಬೇಡಿಕೆಗಳ ಈಡೇರಿಕೆ ಯಂತಹ 14 ನಿರ್ಣಯಗಳನ್ನು ಸಮ್ಮೇಳನ ಸ್ವೀಕರಿಸಿತು. ಕಾ|| ಕೆ.ಆರ್. ಶ್ರೀಯಾನ್ ರವರು ಸಮಾರೋಪ ಭಾಷಣ ಮಾಡಿದರು.

ಭದ್ರಾವತಿ ನಗರದಲ್ಲಿ ವರ್ಣ ರಂಜಿತ ಮೆರವಣಿಗೆ ನಡೆಸಿದ ನಂತರ ಬಹಿರಂಗ ಸಭೆ ನಡೆಸಲಾಯಿತು. ರ್‍ಯಾಲಿಯಲ್ಲಿ ಸಹಸ್ರಾರು ರೈತ-ಕಾರ್ಮಿಕರು ವಿದ್ಯಾರ್ಥಿ ಯುವಜನ ಪಾಲುಗೊಂಡಿದ್ದರು.

ಭೂ ಆಕ್ರಮಣ ಚಳುವಳಿ

ಸೆಪ್ಟೆಂಬರ್ ಚಳುವಳಿಯನ್ನು ಹೂವಿನ ಹಡಗಲಿ ತಾಲ್ಲೂಕಿನಲ್ಲಿ ಯಶಸ್ವಿಗೊಳಿಸಲು ತಾಲ್ಲೂಕಿನ ರೈತರ ಸಮಾವೇಶ ನಡೆಸಲಾಯಿತು.

ನಾಗ್ತಿ ಬಸಾಪುರ ಮಂಡಲ ವ್ಯಾಪ್ತಿ, ಕೋಮಾರನಹಳ್ಳಿ ತಾಂಡದಲ್ಲಿ ರೈತರು ಅರಣ್ಯ ಅಧಿಕಾರಿಗಳಿಗೆ ಘೇರಾವೋ ನಡೆಸಿ ಸಾಗುವಳಿ ಭೂಮಿಯಲ್ಲಿ ತೋಡಿದ್ದ ಟ್ರೆಂಚ್ ಮುಚ್ಚಲಾಯಿತು. ನಾಗ್ತಿ ಬಸಾಪುರದಲ್ಲಿ ಟ್ರೆಂಚ್ ತೆಗೆಯುವ ಹಾಗೂ ಸಸಿ ನೆಡುವುದನ್ನು ತಡೆಯುವ ಕಾಗಲಗಟ್ಟೆ ತಾಂಡಾದಲ್ಲಿ 150 ಎಕರೆ ಭೂಮಿಯನ್ನು ಕಬ್ಜಾ ಮಾಡಲಾಯಿತು. ಡೊಂಬರಹಳ್ಳಿ ತಾಂಡಾ, ಬಸಾಪುರ ತಾಂಡಾ, ಬಸರಕೋಡ ತಾಂಡಾಗಳಲ್ಲಿ ಸುಮಾರು 250 ಎಕರೆ ಜಮೀನು ಕಬ್ಜಾ ನಡೆಸಲಾಗಿದೆ.

ಸೆ. 12ರಂದು ತಾಲ್ಲೂಕಿನ ವಿವಿಧ ಕಡೆಗಳಿಂದ ಬಂದ ಸುಮಾರು 500 ರೈತರು ಬೇಡಿಕೆಗಳನ್ನು ಒತ್ತಾಯಿಸಿ ತಾಲ್ಲೂಕು ಕಛೇರಿ ಮುಂದೆ ಧರಣಿ ನಡೆಸಲಾಯಿತು. ಕಾಂ|| ಆರ್. ಪೂರ್ಣನಾಯ್ಕ, ಪಿ.ಆರ್. ವೆಂಕಟೇಶ್, ಡಿ. ಪ್ರಕಾಶ್, ಅಲ್ಲಾಭಕ್ಷಿ, ಮರೀಗೌಡ, ವೀರನಗೌಡ, ಶ್ರೀಕಾಂತ್ ಹಾಗೂ ಪೀರ್‌ಬಾಷಾ ಮೆರವಣಿಗೆ ನೇತೃತ್ವ ವಹಿಸಿದ್ದರು. ರೈತ ಸಂಘದ ಜಿಲ್ಲಾ ಅಧ್ಯಕ್ಷ ಕಾಂ|| ಬಿ. ಪರಶುರಾಂ ಸಭೆಯನ್ನುದ್ದೇಶಿಸಿ ಮಾತನಾಡಿದರು. ಸೆಪ್ಟೆಂಬರ್ 24ರಂದು ಬೇಡಿಕೆಗಳ ಕುರಿತು ರೈತ ಸಂಘದ ಪ್ರತಿನಿಧಿಗಳೊಂದಿಗೆ ಚರ್ಚಿಸಲು ತಹಶೀಲ್ದಾರ್‌ರವರು ಜಂಟಿ ಮಾತುಕತೆಗೆ ಕರೆಯಲಾಗಿದೆ.

ಶಾಸಕರ ಧರಣಿ

ದಿ. 8.9.88 ರಂದು ಕೆ.ಜಿ.ಎಫ್.ನ ರಾಬರ್ಟ್‌ಸನ್ ಪೇಟೆಯ ಮುನಿಸಿಪಲ್ ಮೈದಾನವನ್ನು ನಿರಂತರವಾಗಿ ಕೆ.ಎಸ್. ಆರ್.ಟಿ.ಸಿ. ಬಸ್ ನಿಲ್ದಾಣ ಮಾಡುವ ಪ್ರಯತ್ನದ ವಿರುದ್ಧ ಸ್ಥಳೀಯ ಸಿ.ಪಿ.ಐ. (ಎಂ) ಮತ್ತು ಜನತಾ ಪಕ್ಷ ಜಂಟಿಯಾಗಿ ಧರಣಿ ಸತ್ಯಾಗ್ರಹ ಹೂಡಿದರು, ಇದರ ನೇತೃತ್ವವನ್ನು ಶಾಸಕ ಕಾ|| ಟಿ. ಎಸ್. ಮಣಿ, ಕಾ|| ಎ. ಜಯರಾಂ ಮತ್ತು ಸ್ಥಳೀಯ ಜನತಾ ಪಕ್ಷದ ಅಧ್ಯಕ್ಷ ದೇವರಾಜ್‌ರವರು ವಹಿಸಿದ್ದರು. ಈ ಹೋರಾಟದ ಫಲವಾಗಿ ಕೆ.ಎಸ್.ಆರ್. ಟಿ.ಸಿ. ಡಿವಿಜನಲ್ ಮ್ಯಾನೇಜರ್ ಮೈದಾನದಲ್ಲಿ ಬಸ್ಸುಗಳನ್ನು ನಿಲ್ಲಿಸುವುದನ್ನು ಹಿಂತೆಗೆದುಕೊಂಡರು. ಕೆ.ಎಸ್.ಆರ್. ಟಿ.ಸಿ. ಬಸ್ ನಿಲ್ದಾಣಕ್ಕೆ ಸರ್ಕಾರದಿಂದ ಮಂಜೂರಾತಿ ದೊರೆತರು ಸೂಕ್ತ ಸ್ಥಳ ವಿದ್ದುದರಿಂದ ಕೆ.ಜಿ.ಎಫ್.ಗಿರುವ ಒಂದೇ ಒಂದು ಮೈದಾನವನ್ನು ಸಹ ಕೆ.ಎಸ್. ಆರ್.ಟಿ.ಸಿ. ಬಳಸಿಕೊಂಡಿದ್ದನ್ನು ಪ್ರತಿಭಟಿಸಿ ಈ ಹೋರಾಟ ರೂಪಿಸಲಾಗಿತ್ತು.

ಡಿ.ವೈ.ಎಫ್.ಐ. ಘಟಕ ರಚನೆ

ದಿ. 27.8.88 ರಂದು ಆಳಂದ ತಾಲೂಕಿನ ಗುಂಜಿಸಬೇಸ ಮಾಂಗವಾಡಗಲ್ಲಿಯಲ್ಲಿ ಡಿ.ವೈ.ಎಫ್.ಐ. ಘಟಕದ ಉದ್ಘಾಟನೆಯನ್ನು ಶ್ರೀ ಮಹಾದೇವ ಉಖಂಡೆ ಮಾಡಿದರು. ಈ ಸಭೆಗೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜಿಲ್ಲಾ ಪರಿಷತ್ ಸದಸ್ಯ ಮಾರುತಿ ಮಾನ್ಪಡೆಯವರು ಡಿ.ವೈಎಫ್.ಐ. ಯುವಜನತೆಯನ್ನು ಸಂಘಟಿಸುವ ಬಗ್ಗೆ ವಿವರಿಸಿದರು.

ನೂತನ ಘಟಕದ ಅಧ್ಯಕ್ಷರಾಗಿ ಬಾಬು ಮೇತ್ರೆ, ಉಪಾಧ್ಯಕ್ಷರಾಗಿ ಸಿದ್ರಾಮ ಮನ್ನಾ, ಕಾರ್ಯದರ್ಶಿಯಾಗಿ ಮಹಾದೇವ ಉಖಂಡೆ, ಖಜಾಂಚಿಯಾಗಿ ಜಗನಾಥ ಮೇತ್ರೆಯವರನ್ನೊಳಗೊಂಡ ಹನ್ನೊಂದು ಜನರ ಸಮಿತಿ ರಚಿಸಲಾಯಿತು.

ಪ್ರಾರಂಭದಲ್ಲಿ ಕಾ|| ಅಶೋಕಶೆಟ್ಟಿ ಸ್ವಾಗತಿಸಿ, ಕೊನೆಯಲ್ಲಿ ಕಾಂ|| ಪಂಡಿತರಾದ ಸೇರಿಕಾರ ವಂದನೆ ಅರ್ಪಿಸಿದರು.

ರೈತ ಸಂಘದ ಅಭಿನಂದನೆ

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಸಭೆ ಸೆಪ್ಟೆಂಬರ್ 17 ರಂದು ಕಾ|| ಎಂ. ಎನ್. ಉಗ್ರಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ ಸೆಪ್ಟೆಂಬರ್ ರೈತ-ಕೃಷಿ ಕೂಲಿಗಾರರ ಚಳುವಳಿಯನ್ನು ಕುರಿತು ಚರ್ಚಿಸಿತು.

ರಾಜ್ಯದ 19 ಜಿಲ್ಲೆಯ 68 ತಾಲ್ಲೂಕುಗಳ 1,500ಕ್ಕೂ ಹೆಚ್ಚು ಹಳ್ಳಿಯ ರೈತ-ಕೃಷಿ ಕೂಲಿಗಾರರು ಚಳುವಳಿಯಲ್ಲಿ ಪಾಲ್ಗೊಂಡಿದ್ದರು. 50 ಸಾವಿರ ಜನರು ಪಿಕೆಟಿಂಗ್, ರಸ್ತೆ ತಡೆ ಚಳುವಳಿಯಲ್ಲಿ ಭಾಗವಹಿಸಿ 30 ಸಾವಿರ ಜನ ಬಂಧನಕ್ಕೊಳಗಾದರು.

ಒಟ್ಟು 1 ಲಕ್ಷ 20 ಸಾವಿರ ಕರಪತ್ರ, 5 ಸಾವಿರ ಪೋಸ್ಟರ್‌ಗಳನ್ನು ಈ ಚಳುವಳಿಯಲ್ಲಿ ಮುದ್ರಿಸಲಾಗಿತ್ತು. ಮಹಿಳೆಯರು ಗಣನೀಯ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ರಾಜ್ಯದ ಕೋಲಾರ, ದಕ್ಷಿಣ ಕನ್ನಡ ಜಿಲ್ಲೆ, ಬೆಂಗಳೂರು, ಗುಲ್ಬರ್ಗಾ, ಬಿಜಾಪುರ, ರಾಯಚೂರು, ಬಳ್ಳಾರಿ ಜಿಲ್ಲೆಗಳಲ್ಲಿ ಅತ್ಯಧಿಕ ಜನರು ಭಾಗವಹಿಸಿದ್ದರು. ಕಾರ್ಮಿಕ ಸಂಘಟನೆ, ವಿದ್ಯಾರ್ಥಿ-ಯುವಜನ, ಮಹಿಳಾ ಸಂಘಟನೆಗಳು ಭಾಗವಹಿಸಿ ಯಶಸ್ವಿಗೊಳಿಸಿದ್ದಕ್ಕಾಗಿ ಆ ಸಂಘಟನೆಗಳನ್ನು ರೈತಸಂಘ ಅಭಿನಂದಿಸಿತು.

ಬೀದರ್

ಸೆ. 7 ರಂದು ಬೀದರ್‌ನಲ್ಲಿ ಮೆರವಣಿಗೆ ನಡೆಸಿ 87 ಜನರು ಬಂಧನಕ್ಕೊಳಗಾಗಿದ್ದರು. ಈ ಬಂಧನದಲ್ಲಿ 37 ಜನ ಮಹಿಳೆಯರು ಪಾಲ್ಗೊಂಡಿದ್ದರು.

ಈ ಚಳುವಳಿಯ ನೇತೃತ್ವವನ್ನು ಅಧ್ಯಕ್ಷ ಕಾಂ|| ಶಿವಶೆಟ್ಟಿ ಚಲವಾ ಉಪಾಧ್ಯಕ್ಷ ಕಾಂ|| ಈಶ್ವರ ವಿಠಲರಾವ್ ಕಾ|| ಸಂಗ್ರಾಮ ವಕೀಲರು ವಹಿಸಿದ್ದರು.

ನಾರಂಜಾ ಸಕ್ಕರೆ ಕಾರ್ಖಾನೆ ಕೂಡಲೆ ಪ್ರಾರಂಭಿಸುವಂತೆ, ಹಾಲಿನ ಡೈರಿ ಮತ್ತು ಹಾಲಿನ ಪುಡಿ ಕಾರ್ಖಾನೆ ಕೂಡಲೇ ಪ್ರಾರಂಭಿಸುವಂತೆ, ಬಸವ ಕಲ್ಯಾಣದಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪನೆ, ಮಳೆಯ ಅತಿವೃಷ್ಟಿಯಿಂದಾಗಿ ಬಿದ್ದಿರುವ ಮನೆಗಳಿಗೆ ಸರ್ಕಾರ ಸಹಾಯಧನ ಕೂಡಲೇ ನೀಡುವಂತೆ, ಮನವಿಯಲ್ಲಿ ತಿಳಿಸಲಾಗಿತ್ತು.

ಈ ಮೊದಲು ಬದನಲ್ ಮತ್ತು ಕಮಠಾಣಾ ಮೊದಲಾದ ಕಡೆ ಸಹ ಮೆರವಣಿಗೆ ಮತ್ತು ಬಂಧನಕ್ಕೊಳಗಾದ ವರದಿಯಾಗಿದೆ.

ಪಕ್ಷದ ಸಂತಾಪ

ಸಿ.ಪಿ.ಐ.(ಎಂ) ಬೆಂಗಳೂರು ಜಿಲ್ಲಾ ಸಮಿತಿ ಸದಸ್ಯರಾದ ಕಾ|| ಎಸ್. ರೇವಣ್ಣರವರು ತಮ್ಮ ಪತ್ನಿಯೊಂದಿಗೆ ಮೋಟಾರ್ ಸೈಕಲ್‌ನಲ್ಲಿ ಬರುತ್ತಿದ್ದಾಗ ಬೆಂಗಳೂರು ನಗರ ಸಾರಿಗೆ ಬಸ್ಸೊಂದು ವಿಜಯನಗರದ ಬಳಿ ಡಿಕ್ಕಿ ಹೊಡೆದು ದಿನಾಂಕ–19.9.88 ರಂದು ಅಪಘಾತಕ್ಕೀಡಾದರು. ಶ್ರೀಮತಿ ನಾಗಮಣಿಯವರು ಸ್ಥಳದಲ್ಲೇ ಮೃತಹೊಂದಿದರು. ಕಾ|| ರೇವಣ್ಣನವರು ಗಾಯಗೊಂಡು ಅಪಾಯದಿಂದ ಪಾರಾಗಿದ್ದಾರೆ. ನಗರದ ಶಾಲೆಯೊಂದರಲ್ಲಿ ಉಪಾಧ್ಯಾಯಿನಿಯಾಗಿ ಸೇವೆ ಸಲ್ಲಿಸುತ್ತಿದ್ದ ಶ್ರೀಮತಿ ನಾಗಮಣಿಯವರ ಸಾವಿಗೆ ಸಿಪಿಐ(ಎಂ) ಜಿಲ್ಲಾ ಸಮಿತಿಯು ತನ್ನ ತೀವ್ರ ಸಂತಾಪ ವ್ಯಕ್ತಪಡಿಸಿದೆ.

ಇತ್ತೀಚೆಗೆ ಹೃದಯಾಘಾತದಿಂದ ನಿಧನರಾದ ಶ್ರೀರಾಮಪುರದ ಪಕ್ಷದ ಹಿತೈಷಿ ಶ್ರೀಮಾನ್ ರಾಮಸ್ವಾಮಿ ರೆಡ್ಡಿಯವರಿಗೂ ಪಕ್ಷ ತನ್ನ ಸಂತಾಪ ವ್ಯಕ್ತಪಡಿಸಿದೆ.

ಮಹಿಳಾ ದೌರ್ಜನ್ಯ ವಿರೋಧಿ ದಿನಾಚರಣೆ

ಕೋಲಾರ ಜಿಲ್ಲಾ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ದಿ-17.8.88 ರಂದು ಕೋಲಾರ ಮಹಿಳಾ ಕಾಲೇಜಿನ ಸಭಾಂಗಣದಲ್ಲಿ ಕೋಲಾರ ಕಾಲೇಜಿನ ಉಪನ್ಯಾಸಕರಾದ ಶ್ರೀ ನರಹರಿಯವರು ಹಾಗೂ ಉಪನ್ಯಾಸಕಿ ಜಯಲಕ್ಷ್ಮಿಯವರು ಮಾತನಾಡಿದರು. ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ರಾಜ್ಯಕಾರ್ಯದರ್ಶಿಗಳಾದ ಶ್ರೀರಾಮರೆಡ್ಡಿಯವರು ಅಧ್ಯಕ್ಷತೆ ವಹಿಸಿದ್ದರು. ಮೊದಲಿಗೆ ಮಹಿಳಾ ಸಂಘಟನೆಯ ಸಂಚಾಲಕಿ ಫ್ಲೋರಾರವರು ಸ್ವಾಗತಿಸಿ ಕೊನೆಯಲ್ಲಿ ಕೋಲಾರ ಜಿಲ್ಲಾ ಸಹ ಸಂಚಾಲಕಿ ಪರ್ವೀನ್‌ತಾಜ್ ವಂದಿಸಿದರು.

ಡಿ.ವೈ.ಎಫ್.ಐ. ಬಂಗಾರಪೇಟೆ ತಾ|| ಘಟಕ

ಡಿ.ವೈ.ಎಫ್.ಐ. ಸರ್ವಸದಸ್ಯರ ಸಭೆಯು ದಿ. 26-8-88ರಂದು ಬಂಗಾರಪೇಟೆಯಲ್ಲಿ ನಡೆಯಿತು. ಈ ಸಭೆಯಲ್ಲಿ ಜಿಲ್ಲಾ ಕಾರ್ಯದರ್ಶಿ ಎಂ.ಎಸ್. ಆನಂದ್ ಡಿ.ವೈಎಫ್.ಐ. ಕಾರ್ಯಕ್ರಮ ಮತ್ತು ಧ್ಯೇಯ ಧೋರಣೆಗಳ ಬಗ್ಗೆ ವಿವರಿಸಿದರು. ಜಿಲ್ಲಾಧ್ಯಕ್ಷ ಕಾಂ|| ಶ್ರೀನಿವಾಸ್ ಬಂಗಾರಪೇಟೆ ಘಟಕದ ವರದಿ ಮಂಡಿಸಿದರು. ವಿವಿಧ ಸಾಮೂಹಿಕ ಸಂಘಟನೆಗಳ ಮುಖಂಡರು ಶುಭಕೋರಿದರು.

ಸಭೆಯು ಕೆಳಕಂಡ ನಿರ್ಣಯಗಳನ್ನು ಕೈಗೊಂಡಿತು. ಬಂಗಾರಪೇಟೆ ರಸ್ತೆಗಳ ಒಳಚರಂಡಿ ದುರಸ್ತಿ ಕೆಲಸ ಕೂಡಲೇ ಪುರಸಭೆ ಕೈಗೊಳ್ಳಬೇಕು. ಕೆರೆಕೋಡಿ ಪ್ರದೇಶಕ್ಕೆ ಹೋಗಿ ಬರಲು ರಸ್ತೆ ನಿರ್ಮಾಣ, ನಾಗರೀಕರಿಗೆ ನೀರಿನ ವ್ಯವಸ್ಥೆ ಮಾಡುವಂತೆ ಉದ್ಯಾನವನ. ಕ್ರೀಡಾಂಗಣ ಒದಗಿಸಬೇಕಾಗಿ ಸರ್ಕಾರಕ್ಕೆ ಒತ್ತಾಯಿಸುವುದು. ಸೆಪ್ಟೆಂಬರ್ ರೈತ ಚಳವಳಿಗೆ ಸಂಪೂರ್ಣ ಬೆಂಬಲ ಸೂಚಿಸಬಹುದು.

ಕೊನೆಯಲ್ಲಿ 15 ಜನರ ತಾಲ್ಲೂಕು ಸಮಿತಿ ರಚಿಸಲಾಗಿದ್ದು ಅಧ್ಯಕ್ಷರಾಗಿ ಶ್ರೀನಿವಾಸ್, ಉಪಾಧ್ಯಕ್ಷರಾಗಿ ಕುಳ್ಳಪ್ಪ. ಕಾರ್ಯದರ್ಶಿಯಾಗಿ ವಿ.ಕೃಷ್ಣಮೂರ್ತಿ ಸಹ ಕಾರ್ಯದರ್ಶಿಯಾಗಿ ತಿಪ್ಪರಾಜು, ಖಜಾಂಚಿಯಾಗಿ ರಘುನಾಥ್ ಸಿಂಗ್, ಆಯ್ಕೆಗೊಂಡರು. ಕೊನೆಯಲ್ಲಿ ಕಾಂ|| ಕುಳ್ಳಪ್ಪ ವಂದನೆ ಅರ್ಪಿಸಿದರು.

ವಿಮೋಚನೆಯ ಹಾದಿಯಲ್ಲಿ ನಮೀಬಿಯಾ

ನಮೀಬಿಯಾ ಒಂದು ಸ್ವತಂತ್ರ ದೇಶ ಆಗುತ್ತದೆಯೋ ? ದಕ್ಷಿಣ ಆಫ್ರಿಕಾ ನಮೀಬಿಯಾದಲ್ಲೇಕೆ ? ವರ್ಣದ್ವೇಷಿ ಪಡೆಗಳು ಇನ್ನೂ ಅಲ್ಲಿ ಏಕೆ, ಹೇಗೆ ಉಳಿದಿವೆ ?

ದಕ್ಷಿಣ ಆಫ್ರಿಕಾದ ಪಡೆಗಳ ವಿರುದ್ಧ ಸ್ವಾಪೋದ ಸಶಸ್ತ್ರ ಹೋರಾಟದ 22 ನೇ ವಾರ್ಷಿಕೋತ್ಸವವನ್ನು ನಾವು ನಮೀಬಿಯಾ ಸ್ವಾತಂತ್ರ್ಯದ ಸಂಧಿಕಾಲದಲ್ಲಿ ನಿಂತಿದ್ದೇವೆ ಎಂಬ ಜಾಗರೂಕ ಆಶಾವಾದದೊಂದಿಗೆ ಆಚರಿಸುತ್ತಿದ್ದೇವೆ. ಮುಂದಿನ ವಾರ್ಷಿಕೋತ್ಸವವನ್ನು ಸ್ವತಂತ್ರ ಹಾಗೂ ಮುಕ್ತ ನಮೀಬಿಯಾದಲ್ಲಿ ಆಚರಿಸುವ ನಿರೀಕ್ಷೆ ಇಟ್ಟುಕೊಂಡಿದ್ದೇವೆ.

ಎರಡು ವಾರಗಳ ಹಿಂದೆ ನಮೀಬಿಯಾದ ವಿಮೋಚನಾ ಹೋರಾಟಗಾರರ ಸಂಘಟನೆ ಸ್ವಾಪೋ (ನೈರುತ್ಯ ಆಫ್ರಿಕಾ ಜನತಾ ಸಂಘಟನೆ) ತನ್ನ ಜನತಾ ವಿಮೋಚನಾ ಸೇನೆ 1966 ರಲ್ಲಿ ಆರಂಭಿಸಿದ ಸಶಸ್ತ್ರ ಹೋರಾಟದ ವಾರ್ಷಿಕೋತ್ಸವದ ಸಂದರ್ಭದಲ್ಲಿ ಹೊರಡಿಸಿದ ಹೇಳಿಕೆಯಿದು.

ನಮೀಬಿಯಾದ ಸ್ವಾತಂತ್ರ್ಯ ಹೋರಾಟಗಾರರ ಈ ಆಶಾವಾದಕ್ಕೆ ಏನು ಆಧಾರ ? ಈ ಆಶಾವಾದದಲ್ಲಿ ಜಾಗರೂಕತೆಯೇಕೆ ?

ಆಶಾವಾದಕ್ಕೆ ಮುಖ್ಯ ಕಾರಣ ಕಳೆದ ಮೇ ತಿಂಗಳಿಂದ ಅಮೇರಿಕಾದ ಮಧ್ಯಸ್ಥಿಕೆಯಲ್ಲಿ ನಡೆಯುತ್ತಿರುವ ಅಂಗೋಲಾ, ದಕ್ಷಿಣ ಆಫ್ರಿಕಾ ಹಾಗೂ ಕ್ಯೂಬಾ ನಡುವಿನ ಮಾತುಕತೆಗಳಲ್ಲಾಗಿರುವ ಗಮನಾರ್ಹ ಮುನ್ನಡೆ. ಲಂಡನ್‌ನಲ್ಲಿ ಆರಂಭವಾದ ಈ ಘಾತುಕತೆಗಳ ಒಂದು ಮುಖ್ಯ ವಿಷಯ ನಮೀಬಿಯಾದ ಸ್ವಾತಂತ್ರ್ಯ. ನಂತರ ಜುಲೈನಲ್ಲಿ ನ್ಯೂಯಾರ್ಕ್‌ನಲ್ಲಿ, ಆಗಸ್ಟ್‌ನಲ್ಲಿ ಜಿನೇವಾದಲ್ಲಿ ನಡೆದ ಮಾತುಕತೆಗಳ ಫಲವಾಗಿ ಇತ್ಯರ್ಥಕ್ಕೆ ದಾರಿ ಮಾಡಿಕೊಡುವ 14 ಅಂಶಗಳನ್ನು ರೂಪಿಸಲು ಈ ನಾಲ್ಕು ದೇಶಗಳಿಗೆ ಸಾಧ್ಯವಾಗಿದೆ ಹಾಗೂ ನಮೀಬಿಯಾದ ಸ್ವಾತಂತ್ರ್ಯದ ವೇಳಾ ಪಟ್ಟಿಯನ್ನು ನಿರ್ಧರಿಸಲು ಸಾಧ್ಯವಾಗಿದೆ. (ಬಾಕ್ಸ್ ನೋಡಿ).

ಆದರೂ ಇನ್ನೂ ಕೆಲವು ಸಮಸ್ಯೆಗಳು ಉಳಿದಿವೆ. ಪಕ್ಕದ ಅಂಗೋಲಾದಿಂದ ದಕ್ಷಿಣ ಆಫ್ರಿಕಾದ ಹಾಗೂ ಕ್ಯೂಬಾ ಪಡೆಗಳ ವಾಪಸಾತಿ ಇವುಗಳಲ್ಲಿ ಮುಖ್ಯವಾದದ್ದು. ಅಂಗೋಲಾ ಪೋರ್ಚುಗೀಸ್ ವಸಾಹತುಶಾಹಿಯಿಂದ ವಿಮೋಚನೆಗೊಂಡ ಮೇಲೆ ಯುನಿಟಾಸಿ ಎಂಬ ಸಾಮ್ರಾಜ್ಯಶಾಹಿ-ಪರ ಸಂಘಟನೆ, ಅಮೇರಿಕಾ ಮತ್ತಿತರ ದೇಶಗಳ ನೇರ ಬೆಂಬಲದೊಂದಿಗೆ ಸತತ ಕಿರುಕುಳ ಕೊಡಲಾರಂಭಿಸಿತು. ಈ ಪ್ರದೇಶದಲ್ಲಿ ಸಾಮ್ರಾಜ್ಯಶಾಹಿಗಳ ಸಹಜ ಮಿತ್ರನಂತಿರುವ ದಕ್ಷಿಣ ಆಫ್ರಿಕಾದ ವರ್ಣದ್ವೇಷೀ ಪಡೆಗಳು ಈ ಕ್ರಾಂತಿ-ವಿರೋಧಿಗಳಿಗೆ ಬೆಂಬಲವಾಗಿ ಅಂಗೋಲಾದೊಳಕ್ಕೆ 1976ರಲ್ಲಿ ಆಕ್ರಮಣ ನಡೆಸಿದವು. ಅಂದಿನಿಂದ ಅಂಗೋಲಾದ ಸಶಸ್ತ್ರ ಪಡೆಗಳು ದಕ್ಷಿಣ ಆಫ್ರಿಕಾದೊಂದಿಗೆ ಪೂರ್ಣಪ್ರಮಾಣದ ಯುದ್ಧದಲ್ಲಿ ನಿರತವಾಗಿವೆ. ಹೀಗೆ ಅಂಗೋಲಾದಲ್ಲಿರುವ ದಕ್ಷಿಣ ಆಫ್ರಿಕಾ ಪಡೆಗಳು ಆಕ್ರಮಣಕಾರೀ ಪಡೆಗಳು ಎಂಬುದು ಸ್ವಯಂವೇದ್ಯ.

ಅಂಗೋಲಾದಲ್ಲಿರುವ ಸುಮಾರು 45,000 ಕ್ಯೂಬಾ ಪಡೆಗಳು ಕಾನೂನು ಬದ್ಧತೆಯ ಬಗ್ಗೆ ದಕ್ಷಿಣ ಆಫ್ರಿಕಾ ಮತ್ತು ಅದರ ಪ್ರಮುಖ ಬೆಂಬಲಿಗ ಅಮೇರಿಕಾ ಕೂಡಾ ತಕರಾರು ಎತ್ತುತ್ತಿಲ್ಲ. ಆದರೆ ಆಫ್ರಿಕಾ ಖಂಡದ ದಕ್ಷಿಣ ಭಾಗದಲ್ಲಿ ಕ್ಯೂಬಾದ ಪಡೆಗಳಿರುವುದು ಅವರ ಮಟ್ಟಿಗೆ ಅನಪೇಕ್ಷಣೀಯ. ಕ್ಯೂಬಾದ ಪಡೆಗಳು ಅಂಗೋಲಾದ ಕೇಳಿಕೆಯ ಮೇರೆಗೆ ಸಾಮ್ರಾಜ್ಯಶಾಹೀ ಬೆಂಬಲದ ಕ್ರಾಂತಿ ವಿರೋಧಿಗಳ ವಿರುದ್ಧ ಹೋರಾಟದಲ್ಲಿ ಅಂಗೋಲಾದ ಪಡೆಗಳಿಗೆ ನೆರವಾಗಿ, ತನ್ಮೂಲಕ ತಮ್ಮ ಅಂತರಾಷ್ಟ್ರೀಯ ಕರ್ತವ್ಯವನ್ನು ಪೂರೈಸಲು ಬಂದ ಪಡೆಗಳು, ದಕ್ಷಿಣ ಆಫ್ರಿಕಾದಂತೆ ಆಕ್ರಮಣ ನಡೆಸಿರುವ ಪಡೆಗಳಲ್ಲ. ಆದ್ದರಿಂದ ಇವೆರಡನ್ನೂ ಕೊಂಡಿಹಾಕುವುದು ಸರಿಯಲ್ಲ. ಆದರೂ ಕೆಲವು ಶರತ್ತುಗಳ ಮೇಲೆ ಕ್ಯೂಬಾ ತನ್ನ ಪಡೆಗಳನ್ನು ವಾಪಸು ಪಡೆಯಲು ಸಿದ್ಧವಾಗಿದೆ. ಈ ಬಗ್ಗೆ ಮಾತುಕತೆಗಳು ಕಾಂಗೋದ ರಾಜಧಾನಿ ಬ್ರಾಝವಿಲ್ಲೆಯಲ್ಲಿ ನಡೆಯುತ್ತಿದ್ದು ಇನ್ನೂ ಪೂರ್ಣಗೊಂಡಿಲ್ಲ.

ಅದೇನೇ ಇದ್ದರೂ ತಾನು ನವೆಂಬರ್‌ನಿಂದ ಆರಂಭವಾಗುವ ವೇಳಾ ಪಟ್ಟಿಯನ್ನು ಪಾಲಿಸುತ್ತೇನೆಂದು ದಕ್ಷಿಣಾ ಆಫ್ರಿಕಾ ಹೇಳುತ್ತಲೇ ಇದೆ. ಸುಮಾರು 70 ವರ್ಷಗಳಿಂದ ನಮೀಬಿಯಾವನ್ನು ತನ್ನ ವಸಾಹತುವಿನಂತೆ ಕಾಣುತ್ತಿರುವ 1978 ರಲ್ಲಿ ವಿಶ್ವಸಂಸ್ಥೆಯ ಭದ್ರತಾಸಮಿತಿಯ ನಿರ್ಣಯ (ನಿರ್ಣಯ ಸಂಖ್ಯೆ 435) ವನ್ನು ಉಲ್ಲಂಘಿಸಿ ತನ್ನ ಕಾನೂನು ಬಾಹಿರ ಆಡಳಿತವನ್ನು ಮುಂದುವರೆಸುತ್ತಿರುವ ದಕ್ಷಿಣ ಆಫ್ರಿಕಾದ ವರ್ಣದ್ವೇಷಿಗಳು ಈಗೇಕೆ ಮಾತುಕತೆಗೆ ಬಂದಿದ್ದಾರೆ ?

ಇದಕ್ಕೆ ನಾಲ್ಕು ಕಾರಣಗಳಿವೆ. ಮೊದಲನೆಯದಾಗಿ, ಅಂಗೋಲಾ ಮತ್ತು ಕ್ಯೂಬಾದ ಪಡೆಗಳು ಹಾಗೂ ಸ್ವಾಪೋ ವಿಮೋಚನಾ ಹೋರಾಟಗಾರರು ತಮ್ಮ ಸೈನಿಕ ಕಾರ್ಯಾಚರಣೆಗಳನ್ನು ದಕ್ಷಿಣ ಅಂಗೋಲಾವನ್ನೆಲ್ಲಾ ವ್ಯಾಪಿಸುವಂತೆ ವಿಸ್ತರಿಸಿ ಗಮನಾರ್ಹ ಮುನ್ನಡೆ ಸಾಧಿಸಿ, ವರ್ಣದ್ವೇಷೀ ಪಡೆಗಳು ಬಹಳಷ್ಟು ಹಿಂದೆ ಸರಿಯುವಂತೆ ಮಾಡಿರುವುದು. ಎರಡನೆಯದಾಗಿ, ದಕ್ಷಿಣಾ ಆಫ್ರಿಕಾದ ಒಳಗೇನೇ ವಿಮೋಚನಾ ಹೋರಾಟ ತೀವ್ರಗೊಂಡಿರುವುದು. ಮೂರನೆಯದಾಗಿ ಸ್ವಾಪೋ ನೇತೃತ್ವದ ನಮೀಬಿಯಾ ಜನತಾ ವಿಮೋಚನಾ ಸೇನೆ ಸಾಧಿಸಿರುವ ಮಹತ್ವದ ಮಿಲಿಟರಿ ವಿಜಯಗಳು. ಈ ವರ್ಷದ ಜುಲೈವರೆಗೆ ವಿಮೋಚನಾ ಪಡೆಗಳು 592 ವರ್ಣದ್ವೇಷೀ ಸೈನಿಕರನ್ನು ಕೊಂದಿವೆ. ಕಳೆದ ವರ್ಷದಿಂದೀಚೆಗೆ 1593 ದಕ್ಷಿಣ ಆಫ್ರಿಕಾ ಪಡೆಗಳು ವಿಮೋಚನಾ ಸೈನಿಕರಿಗೆ ಬಲಿಯಾಗಿವೆ. ನಾಲ್ಕನೆಯದಾಗಿ ಜಾಗತಿಕ ರಾಜಕೀಯದಲ್ಲಿನ ಬೆಳವಣಿಗೆಗಳು, ಆಫಘಾನಿಸ್ತಾನ್ ಒಪ್ಪಂದ, ಸೋವಿಯೆತ್–ಅಮೆರಿಕನ್ ಒಪ್ಪಂದಗಳು ಇತ್ಯಾದಿ.

ಆದರೂ ಜಾಗರೂಕವಾಗಿರುವಂತೆ ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್ (ಎ.ಎನ್.ಸಿ.) ಅಂಗೋಲಾ, ಕ್ಯೂಬಾ ಹಾಗೂ ಸ್ವಾಪೋಗೆ ಸಲಹೆ ನೀಡಿದೆ. ಯಾಕೆಂದರೆ ದಕ್ಷಿಣಆಫ್ರಿಕಾದ ಬಿಳಿಯ ಸರ್ಕಾರ ಒಪ್ಪಂದಗಳನ್ನು ಮುರಿಯುವ ಒಂದು ದಾಖಲೆಗಳ ಸರಮಾಲೆಯನ್ನೇ ಹೊಂದಿದೆ. ವಿಶ್ವಸಂಸ್ಥೆಯ ನಿರ್ಣಯವನ್ನು ಉಲ್ಲಂಘಿಸಲು ಕಳೆದ ಹನ್ನೆರಡು ವರ್ಷಗಳಿಂದ ದಕ್ಷಿಣ ಆಫ್ರಿಕಾ ಒಂದಲ್ಲ, ಹಲವಾರು ನೆವಗಳನ್ನು ಸೃಷ್ಟಿಸುತ್ತಲೇ ಬಂದಿದೆ. ಇತ್ಯರ್ಥಕ್ಕೆ 14 ಅಂಶಗಳ ನೀತಿಯನ್ನು ಒಪ್ಪಿಕೊಂಡ ಬೆನ್ನ ಹಿಂದೆಯೇ ದಕ್ಷಿಣ ಆಫ್ರಿಕಾ ಉತ್ತರ ನಮೀಬಿಯಾದಲ್ಲಿ ಸೈನ್ಯ ಜಮಾವಣೆ ಆರಂಭಿಸಿದೆ. ವಾಲ್ವಿಸ್ ಅಖಾತದಲ್ಲಿರುವ ನಮೀಬಿಯಾದ ಪ್ರಮುಖ ಬಂದರವೊಂದರಲ್ಲಿ ಎರಡು ತಿಂಗಳ ಮಿಲಿಟರಿ ಕವಾಯತು ನಡೆಸಲು ತಯಾರಿ ಆರಂಭಿಸಿದೆ. ಜಲಮಾರ್ಗ ಆಕ್ರಮಣದ ಚಾಕಚಕ್ಯತೆಯನ್ನು ಗಳಿಸುವುದೇ ಈ ಕವಾಯತಿನ ಉದ್ದೇಶ. ಅಲ್ಲದೆ ವಾಲ್ವಿಸ್ ಅಖಾಡ ನಮೀಬಿಯಾಕ್ಕೆ ಸೇರಿದ್ದಲ್ಲ ಎಂದು ಅದು ಹಿಂದಿನಿಂದಲೂ ಕುತರ್ಕ ಮಾಡುತ್ತಲೇ ಬಂದಿದೆ.

ಅಮೆರಿಕಾದ ಆಫ್ರಿಕನ್ ವ್ಯವಹಾರಗಳ ಉಪಕಾರ್ಯದರ್ಶಿ ಚೆಸ್ಟರ್ ಕ್ರೋಕರ್ ಅಂಗೋಲಾದಲ್ಲಿ ಯುದ್ಧ ನಿಂತರೂ ಯುನಿಟಾ ಪಡೆಗಳಿಗೆ ಅಮೇರಿಕಾದ ನೆರವು ಮುಂದುವರಿಯುತ್ತದೆ ಎಂದು ಹೇಳಿರುವುದು ಸಾಮ್ರಾಜ್ಯಶಾಹಿಗಳು ಕೊನೆಯ ಗಳಿಗೆಯವರೆಗೂ ಅಡ್ಡಿ–ಆತಂಕ ಒಡ್ಡಬಹುದು ಎಂಬುದನ್ನು ಸೂಚಿಸಿದೆ.

ಆದರೂ ನಮೀಬಿಯಾದ ಸ್ವಾತಂತ್ರ್ಯವನ್ನು ಬಹಳ ದಿನ ಮುಂದೂಡಲು ದಕ್ಷಿಣಆಫ್ರಿಕಾದ ವರ್ಣದ್ವೇಷಿಗಳಿಗೆ ಹಾಗೂ ಅವರ ಪಾಶ್ಚಿಮಾತ್ಯ ಮಿತ್ರರಿಗೆ ಸಾಧ್ಯವಾಗಲಿಕ್ಕಿಲ್ಲ. ಯಾಕೆಂದರೆ ನಮೀಬಿಯಾದಲ್ಲಿ ಅದರ ಬರ್ಬರ, ಅಮಾನುಷ ಜನಾಂಗ ದ್ವೇಷ ಎಲ್ಲಾ ವಿಭಾಗಗಳಲ್ಲೂ ತೀವ್ರ ಆಕ್ರೋಶ ಹುಟ್ಟಿಸಿದೆ. ಜೂನ್ ತಿಂಗಳಲ್ಲಿ 75 ಸಾವಿರ ವಿದ್ಯಾರ್ಥಿಗಳು ಮುಷ್ಕರ ಹೂಡಿದರು. ಅವರಿಗೆ ಬೆಂಬಲವಾಗಿ 80 ಸಾವಿರ ಕಾರ್ಮಿಕರು ಜೂನ್ 20-21 ರಂದು ಮುಷ್ಕರ ನಡೆಸಿದರು. ಇತ್ತೀಚೆಗೆ ನಾಲ್ಕು ರಾಷ್ಟ್ರಗಳ ಮಾತುಕತೆಯ ನಂತರ ನಮೀಬಿಯಾದಲ್ಲಿ ಬಿಳಿಯರಲ್ಲಿ ಕೂಡ ಹಲವರು ಸ್ವಾಪೋ ಮುಂದೆ ನಡೆಯಬಹುದಾದ ಚುನಾವಣೆಗಳಲ್ಲಿ ಭಾರೀ ವಿಜಯ ಗಳಿಸಬಹುದೆಂದು ಸ್ವಾಪೋದತ್ತ ಧಾವಿಸುತ್ತಿದ್ದಾರೆ.

'ನಮ್ಮ ನಿಲುವು ಸ್ಪಷ್ಟ. ಸ್ವಾಪೋ ಮತ್ತು ದಕ್ಷಿಣ ಆಫ್ರಿಕಾದ ನಡುವೆ ಒಪ್ಪಂದ ನಿರ್ಣಯ 435 ರ ಪ್ರಕಾರ ಮಾತ್ರವೇ ಸಾಧ್ಯ. ಆ ಪ್ರಕಾರ ದಕ್ಷಿಣ ಆಫ್ರಿಕಾ ತನ್ನ ಕಾನೂನು ಬಾಹಿರ ಆಳ್ವಿಕೆಯನ್ನು ಹಿಂತೆಗೆದುಕೊಳ್ಳುವುದೊಂದೇ ಶಾಂತಿಯುತ ಪರಿಹಾರದ ಮಾರ್ಗ. ನಾವು ಯಾವ ನಮೀಬಿಯಾ ಜನತೆಗಾಗಿ ಹೋರಾಡುತ್ತಿದ್ದೇವೋ ಅವರ ಹಿತಾಸಕ್ತಿಗಳಿಗೆ ಮಾರಕವಾದ ಯಾವುದೇ ರಿಯಾಯ್ತಿ ನೀಡಲು ಸಿದ್ಧರಿಲ್ಲ. ನಮೀಬಿಯಾ ಸ್ವಾತಂತ್ರ್ಯಕ್ಕೆ ರಾಜತಾಂತ್ರಿಕ, ರಾಜಕೀಯ ಪರಿಹಾರ ದೊರೆಯದಿದ್ದರೆ ನಮ್ಮ ಸಶಸ್ತ್ರ ವಿಮೋಚನಾ ಹೋರಾಟವನ್ನು ತೀವ್ರಗೊಳಿಸದೆ ಬೇರೆ ದಾರಿಯೇ ಉಳಿಯುವುದಿಲ್ಲ' ಎಂಬ ಸ್ವಾಪೋ ಪಾಲಿಟ್ ಬ್ಯೂರೋ ಸದಸ್ಯ ತಾವೇಕೆ ಅಂಥೋಣಿ ಕಟಾಮಿಲಾರವರ ಹೇಳಿಕೆ ವಿಮೋಚನಾ ಹೋರಾಟಗಾರರ ದೃಢ ನಿರ್ಧಾರವನ್ನು ಸ್ಪಷ್ಟವಾಗಿ ವ್ಯಕ್ತಪಡಿಸುತ್ತದೆ.

ನಿರ್ಣಯ ಸಂಖ್ಯೆ 435

ಸೆಪ್ಟೆಂಬರ್ 29, 1978 ರಂದು ಭದ್ರತಾ ಸಮಿತಿ ಅಂಗೀಕರಿಸಿದ ನಿರ್ಣಯದ ಪ್ರಮುಖ ಅಂಶಗಳು.

ವಿಶ್ವಸಂಸ್ಥೆಯ ಭದ್ರತಾ ಸಮಿತಿ ನಮೀಬಿಯಾದಲ್ಲಿ ದಕ್ಷಿಣ ಆಫ್ರಿಕಾದ ಕಾನೂನುಬಾಹಿರ ಆಳ್ವಿಕೆಯನ್ನು ಹಿಂತೆಗೆದುಕೊಂಡು ಅಧಿಕಾರವನ್ನು ನಮೀಬಿಯಾದ ಜನತೆಗೆ ವಿಶ್ವಸಂಸ್ಥೆಯ ಸಹಕಾರದೊಂದಿಗೆ ನಿರ್ಣಯ 385 ರ ಪ್ರಕಾರ ವರ್ಗಾವಣೆ ಮಾಡುವುದೇ ತನ್ನ ಉದ್ದೇಶ ಎಂದು ಪುನರುಚ್ಚರಿಸುತ್ತದೆ.

...ವಿಶ್ವಸಂಸ್ಥೆಯ ಉಸ್ತುವಾರಿ ಮತ್ತು ಹತೋಟಿಯಲ್ಲಿ ಮುಕ್ತ ಚುನಾವಣೆಗಳ ಮೂಲಕ ತ್ವರಿತವಾಗಿ ನಮೀಬಿಯಾ ಸ್ವಾತಂತ್ರ್ಯ ಸಾಧಿಸಲು ಅನುವಾಗುವಂತೆ ವಿಶ್ವಸಂಸ್ಥೆ ಸಂಕ್ರಮಣ ನೆರವು ಗುಂಪನ್ನು ಸ್ಥಾಪಿಸಬೇಕೆಂದು ನಿರ್ಧರಿಸುತ್ತದೆ,

...ವಿಶ್ವಸಂಸ್ಥೆಯ ಪ್ರಧಾನಕಾರ್ಯದರ್ಶಿಯ ವರದಿ, ಯುದ್ಧವಿರಾಮ ಶರತ್ತುಗಳಿಗೆ ಸಹಿ ಹಾಕಿ, ಪಾಲಿಸಲು ಸಿದ್ಧವೆಂಬ ಸ್ವಾಪೋದ ಸಹಕಾರವನ್ನು ಸ್ವಾಗತಿಸುತ್ತದೆ.

...ವಿಶ್ವಸಂಸ್ಥೆಯ ನಿರ್ಣಯ 385 (1976) ನಿರ್ಣಯ 431(1978) ಹಾಗೂ ಈ ನಿರ್ಣಯ ವ್ಯತಿರಿಕ್ತವಾಗಿ ನಮೀಬಿಯಾದ ಕಾನೂನುಬಾಹಿರ ಸರ್ಕಾರ ಕೈಗೊಂಡ ಎಲ್ಲಾ ಏಕಪಕ್ಷೀಯ ಕ್ರಮಗಳು, ಏಕಪಕ್ಷೀಯವಾಗಿ ಮತದಾರರ ರಿಜಿಸ್ಟ್ರೇಶನ್ ಅಥವಾ ಅಧಿಕಾರದ ವರ್ಗಾವಣೆಯಂತಹ ಕ್ರಮಗಳು ಕೂಡಾ ಪೂರ್ಣವಾಗಿ ರದ್ದಾಗುತ್ತವೆ ಎಂದು ಘೋಷಿಸುತ್ತದೆ.

ಬಿಳಿಯರ ದಬ್ಬಾಳಿಕೆಯ ನೂರು ವರ್ಷಗಳು

ನಮೀಬಿಯಾ ಆಫ್ರಿಕಾ ಖಂಡದ ದಕ್ಷಿಣದ ಪಶ್ಚಿಮ ಭಾಗದಲ್ಲಿರುವ ದೇಶ. 8.24 ಲಕ್ಷ ಚದರ ಕಿಲೋಮೀಟರ್ ವಿಸ್ತೀರ್ಣದ ಈ ದೇಶದ ಜನಸಂಖ್ಯೆ 12 ಲಕ್ಷ. ಇದರಲ್ಲಿ ಬಿಳಿಯರ ಸಂಖ್ಯೆ ಕೇವಲ 78 ಸಾವಿರ. ಇವರಲ್ಲಿ 25 ಸಾವಿರದಷ್ಟು ಜರ್ಮನ್ ಮೂಲದವರು. ಈ ವರ್ಣದ್ವೇಷೀ ಬಿಳಿಯರು, ಮುಖ್ಯವಾಗಿ ಜರ್ಮನ್ ಮೂಲದವರು, ಇದನ್ನು ಈಗಲೂ ನೈಋತ್ಯ ಆಫ್ರಿಕಾವೆಂದೇ ಕರೆಯಲು ಇಷ್ಟಪಡುತ್ತಾರೆ.

1883ರಲ್ಲಿ ಇಲ್ಲಿಯ ಅಂಗ್ರ ಪೆಕ್ವೇನಾ ಎಂಬಲ್ಲಿ ಜರ್ಮನಿಯ ಒಬ್ಬ ವ್ಯಾಪಾರೀ ಲ್ಯೂಡೆರಿಟ್ಜ್ ಎಂಬಾತ ಈ ವಸಾಹತು ಸ್ಥಾಪಿಸಿದ. 1884ರ ಏಪ್ರಿಲ್ 24 ರಂದು ಬ್ರಿಟನ್–ಜರ್ಮನಿಗಳ ನಡುವೆ ರಾಜತಾಂತ್ರಿಕ ತಿಕ್ಕಾಟ ನಡೆದು ಇದು ಜರ್ಮನಿಯ ವಸಾಹತುವಾಗಿ ಮಾರ್ಪಟ್ಟಿತ್ತು. ಅಂದಿನಿಂದ ಈ ನೂರು ವರ್ಷಗಳ ನಂತರವೂ ನಮೀಬಿಯಾ ಸ್ವಾತಂತ್ರ್ಯದಿಂದ ವಂಚಿತವಾಗಿಯೇ ಉಳಿದಿದೆ.

1919ರಲ್ಲಿ ಪ್ರಥಮ ಮಹಾಯುದ್ಧದ ನಂತರ ಜರ್ಮನಿಯ ಪ್ರಭಾವ ಕುಂಠಿತವಾಗಿ ಅನಂತರ ಹುಟ್ಟಿಕೊಂಡ ಲೀಗ್ ಆಫ್ ನೇಶನ್ಸ್ ಜರ್ಮನಿಯ ಎಲ್ಲಾ ವಸಾಹತುಗಳನ್ನು ಇತರ ವಸಾಹತುಶಾಹೀ ಯುರೋಪಿಯನ್ನರಿಗೆ ನಿಯೋಗ [ಮ್ಯಾಂಡೇಟ್]ವಾಗಿ ಹಂಚಿದಾಗ ನಮೀಬಿಯಾ ದಕ್ಷಿಣ ಆಫ್ರಿಕಾದ ಬಿಳಿಯ ವಸಾಹತುಗಾರರ ವ್ಯಾಪ್ತಿಗೆ ಒಳಗಾಯಿತು. ಅಂದಿನಿಂದ ಅದು ನಾಮಮಾತ್ರ ಬಿಟ್ಟು ಬೇರೆಲ್ಲಾ ರೀತಿಯಲ್ಲೂ ದಕ್ಷಿಣ ಆಫ್ರಿಕಾದ ಬಿಳಿಯರ ವಸಾಹತುವಾಗಿಬಿಟ್ಟಿತು. 1945ರಲ್ಲಿ ವಿಶ್ವಸಂಸ್ಥೆ ಇದನ್ನು ವಿಶ್ವಸ್ಥ ಪ್ರದೇಶ [ಟ್ರಸ್ಟೀಶಿಪ್ ಪ್ರದೇಶ] ಎಂದು ಘೋಷಿಸಿದರೂ ದಕ್ಷಿಣ ಆಫ್ರಿಕಾ ಅದು ತನ್ನ ಒಂದು ಪ್ರಾಂತ್ಯವೆಂಬಂತೆಯೇ ನಡೆದುಕೊಂಡಿತು. ವಿಶ್ವದಲ್ಲಿ ಎರಡನೇ ಮಹಾಯುದ್ಧದ ನಂತರ ಚುರುಕುಗೊಂಡ ವಿಮೋಚನಾ ಚಟುವಟಿಕೆಗಳ ಫಲವಾಗಿ ನಮೀಬಿಯಾದಿಂದಲೂ ವಿಮೋಚನೆಯ ಬಗ್ಗೆ ಹಲವಾರು ಮನವಿಗಳು ವಿಶ್ವಸಂಸ್ಥೆಗೆ ಸತತವಾಗಿ ಬರಲಾರಂಭಿಸಿದವು.

1971ರಲ್ಲಿ ಅಂತರಾಷ್ಟ್ರೀಯ ನ್ಯಾಯಾಲಯ ನಮೀಬಿಯಾದಲ್ಲಿ ದಕ್ಷಿಣ ಆಫ್ರಿಕಾದ ಆಳ್ವಿಕೆ ಕಾನೂನುಬಾಹಿರ ಎಂದು ಸಾರಿ ದಕ್ಷಿಣ ಆಫ್ರಿಕಾ ತಕ್ಷಣ ನಮೀಬಿಯಾದಲ್ಲಿ ತನ್ನ ಆಳ್ವಿಕೆಯನ್ನು ಕೊನೆಗೊಳಿಸಬೇಕೆಂದು ವಿಶ್ವಸಂಸ್ಥೆಯ ಭದ್ರತಾ ಸಮಿತಿಗೆ ಸಲಹೆ ಮಾಡಿತು. ವರ್ಣದ್ವೇಷೀ ಸರ್ಕಾರ ಇದನ್ನು ಉಪೇಕ್ಷಿಸಿ ತನ್ನ ಬರ್ಬರ ಆಳ್ವಿಕೆ ಮುಂದುವರೆಸಿತು.

ವಿಶ್ವದ ಕಣ್ಣಿಗೆ ಮಣ್ಣೆರಚಲು ಅದು ಕೆಲವು ತಂತ್ರ ಹೂಡಲು ಪ್ರಯತ್ನಿಸಿತು. 1974ರಲ್ಲಿ ನಮೀಬಿಯಾವನ್ನು ಹತ್ತು 'ಬುಡಕಟ್ಟು ತಾಯ್ನಾಡು'ಗಳು ಅಥವಾ ಬಂಟುಸ್ತಾನಗಳಾಗಿ ವಿಂಗಡಿಸಿ ಆಡಳಿತವನ್ನು ಸ್ಥಳೀಯರಿಗೆ ವಹಿಸಿಕೊಡುವ ನಾಟಕ ಹೂಡಿತು. ವಾಸ್ತವವಾಗಿ ಈ ಸ್ಥಳೀಯರು ಬಿಳಿಯರ ಎಂಜಲಿಗೆ ಕೈಚಾಚಿದ್ದ ಕೆಲವು ಬೆರಳೆಣಿಕೆಯಷ್ಟು ಕರಿಯರು. ಈ ಬಂಟುಸ್ತಾನಗಳಿಗೆ ವಾಸ್ತವವಾಗಿ ಯಾವ ಅಧಿಕಾರವೂ ಇರಲಿಲ್ಲ. ಈ ನಾಟಕ ಪೂರ್ಣವಾಗಿ ವಿಫಲಗೊಂಡಿತು. ದಕ್ಷಿಣ ಆಫ್ರಿಕಾಕ್ಕೆ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಬೆಂಬಲ ನೀಡುತ್ತಿದ್ದ ಪಾಶ್ಚಿಮಾತ್ಯ ದೇಶಗಳು ಇದೊಂದು ಮೋಸ ಎಂದು ಹೇಳಬೇಕಾಯಿತು.

1976ರಲ್ಲಿ ವಿಶ್ವಸಂಸ್ಥೆ ನಿರ್ಣಯ ಸಂಖ್ಯೆ 385ನ್ನು ಅಂಗೀಕರಿಸಿ ಈ ಬಂಟುಸ್ತಾನೀಕರಣವನ್ನು ನಿಲ್ಲಿಸಬೇಕು, ದಕ್ಷಿಣ ಆಫ್ರಿಕಾದ ಪಡೆಗಳು ವಾಪಸಾಗಬೇಕು, ರಾಜಕೀಯ ಕೈದಿಗಳ ಬಿಡುಗಡೆ ಮತ್ತು ವಿಶ್ವಸಂಸ್ಥೆಯ ಉಸ್ತುವಾರಿಯಲ್ಲಿ ಚುನಾವಣೆ ನಡೆದು ಅಧಿಕಾರ ಹಸ್ತಾಂತರವಾಗಬೇಕೆಂದು ಕರೆ ನೀಡಿತು. ಇದನ್ನೂ ದಕ್ಷಿಣ ಆಫ್ರಿಕಾ ಪಾಶ್ಚಿಮಾತ್ಯ ದೇಶಗಳ ಪರೋಕ್ಷ ಬೆಂಬಲದಿಂದ ಉಲ್ಲಂಘಿಸುತ್ತಾ ಬಂತು.

1978ರಲ್ಲಿ ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ನಿರ್ಣಯ ಸಂಖ್ಯೆ 435 [ವಿವರಗಳಿಗೆ ಬಾಕ್ಸ್ ನೋಡಿ] ವಿಶ್ವ ಜನಾಭಿಪ್ರಾಯ ದಕ್ಷಿಣ ಆಫ್ರಿಕಾದ ವರ್ಣದ್ವೇಷಿಗಳ ವಿರುದ್ಧ ನೀಡಿರುವ ಒಂದು ಸಮಗ್ರ ತೀರ್ಪು. 'ನಮೀಬಿಯಾದ ವಿಶ್ವಸಂಸ್ಥೆ ಯೋಜನೆ' ಎಂದೇ ಇದು ಪ್ರಸಿದ್ಧವಾಗಿದೆ. ಇದನ್ನೂ ಕೂಡಾ ದಕ್ಷಿಣ ಆಫ್ರಿಕಾ ಸಾಮ್ರಾಜ್ಯಶಾಹೀ ದೇಶಗಳ ಸಕ್ರಿಯ ಸಹಕಾರದಿಂದಾಗಿ ಉಲ್ಲಂಘಿಸುತ್ತಾ, ನಮೀಬಿಯಾದಲ್ಲಿ ತನ್ನ ಅಲ್ಪಸಂಖ್ಯಾತ ದಬ್ಬಾಳಿಕೆ ಮುಂದುವರೆಸುತ್ತಾ ಬಂದಿದೆ.

ಶೋಷಣೆ-ದಮನ-ವಿಮೋಚನಾಹೋರಾಟ

ಏಕೆ ದಕ್ಷಿಣ ಆಫ್ರಿಕಾದ ವರ್ಣದ್ವೇಷಿಗಳು ನಮೀಬಿಯಾವನ್ನು ಪಟ್ಟಾಗಿ ಹಿಡಿದ್ದಾರೆ. ಸ್ವಾತಂತ್ರ್ಯದ ಹರಿಕಾರರೆನ್ನುವ ಪಾಶ್ಚಿಮಾತ್ಯ ದೇಶಗಳು ಏಕೆ ಅವರಿಗೆ ಬೆಂಬಲ ನೀಡುತ್ತಿದ್ದಾರೆ? ನಮೀಬಿಯಾದ ಅಗಾಧ ಪ್ರಾಕೃತಿಕ ಸಂಪನ್ಮೂಲ, ವರ್ಣದ್ವೇಷವೆಂಬ ಅತ್ಯಂತ ಕ್ರೂರ ವರ್ಗಶೋಷಣೆಯ ಮೂಲಕ ಭಾರಿ ಲಾಭದ ಆಸೆಯೇ ಇದಕ್ಕೆ ಕಾರಣ.

1928 ರಲ್ಲಿ ಇಲ್ಲಿನ ನಮೀಬ್ ಮರಳುಗಾಡಿನಲ್ಲಿ ಯುರೇನಿಯಂ ನಿಕ್ಷೇಪಗಳ ಪತ್ತೆಯಾಯಿತು. ಪರಮಾಣು ತಂತ್ರಜ್ಞಾನದ ಅಭಿವೃದ್ಧಿಯೊಂದಿಗೆ ಯುರೇನಿಯಂ ಉತ್ಪಾದನೆ ತ್ವರಿತವಾಗಿ ಹೆಚ್ಚುತ್ತಿದ್ದ 1960 ರ ದಶಕದಲ್ಲಿ ಈ ಪ್ರದೇಶವನ್ನು ತನ್ನ ಮುಷ್ಠಿಯಲ್ಲಿಯೇ ಇಟ್ಟುಕೊಳ್ಳುವ ಆಕಾಂಕ್ಷೆ ದಕ್ಷಿಣ ಆಫ್ರಿಕಾಕ್ಕೆ ದಿನೇ-ದಿನೇ ಬಲಿಯಲಾರಂಭಿಸಿತು. ಇದಲ್ಲದೆ ವಜ್ರ, ತಾಮ್ರ, ಸತುವು, ಲಿಥಿಯಂ, ಬೆಳ್ಳಿ, ವನಾಡಿಯಂ, ತವರ, ಸೀಸ ಮುಂತಾದ ಅಪಾರ ನಿಕ್ಷೇಪಗಳೂ ಈ ಪ್ರದೇಶದಲ್ಲಿವೆ. ಇವೆಲ್ಲಾ ಮಿಲಿಟರಿ ಉತ್ಪಾದನೆಯಲ್ಲಿ ಬೆಲೆಬಾಳುವ ಕಚ್ಚಾ ಸಾಮಗ್ರಿಗಳು.

ಈ ಸಂಪತ್ತೆಲ್ಲಾ ಎಲ್ಲಿಗೆ ಹೋಗುತ್ತದೆ ? ವಜ್ರಗಳ ಉತ್ಪಾದನೆಯನ್ನು ಮಾಡುತ್ತಿರುವ ಕಂಪನಿ ದಕ್ಷಿಣ ಆಫ್ರಿಕಾದ್ದು. 1983 ರಲ್ಲಿ ಅದು 13ಲಕ್ಷ ಕ್ಯಾರೆಟ್ ವಜ್ರ ಉತ್ಪಾದಿಸಿತು. ಯುರೇನಿಯಂ ಗಣಿಗಾರಿಕೆಯನ್ನು ದಕ್ಷಿಣ ಆಫ್ರಿಕಾ ಮತ್ತು ಫ್ರಾನ್ಸಿನ ಎರಡು ಕಂಪೆನಿಗಳು ಜಂಟಿಯಾಗಿ ನಡೆಸುತ್ತಿವೆ. ವಿವಿಧ ಲೋಹಗಳ ಉತ್ಪಾದನೆಯ ಅಪಾರ ಲಾಭ ದಕ್ಷಿಣ ಆಫ್ರಿಕಾ, ಅಮೆರಿಕ, ಕೆನಡಾ ಹಾಗೂ ಪಶ್ಚಿಮ ಜರ್ಮನಿಯ ಬಂಡವಾಳಶಾಹಿಗಳ ಹೊಟ್ಟೆ ಸೇರುತ್ತಿದೆ. ವರ್ಣದ್ವೇಷ ನೀತಿ, ಬಂಟುಸ್ತಾನೀಕರಣ ಹಾಗೂ ಇವೆರಡನ್ನು ಜಾರಿಗೊಳಿಸಲು ಇರುವ ಫ್ಯಾಸಿಸ್ಟ್ ಆಡಳಿತ ಯಂತ್ರ ಕರಿಯರನ್ನು ಹಿಂಡಿ ಲಾಭ ಸೂರೆ ಹಾಕಲು ಬಂಡವಾಳಶಾಹಿಗಳು ಕಂಡುಕೊಂಡಿರುವ ಅತ್ಯಂತ ದಕ್ಷ ಉಪಾಯ.

1884 ರಲ್ಲಿ ನಮೀಬಿಯಾ ಜರ್ಮನ್ ವಸಾಹತುವಾದ ದಿನದಿಂದಲೇ ತೀವ್ರ ಪ್ರತಿರೋಧ ಆಗಾಗ ಭುಗಿಲೆನ್ನುತ್ತಲೇ ಬಂದಿದೆ. ಈ ಶತಮಾನದ ಮೊದಲೆರಡು ದಶಕಗಳಲ್ಲಿ ಜರ್ಮನ್ ಹಾಗೂ ಇತರ ಬಿಳಿಯ ವಸಾಹತುಶಾಹಿಗಳು ವಿವಿಧ ಬುಡಕಟ್ಟುಗಳ ತೀವ್ರ ಪ್ರತಿರೋಧಗಳನ್ನು ಅಮಾನುಷವಾಗಿ ಹತ್ತಿಕ್ಕಿದರು. ಎರಡನೇ ಮಹಾಯುದ್ಧದ ನಂತರ ಫ್ಯಾಸಿಸಂನ ಪತನ ಮತ್ತು ಸಮಾಜವಾದಿ ಬಣದ ಉದಯದಿಂದಾಗಿ ವಿಶ್ವಾದ್ಯಂತ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟಗಳು ತೀವ್ರಗೊಂಡಾಗ ನಮೀಬಿಯಾದಲ್ಲೂ 1950 ರ ದಶಕದಲ್ಲಿ ಹಲವಾರು ರಾಷ್ಟ್ರವಾದೀ ರಾಜಕೀಯ ಸಂಘಟನೆಗಳು ಹುಟ್ಟಿಕೊಂಡವು. ಇವುಗಳೆಲ್ಲಾ ಕ್ರೋಢೀಕರಣಗೊಂಡು 1959 ರಲ್ಲಿ ಸೌತ್ ವೆಸ್ಟ್ ಆಫ್ರಿಕಾ ನ್ಯಾಶನಲ್ ಯೂನಿಯನ್ (ಸ್ವಾನು) ಸ್ಥಾಪನೆಯಾಯಿತು. ಮುಂದೆ ಇದು ಇನ್ನಷ್ಟು ವಿಸ್ತಾರಗೊಂಡು ಏಪ್ರಿಲ್ 19, 1960 ರಂದು ಸ್ವಾಪೋ (ಸೌತ್ ವೆಸ್ಟ್ ಆಫ್ರಿಕಾ ಪೀಪಲ್ಸ್ ಆರ್ಗನೈಸೇಶನ್) ಸ್ಥಾಪನೆಗೊಂಡು ನಮೀಬಿಯಾ ಜನತೆಯ ಏಕಮಾತ್ರ ವಕ್ತಾರವಾಗಿ ಮೂಡಿಬಂತು. 1966 ರಲ್ಲಿ ಸಶಸ್ತ್ರ ಹೋರಾಟದ ಆರಂಭ. ವಿಮೋಚನಾ ಸೇನೆಯ ಸ್ಥಾಪನೆಯೊಂದಿಗೆ ವಿಮೋಚನಾ ಆಂದೋಲನ ವ್ಯಾಪಕಗೊಂಡಿತು. 1970 ರ ದಶಕದಲ್ಲಿ ರಾಜಧಾನಿ ವಿಂಡ್‌ಹೋಕ್ ಮತ್ತಿತರ ನಗರಗಳಲ್ಲಿ, ಗಣಿಗಳಲ್ಲಿ ಮುಷ್ಕರಗಳು, ಮತಪ್ರದರ್ಶನಗಳು ಆಂದೋಲನವನ್ನು ಇನ್ನಷ್ಟು ಬಲಗೊಳಿಸಿದವು. 1976 ರಲ್ಲಿ ಉತ್ತರದ ನೆರೆದೇಶ ಅಂಗೋಲಾ ಪೋರ್ಚುಗೀಸ್‌ರಿಂದ ವಿಮೋಚನೆಗೊಂಡಿದ್ದು ನಮೀಬಿಯಾದ ವಿಮೋಚನಾ ಆಂದೋಲನಕ್ಕೆ ಒಂದು ಹೊಸ ಚೇತನ ಹಾಗೂ ಶಕ್ತಿಶಾಲೀ ಮಿತ್ರನನ್ನು ದೊರಕಿಸಿಕೊಟ್ಟಿತು.

ಸ್ವಾಪೋ ನಮೀಬಿಯಾದ ಸ್ವಾತಂತ್ರ್ಯಕ್ಕಾಗಿ ಸಶಸ್ತ್ರ ಹಾಗೂ ರಾಜಕೀಯ ಹೋರಾಟಗಳೆರಡನ್ನೂ ಏಕಕಾಲದಲ್ಲಿ ನಡೆಸುತ್ತಿರುವ ಸಂಘಟನೆ. ನಮೀಬಿಯಾದ ಪ್ರಾದೇಶಿಕ ಸಮಗ್ರತೆ, ಪ್ರಜಾಸತ್ತಾತ್ಮಕ ಸರಕಾರ, ಪ್ರಗತಿಪರ ಸುಧಾರಣೆಗಳಿಗಾಗಿ ಅದು ಒತ್ತಾಯಿಸುತ್ತಾ ಬಂದಿದೆ. ಈಗ ಸ್ವಾಪೋದ ಅಧ್ಯಕ್ಷ ಸಾಮ್ ನುಜೋಮಾ ಹಾಗೂ ಪ್ರಧಾನ ಕಾರ್ಯದರ್ಶಿ ತೋಯ್ವೋ ಜಾ ತೋಯ್ವೋ.

ಸ್ವಾಪೋ ಈಗ ದಕ್ಷಿಣ ಆಫ್ರಿಕಾದ ವರ್ಣದ್ವೇಷಿಗಳ ಪ್ರಥಮ ವೈರಿ. ಅವರ ಬಫೆಲೋ ಬಟಾಲಿಯನ್‌ಗಳ ಕ್ರೂರ ಕೂಲಿ ಸೈನಿಕರು ಸ್ವಾಪೋಗೆ ಬೆಂಬಲ ನೀಡುತ್ತಾರೆಂದು ಕಂಡುಬಂದ ಯಾರನ್ನೂ ಬಿಡುವುದಿಲ್ಲ. ಹಳ್ಳಿ-ಹಳ್ಳಿಗಳನ್ನೇ ಧ್ವಂಸ ಮಾಡುತ್ತಾರೆ. ನಮೀಬಿಯಾದ ಮುಕ್ಕಾಲು ಪಾಲು ಭಾಗ 'ಭದ್ರತಾ ವಲಯ'ವಾಗಿ ಯುದ್ಧಕಾಲದ ಕಾನೂನುಗಳಿಗೆ, ಕರ್ಫ್ಯೂಗೆ, ಇಡೀ ದೇಶ ವರ್ಣದ್ವೇಷಿಗಳ ತುರ್ತುಪರಿಸ್ಥಿತಿಯಲ್ಲಿ ನರಳುತ್ತಿದೆ.

ಪ್ರಿಟೋರಿಯಾ ಸರಕಾರ ಹೊಸ ಹೊಸ ಭಯೋತ್ಪಾದಕ ತಂಡಗಳನ್ನು ಸೃಷ್ಟಿಸುತ್ತಿದೆ. ಸ್ವಾಪೋ ಮುಖಂಡರನ್ನು ಅಪಹರಿಸಿ ಕೊಲ್ಲುವುದು ಇವುಗಳಿಗೆ ವಹಿಸಿರುವ ಜವಾಬ್ದಾರಿ. ಪ್ರಗತಿಪರ ರಾಜಕೀಯ ವ್ಯಕ್ತಿಗಳ ಕಾರುಗಳ ನಂಬರುಗಳನ್ನು ಬಳಸಿ ಅವರನ್ನೆಲ್ಲಾ ತೀವ್ರ ಕ್ರಿಮಿನಲ್ ಮೊಕದ್ದಮೆಗಳಲ್ಲಿ ಸಿಲುಕಿಸಿ ವಿಶ್ವಸಂಸ್ಥೆಯ ನಿರ್ಣಯ 435 ನ್ನು ಪಾಲಿಸುವ ಮೊದಲು ಈ ಮುಖಂಡರನ್ನೆಲ್ಲಾ ರಾಜಕೀಯವಾಗಿಯಾದರೂ ಮುಗಿಸಿಬಿಟ್ಟರೆ ತನ್ನ ಕೈಗೊಂಬೆ ಸರಕಾರ ಸ್ಥಾಪಿಸಬಹುದೆಂದು ವರ್ಣದ್ವೇಷಿಗಳ ಲೆಕ್ಕಾಚಾರ.

ಆದರೆ ಹಿಡಿಯಷ್ಟು ಬಿಳಿಯರಿಗೆ ಸ್ವರ್ಗ, ಉಳಿದ ಬಹುಪಾಲು ಕರಿಯರಿಗೆ ಪರಮನರಕದ ಜನಾಂಗದ್ವೇಷದ ಅಮಾನುಷ ಸಿದ್ಧಾಂತದ ಮೇಲೆ ನಿಂತ ವ್ಯವಸ್ಥೆ ಎಷ್ಟು ದಿನ ತಾನೇ ಉಳಿಯಲು ಸಾಧ್ಯ ? ದಲಿತ ಕರಿಯರ ನ್ಯಾಯಬದ್ಧ ಆಕಾಂಕ್ಷೆಗಳನ್ನು ಹಿಡಿದಿಡುವುದು ದಕ್ಷಿಣ ಆಫ್ರಿಕಾದ ಸಾಮ್ರಾಜ್ಯಶಾಹೀ ಗೆಳೆಯರಿಗೂ ಅಸಾಧ್ಯವಾಗುತ್ತಿದೆ. ಆದ್ದರಿಂದಲೇ ವರ್ಣದ್ವೇಷಿಗಳ ಲೆಕ್ಕಾಚಾರ ತಲೆಕೆಳಗಾಗುತ್ತಿದೆ.

ನಮೀಬಿಯಾ ಸ್ವಾತಂತ್ರ್ಯದ ವೇಳಾಪಟ್ಟಿ

ನವಂಬರ್ 1

ದಕ್ಷಿಣ ಆಫ್ರಿಕಾದ ಪಡೆಗಳು ಮತ್ತು ಸ್ವಾಪೋ ಗೆರಿಲ್ಲಾ ಪಡೆಗಳ ನಡುವೆ ನಮೀಬಿಯಾದಲ್ಲಿ ಯುದ್ಧ ವಿರಾಮ. ಸಾಧ್ಯವಾದಷ್ಟು ಬೇಗನೇ ವಿಶ್ವಸಂಸ್ಥೆ ವಿಶೇಷ ಪ್ರತಿನಿಧಿ ಹಾಗೂ ಗುಂಪಿನ (ನಿರ್ಣಯ 435 ನೋಡಿ) ಆಗಮನ.

ಆರು ವಾರಗಳ ನಂತರ

ದಕ್ಷಿಣ ಆಫ್ರಿಕಾದ ಪಡೆಗಳ ಸಂಖ್ಯೆ 12 ಸಾವಿರಕ್ಕೆ ಇಳಿಸಬೇಕು. ಚುನಾವಣಾ ನಿಯಮಗಳ ಪ್ರಕಟಣೆ. ಎಲ್ಲಾ ಭೇದಭಾವ ಹಾಗೂ ಮಿತಿ ಹೇರುವ ಕಾನೂನುಗಳ ರದ್ದತಿ ಎಲ್ಲಾ ಬಿಳಿಯ ಪೊಲೀಸ್ ಮತ್ತು ಸೈನಿಕ ಮೀಸಲು ಸಿಬ್ಬಂದಿಯನ್ನು ನಿಶ್ಶಸ್ತ್ರಗೊಳಿಸುವುದು.

ಒಂಭತ್ತು ವಾರಗಳ ನಂತರ

ದಕ್ಷಿಣ ಆಫ್ರಿಕಾ ಪಡೆಗಳ ಸಂಖ್ಯೆ 8 ಸಾವಿರಕ್ಕಿಳಿಯಬೇಕು. ಅಂಗೋಲಾದಿಂದ ಕಾರ್ಯನಿರ್ವಹಿಸುತ್ತಿರುವ ಗೆರಿಲ್ಲಾಗಳನ್ನು ಶಾಂತಿಯುತವಾಗಿ ನಮೀಬಿಯಾಕ್ಕೆ ರವಾನೆ ಆರಂಭ. ಎಲ್ಲಾ ನಮೀಬಿಯಾದ ಬಂಧುಗಳ, ರಾಕೀಯ ಕೈದಿಗಳ ಬಿಡುಗಡೆ ಪೂರ್ಣಗೊಳ್ಳಬೇಕು.

ಹನ್ನೆರಡು ವಾರಗಳ ನಂತರ

ದಕ್ಷಿಣ ಆಫ್ರಿಕಾ ಪಡೆ 1500 ಕ್ಕಿಳಿಯಬೇಕು. ಅಂಗೋಲಾಕ್ಕೆ ಹೊಂದಿಕೊಂಡಿರುವ ಉತ್ತರದ ಗಡಿಯಲ್ಲಿ ಎಲ್ಲಾ ದಕ್ಷಿಣ ಆಫ್ರಿಕಾದ ಮಿಲಿಟರಿ ನೆಲೆಗಳನ್ನು ವಿಶ್ವಸಂಸ್ಥೆ ಉಸ್ತುವಾರಿಯ ನಾಗರಿಕ ಹತೋಟಿಯ ಮೂಲಕ ನಿಷ್ಕ್ರಿಯಗೊಳಿಸುವುದು.

ಹದಿಮೂರನೇ ವಾರ

ನಾಲ್ಕು ತಿಂಗಳ ಚುನಾವಣಾ ಪ್ರಚಾರ ಆರಂಭ.

ಏಳು ತಿಂಗಳ ನಂತರ

ಸಂವಿಧಾನ ಸಭೆಯ ಚುನಾವಣೆ.

ಚುನಾವಣಾ ಫಲಿತಾಂಶದ ಅಧಿಕೃತ ಘೋಷಣೆಯ ಒಂದು ವಾರದ ನಂತರ

ಎಲ್ಲಾ ದಕ್ಷಿಣ ಆಫ್ರಿಕಾ ಪಡೆಗಳ ವಾಪಸಾತಿ ಸ್ವಾಪೋದ ಆಂತರಿಕ ನೆಲೆಗಳನ್ನು ಮುಚ್ಚುವುದು. ಸಂವಿಧಾನ ಸಭೆಯನ್ನು ಕರೆಯುವುದು.

ಇವೆಲ್ಲವಾದ ನಂತರ ಒಂದು ಸ್ವತಂತ್ರ ನಮೀಬಿಯಾದ ಸಂವಿಧಾನವನ್ನು ರೂಪಿಸಿದ ಸಂವಿಧಾನ ಸಭೆಯ ಅಂತ್ಯ. ಇದಕ್ಕೆ ದಿನಾಂಕ ಗೊತ್ತುಪಡಿಸಿಲ್ಲವಾದರೂ ನವಂಬರ್ 1, 1989 ರೊಳಗೆ ಈ ಪ್ರಕ್ರಿಯೆ ಅಂತ್ಯಗೊಳ್ಳಬೇಕೆಂದೂ ನಾಲ್ಕು ದೇಶಗಳ ಮಾತುಕತೆಗಳ ಇಂಗಿತ.

ಮೋಡ ಮೇಲಿನ ಹುರುಳಿ

ನೀರುಂಡ ನಿಗಿನಿಗಿ ಕೆಂಡ
ಎದುರು ಎಡಬಲ ಸಮುದ್ರ
ಖನಿಜ ಕಗ್ಗತ್ತಲ ನಾಡು
ಬಿಸಿನೆತ್ತರು ಮೆಟ್ಟಿ ನಿಲ್ಲುವ ಹದ್ದು
ಪಾರಿವಾಳಗಳ ಗರಿಹರಿದು
ಚಿಲಿಪಿಲಿ ಸದ್ದಡಗಿಸುವ ಪ್ರಿಟೋರಿಯಾ

ಬಾನಂಚಲ್ಲಿ ಎಂಥದೊ ಕೂಗು
ಎಚ್ಚರಿಕೆಯ ಕರೆಗಂಟೆ
ಸಾವು ಸಮೀಪಿಸುವಾಗ ಸೆಡ್ಡು
ಸೇಡು ಪೂರೈಸುವ ತವಕ
ಬಂದಿ ಪಾರಿವಾಳಗಳ ಬಿಡುಗಡೆಗೆ ಯತ್ನ
ತಾನೆ ಬಂದಿ, ಹೆಸರು ಮಂಡೇಲ.

ಒಬ್ಬ ವ್ಯಕ್ತಿ, ಒಬ್ಬನೇ ವ್ಯಕ್ತಿ
ಹಿಡಿಮದ್ದು ಬೂದಿ ಮುಚ್ಚಿದ ಕೆಂಡ
ಕರಿಯ ಜನರೆದೆಯಲ್ಲಿ ಗೂಡುಕಟ್ಟುತ್ತಾನೆ
ಕನಸುಗಳ ಸೆಟ್ಟು, ಅಲ್ಲೆ ಬೆಚ್ಚಗೆ
ಮನೆ ಮಾಡಿ ಕೂತು ಬಿಡುತ್ತಾನೆ
ದಕ್ಷಿಣ ಆಫ್ರಿಕ ಸಣ್ಣಗೆ ಬೆವರುತ್ತಿದೆ.

ಕಾಲು ಶತಮಾನ ಕಳೆದರೇನು ?
ಸೆರೆವಾಸವು ಲೇಸು
ಎಷ್ಟೊಂದು ಹೃದಯಗಳು ಮಿಡಿಯುತ್ತಾವೆ
ಜಗದಗಲ ಜಗದುದ್ದ ಅರಳುತ್ತಾವೆ
ಬಾಗು ಬೆನ್ನಿಗೋ ಊರುಗೋಲು, ನೋವಿಗೋ ಸಾಂತ್ವನ
ಸಾವು ಅವರು ಇವರು.

ಗಾಳಿಬೀಸುವುದು ಅಲೆ ಅಲೆಯಾಗಿ
ತೆರೆಯಪ್ಪಳಿಸುವುದು, ಕಡಲುಮೊರೆಯುವುದು
ಬಂದರು ಜಹಜಿನ ನಿಶಾನೆಯಲುಗಾಟ
ಗರಿಕೆ ಚಿಗುರುವುದು ಕಾಡುಮಲ್ಲಿಗೆ ಬಿರಿಯುವುದು
ಬಿಳಿಯಾ ತರಗೆಲೆ.
ಇನ್ನೆಷ್ಟು ಕಾಲ ಮರಕಂಟೀತು ?

ಕರಿಯ ಕಂಬಳಿ ಹುಳುವಿನ ಗುಂಪು
ಮೋಡ ಮೇಲಿನ ಹುರುಳಿ ಛಿಟಿಛಿಟಿಲು
ಬೆಂಕಿ ಕಾವಿಗೆ ಕಪ್ಪೋ ಕಪ್ಪು
ನೆರಳು ಬೆಳಕಿನ ಸಮರ ಚಕ್ರವ್ಯೂಹ
ಗುಂಡೇಟು ಛಡಿಯೇಟು ಗಲ್ಲಿಗೇರುವ ಕರಿಯಾ
ವೀರಗೀತೆಯ ಜನಕ
ಹಾಡು ತುಂಬಿದನಾಡು. ನೋವು ತುಂಬಿದ ಹಾಡು
ತರಗೆಲೆಯ ಸುತ್ತೆಲ್ಲ ಬೆಂಕಿಯುಂಡೆ.

—ಕೆ. ಎಂ. ಮುನಿಕೃಷ್ಣಪ್ಪ

ಸೆ. 26ರ ವಿದ್ಯಾರ್ಥಿ ಮುಷ್ಕರ ಯಶಸ್ವಿಗೊಳಿಸಿ

ಕೇಂದ್ರ ಸರ್ಕಾರದ ನೂತನ ಶಿಕ್ಷಣ ನೀತಿ ವಾಪಸಾತಿ, ಶುಲ್ಕಗಳ ಹೆಚ್ಚಳ,ಶಿಕ್ಷಣದ ಪ್ರವೇಶಾವಕಾಶ ಕಡಿತ-ಖಾಸಗೀಕರಣ ತಡೆಗಟ್ಟುವಿಕೆ ದುರ್ಬಲ ವರ್ಗದ ವಿದ್ಯಾರ್ಥಿಗಳಿಗೆ ಸಹಾಯ ನಿಧಿ ಕಡಿತದ ತಡೆ, ಶಿಕ್ಷಣಕ್ಕೆ ಕೇಂದ್ರದಿಂದ ಹೆಚ್ಚಿನ ಹಣಕಾಸು ನೀಡಿಕೆ, ಪಂಜಾಬ್ ಸಮಸ್ಯೆಗೆ ರಾಜಕೀಯ ಪರಿಹಾರ-ಕರಾಳ ಮಸೂದೆಗಳ ವಾಪಸಾತಿ ರಾಜೀವ್ ಸರ್ಕಾರದ ರಾಜೀನಾಮೆ ಮುಂತಾದ 18 ಪ್ರಮುಖ ಬೇಡಿಕೆಗಳ ಆಧಾರದಲ್ಲಿ ಎಸ್.ಎಫ್.ಐ. ಒಳಗೊಂಡು ಏಳು ಪ್ರಮುಖ ವಿದ್ಯಾರ್ಥಿ-ಯುವಜನ ಸಂಘಟನೆಗಳು. ಸೆಪ್ಟಂಬರ್.26-1988 ರಂದು ಅಖಿಲ ಭಾರತ 'ವಿದ್ಯಾರ್ಥಿ ಮುಷ್ಕರಕ್ಕೆ' ಕರೆ ನೀಡಲಾಗಿದೆ.

ಸ್ವಾತಂತ್ರ್ಯ ನಂತರದ ಸಂಘಟಿತ ವಿದ್ಯಾರ್ಥಿ ಚಳುವಳಿಯಲ್ಲಿ ಪ್ರಪ್ರಥಮವಾದ ಈ ಹೋರಾಟ ಐತಿಹಾಸಿಕವಾಗಿದೆ.

ಕರ್ನಾಟಕ ರಾಜ್ಯದಲ್ಲಿಯೂ ತರಗತಿಗಳ ಬಹಿಷ್ಕಾರ-ಮೆರವಣಿಗೆ ಕೇಂದ್ರ ಕಛೇರಿ ಎದುರು ಪ್ರದರ್ಶನ-ರೈಲು ತಡೆ ಮುಂತಾಗಿ ನಡೆಸಲಾಗುವುದು.

ಎಸ್.ಎಫ್.ಐ' ಮತ್ತು ರಾಜ್ಯ ಯುವ ಜನತಾ ಪ್ರತಿನಿಧಿಗಳ ನಡುವೆ ಮಾತುಕತೆ ನಡೆದು ಜಂಟಿ ಹೋರಾಟಕ್ಕೆ ನಿರ್ಧರಿಸಲಾಗಿದೆ.

ಈ ಕಾರ್ಯಕ್ರಮ ಮುಖ್ಯವಾಗಿ ಶಿಕ್ಷಣ ಉಳಿಸಿ ಸಮಾವೇಶದ ಒಂದು ಲಕ್ಷ ವಿದ್ಯಾರ್ಥಿಗಳು ಪಾಲ್ಗೊಳ್ಳಲು ನೀಡಿದ ಕರೆ ಅತ್ಯಂತ ಯಶಸ್ವಿಗೊಳಿಸಲು ವಿನಂತಿಸಲಾಗಿದೆ.

ಸೆಪ್ಟೆಂಬರ್ ಚಳುವಳಿ ಎಲ್ಲೆಡೆ ಯಶಸ್ವಿ

ಅಖಿಲಭಾರತ ಕಿಸಾನ್ ಸಭಾ ಹಾಗೂ ಅಖಿಲಭಾರತ ಕೃಷಿ ಕಾರ್ಮಿಕರ ಸಂಘ ಮತ್ತಿತರ ಎಡ ಪಕ್ಷಗಳ ರೈತ ಸಂಘಗಳು ನೀಡಿದ ಕರೆಯಂತೆ ಸೆಪ್ಟೆಂಬರ್ 1ರಿಂದ 15ರ ವರೆವಿಗೆ ದೇಶದ ವಿವಿಧ ರಾಜ್ಯಗಳಲ್ಲಿ ನಡೆದ ಚಳುವಳಿಯ ವರದಿ ಇಲ್ಲಿ ನೀಡಲಾಗಿದೆ.

ಒರಿಸ್ಸಾ

ಒರಿಸ್ಸಾದಲ್ಲಿ ಸುಮಾರು 52,375 ಕಾರ್ಯಕರ್ತರು ರಸ್ತೆ ತಡೆ ಚಳುವಳಿಯಲ್ಲಿ ಭಾಗವಹಿಸಿದ್ದರು. 75 ವಿವಿಧ ಸ್ಥಳಗಳಲ್ಲಿ ಸೆಪ್ಟೆಂಬರ್ 5 ರಿಂದ 9 ರವರೆಗೆ ನಡೆಯಿತು. ರಾಮ್ ನಾರಾಯಣ್ ಗೋಸ್ವಾಮಿ ಎಂ.ಪಿ. (ಅಖಿಲ ಭಾರತ ಕಿಸಾನ್ ಸಭಾದ ಸಹ ಕಾರ್ಯದರ್ಶಿ) ಕೂಡ ಭಾಗವಹಿಸಿದ್ದರು. ಡಿ. ಸಿ. ಮಲ್ಲಿಕ್ ಎಂ. ಪಿ., ಪುರಿಯಲ್ಲಿ ನಡೆದ ರಸ್ತೆ ರೋಕೋ ಚಳುವಳಿಯಲ್ಲಿ ಭಾಗವಹಿಸಿದ್ದರು.

ಸೆಕ್ರೆಟೇರಿಯಟ್ ಭವನದ ಮುಂದೆ ಪಿಕೆಟಿಂಗ್ ನಡೆಸಿ ಕಾ|| ಶಿವಾಜಿ ಪಾಟ್ ನಾಯಕ್ ಸಿ.ಪಿ.ಐ.(ಎಂ) ರಾಜ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಸುಮಾರು 10 ಸಾವಿರ ಕಾರ್ಯಕರ್ತರು ಬಂಧನಕ್ಕೊಳಗಾದರು. ಈ ಸಂದರ್ಭದಲ್ಲಿ ಲಾಠಿಚಾರ್ಜ್ ನಡೆಯಿತು. ರೈತರ ಚಳುವಳಿಯ ಬೆಂಬಲವಾಗಿ ಕಾರ್ಖಾನೆಯ ಕಾರ್ಮಿಕರು ಆ ದಿನ ಕೆಲಸಕ್ಕೆ ಹಾಜರಾಗದೆ ಮುಷ್ಕರ ನಡೆಸಿದರು.

ರಾಜಸ್ಥಾನ

ಸೆಪ್ಟೆಂಬರ್ 5 ರಿಂದ ಸುಮಾರು 5 ಜಿಲ್ಲೆಗಳಲ್ಲಿ 2,500 ಕಾರ್ಯಕರ್ತರು ಬಂಧನಕ್ಕೊಳಗಾದರು. ಸೆಪ್ಟೆಂಬರ್ 15 ರಂದು ಕಾರ್ಖಾನೆಯ ಕೆಲಸಗಾರರು ಕೂಡ ರೈತರ, ಕೃಷಿ ಕೂಲಿಗಾರರ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಅಸ್ಸಾಂ

ಸೆಪ್ಟೆಂಬರ್ 9 ರಂದು ಬಿರುಸಿನ ಮಳೆಯಿಂದ ಪ್ರವಾಹವಿದ್ದರೂ ಕೂಡ 7,000 ಕಾರ್ಯಕರ್ತರು 8 ಜಿಲ್ಲೆಗಳಲ್ಲಿ 33 ಕೇಂದ್ರಗಳ ವಿವಿಧೆಡೆಗಳಲ್ಲಿ ಬಂಧನಕ್ಕೊಳಗಾದರು. ಇತರೆ ಜಿಲ್ಲೆಗಳಲ್ಲಿ ಧರಣಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ವಿಜಿಣಿಯಲ್ಲಿ ಕಾರ್ಯಕರ್ತರಿಗೆ ಪೊಲೀಸರು ಮನಸ್ಸಿಗೆ ಬಂದಂತೆ ಲಾಠಿಚಾರ್ಜ್ ಮಾಡಿದರು. ನಂತರ ಬಂಧಿಸಿ ಕಾರ್ಯಕರ್ತರನ್ನು ಸುಮಾರು 10 ಬಂದಿಖಾನೆಗಳಲ್ಲಿ ಇರಿಸಲಾಗಿತ್ತು. ಸೆಪ್ಟೆಂಬರ್ 14 ರಂದು ಮತ್ತೆ ಸಬ್‌ಡಿವಿಷನ್ ಕಛೇರಿಯ ಮುಂದೆ ಧರಣಿ ನಡೆಸಲಾಯಿತು.

ಪಂಜಾಬ್

5 ದಿವಸಗಳ ಕಾಲ ಬಂಧನಕ್ಕೊಳಗಾಗುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಕತ್ತರ್ ಪುಲಾ ಜಿಲ್ಲೆಯೊಂದನ್ನು ಬಿಟ್ಟು ಮಿಕ್ಕ ಎಲ್ಲೆಡೆ ಸುಮಾರು 37,000 ಕಾರ್ಯಕರ್ತರು ಬಂಧನಕ್ಕೊಳಗಾದರು. ಸುಮಾರು 10 ಕಿ.ಮೀ.ಗಳಿಗಿಂತ ದೂರವಿರುವ ಬಂದಿಖಾನೆಗಳಲ್ಲಿ ಬಂಧಿಸಿದ್ದರು.

ಸುಮಾರು 5 ಸಾವಿರ ಬಲಿಷ್ಠವಾದ ಒಂದು ತಂಡದಲ್ಲಿ ಯುವಜನರು ಕೂಡ ಭಾಗವಹಿಸಿದ್ದರು. ಸೆಪ್ಟೆಂಬರ್ 12 ರಂದು ಸುಮಾರು 12 ಪಂಗಡಗಳು ಮಹಿಳೆಯರು ಮತ್ತು ಸೆಪ್ಟೆಂಬರ್ 13 ರಂದು ಕಾರ್ಮಿಕರು ಕೂಡ ಕೃಷಿ ಕೂಲಿಗಾರರ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಬಂಧನಕ್ಕೊಳಗಾದರು.

ಸಿ.ಪಿ.ಐ (ಎಂ). ಸಿ.ಪಿ.ಐ ಮತ್ತು ಅಕಾಲಿದಳ (ಎಲ್) ಮುಖಂಡ ಸುರ್ಜಿತ್‌ಸಿಂಗ್ ಬರ್ನಾಲರು ಈ ಚಳುವಳಿಗೆ ತಮ್ಮ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿ ರೈತರು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಹಿಮಾಚಲ ಪ್ರದೇಶ

ರಾಜಧಾನಿ ಸಿಮ್ಲಾದಲ್ಲಿ ಅಸೆಂಬ್ಲಿಯ ಮುಂದೆ ಧರಣಿ ಮತ್ತು 500 ಜನರ ಮೆರವಣಿಗೆಯನ್ನು ನಡೆಸಲಾಯಿತು. ಸಂಘಟಿತವಾದ ಕಿಸಾನ್‌ಸಭಾದ ಕಾರ್ಯಕರ್ತರು ಮತ ಪ್ರದರ್ಶನ ನಡೆಸಿದರು.

ಸೆಪ್ಟೆಂಬರ್ 5ರಿಂದ12ರವರೆಗೆ 6 ಬೇಡಿಕೆಗಳನ್ನು ಒತ್ತಾಯಿಸಿ ಬೇಡಿಕೆ ದಿನವನ್ನಾಗಿ ಆಚರಿಸಲಾಯಿತು. ಸೆ.12ರಂದು ಸುಮಾರು 1 ಲಕ್ಷ ಕಾರ್ಯಕರ್ತರು ಎಡ ಪಕ್ಷಗಳ ಮತ್ತು ಸಾಮೂಹಿಕಸಂಘಟನೆಗಳು ಸೇರಿದಂತೆ ಸೆ.13ರ ವರೆಗೆ ನಿರಂತರವಾಗಿ ಬಂಧನಕ್ಕೊಳಗಾದರು. ಟ್ರೇಡ್ ಯೂನಿಯನ್‌ಗೆ ಸಂಬಂಧಪಟ್ಟಂತಹ ಸಿ.ಐ.ಟಿ.ಯು. ಎ.ಐ.ಟಿ.ಯು.ಸಿ, ಯು.ಟಿ.ಸಿ ಮತ್ತು ಫಾರ್ವಡ್ ಬ್ಲಾಕ್ ಸಂಘಟನೆಗಳು ಜಂಟಿ ಧರಣಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ರೈತರ ಕೃಷಿ ಕೂಲಿಗಾರರ ಬೇಡಿಕೆ ಈಡೇರುವಂತೆ ಒತ್ತಾಯಿಸಿದರು.

ಬೇರೆ ರಾಜ್ಯಗಳಲ್ಲಿಯೂ ಇದೇ ರೀತಿಯ ಉತ್ತಮ ಪ್ರತಿಕ್ರಿಯೆಗಳು ಬಂದಿದ್ದು ಕಾರ್ಯಕ್ರಮಗಳನ್ನು ಚಳುವಳಿಗಳನ್ನು ಹಮ್ಮಿಕೊಳ್ಳಲಾಗಿತ್ತು. ಗುಜರಾತ್, ಹರಿಯಾಣ, ಜಮ್ಮು ಕಾಶ್ಮೀರದಲ್ಲಿ ಧರಣಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಉತ್ತರ ಪ್ರದೇಶದಲ್ಲಿ ಕೂಡ ಜಂಟಿ ಸಮಾವೇಶಗಳು ನಡೆದಿದ್ದು ಕ್ರಾಂತಿಕಾರಿ ಮೋರ್ಚಾ ಮತ್ತು ಎಡಪಕ್ಷಗಳ ರೈತರ ಸಂಘಟನೆ ಮತ್ತು ಕೃಷಿ ಕೂಲಿಗಾರರು ಲಕ್ನೋನಲ್ಲಿ ಆಗಸ್ಟ್ 26 ರಂದು ದೊಡ್ಡ ರೀತಿಯ ಸಮಾವೇಶಗಳನ್ನು ಸಂಘಟಿಸಲಾಗಿತ್ತು. ಲೋಕದಳದ ರಾಜ್ಯ ಅಧ್ಯಕ್ಷರಾದ ಮುಲಾಮಾಸಿಂಗ್ ಯಾದವ್ ಅವರು ಈ ಸಮಾವೇಶದಲ್ಲಿ ಭಾಗವಹಿಸಿದ್ದರು.

ತಮಿಳುನಾಡಿನಲ್ಲಿ ಕಾ|| ಎನ್. ಶಂಕರಯ್ಯ ಎ.ಐ.ಕೆ.ಎಸ್.ನ ಪ್ರಧಾನ ಕಾರ್ಯದರ್ಶಿಯವರ ನೇತೃತ್ವದಲ್ಲಿ ಸೆ. 12 ರಂದು 1 ಲಕ್ಷ ಜನ ಕಾರ್ಯಕರ್ತರು ಬಂಧನಕ್ಕೊಳಗಾದರು. ಕಾಮ್ರೇಡ್ ಸುನಿಲ್ ಚೋಪ್ರಾ, ಸಹ ಕಾರ್ಯದರ್ಶಿಯವರು ಹಾಗೂ ಎ.ಐ.ಡಿ.ಡಬ್ಲ್ಯು. ಕೂಡ ಭಾಗವಹಿಸಿದ್ದರು.

ಕರ್ನಾಟಕ ರಾಜ್ಯದಲ್ಲಿ

ತುಮಕೂರು

ದಿ: 5.9.88 ರಂದು ಕರ್ನಾಟಕ ಪ್ರಾಂತ ರೈತಸಂಘದ ಆಶ್ರಯದಲ್ಲಿ ರೈತರ ಹಾಗೂ ಕೃಷಿ ಕೂಲಿಕಾರರ ರಾಷ್ಟ್ರವ್ಯಾಪಿ ಚಳುವಳಿಯ ಅಂಗವಾಗಿ ತುಮಕೂರಿನ ನೂರಾರು ರೈತರು ಪುರಭವನದ ಆವರಣದಲ್ಲಿ ಸೇರಿ ಮೆರವಣಿಗೆಯಲ್ಲಿ ನಗರದ ಪ್ರಮುಖ ಬೀದಿಗಳಲ್ಲಿ ಹಾದು ಜಿಲ್ಲಾ ಕಛೇರಿಯ ಆವರಣಕ್ಕೆ ಬಂದು ಸೇರಿ ಜಿಲ್ಲಾಧಿಕಾರಿ ಕಛೇರಿ ಪಿಕೆಟಿಂಗ್ ಮಾಡಲಾಯಿತು.

ಈ ಮೆರವಣಿಗೆಯ ನೇತೃತ್ವವನ್ನು ಕರ್ನಾಟಕದ ಪ್ರಾಂತ ರೈತ ಸಂಘ, ಕರ್ನಾಟಕ ರಾಜ್ಯ ರೈತಸಂಘ, ಯುವಜನ ಮತ್ತು ವಿದ್ಯಾರ್ಥಿ ಸಂಘಟನೆ, ಕಾರ್ಮಿಕ ಮುಖಂಡರುಗಳಾದ ಕಾ|| ಕೆ.ಆರ್. ನಾಯಕ್, ಹೆಚ್.ಸಿ. ಚನ್ನಪ್ಪ, ಟಿ.ಕೆ. ಗೋವಿಂದರಾಜು, ಪಂಡಿತ್ ದಾಸಪ್ಪ, ಮಹಮದ್ ದಸ್ತಗೀರ್, ರಂಗ ಪ್ರಧಾನ, ಬಿ. ಉಮೇಶ, ಬಡೇಸಾಬ್, ಮದು ದೆಖಾನ, ಜಗದೀಶ, ರೇವಣ್ಣ, ಸುರೇಂದ್ರ ಗಂಗಾಧರ, ಅನಂತ ಸುಬ್ಬರಾವ್ ವಹಿಸಿದ್ದರು.

ಜಿಲ್ಲಾಧಿಕಾರಿ ಕಛೇರಿ ಮುಂದೆ ಭಾಷಣ ಮಾಡುತ್ತಿರುವಾಗ ಪೋಲೀಸಿನವರು ಸುಮಾರು 200 ಜನರನ್ನು ಬಂಧಿಸಿ, ಸಂಜೆ ಬಿಡುಗಡೆ ಮಾಡಿದರು.

ಜೇವರ್ಗಿ

ಜೇವರ್ಗಿ ತಾಲ್ಲೂಕಿನ ಕರ್ನಾಟಕ ಪ್ರಾಂತ ರೈತ ಸಂಘ, ಕೃಷಿ ಕೂಲಿಕಾರರು ಪಿ.ಡಬ್ಲ್ಯು.ಡಿ.ಐ.ಬಿ.ಯಿಂದ 250 ರೈತರು ಬೇಡಿಕೆಗಳ ಫಲಕಗಳನ್ನೊತ್ತು ಮುಖ್ಯ ಬೀದಿಯಲ್ಲಿ ಮೆರವಣಿಗೆ ನಡೆಸಿದರು. ಈ ಮೆರವಣಿಗೆಯ ನೇತೃತ್ವವನ್ನು ಡಾ|| ಪರಮಾನಂದ. ಸಿಂಗಣ್ಣ ಮೊರಟಗಿ: ವೆಂಕೋಬರಾವ್ ಸೋಮಶೇಖರ್ ಸ್ವಾಮಿ: ವಹಿಸಿದ್ದರು.

ಮೆರವಣಿಗೆ ಮುಖ್ಯ ಬಸ್ ನಿಲ್ದಾಣದ ಬಳಿ ನಂತರ ಒಂದೂವರೆ ಗಂಟೆಯವರೆಗೆ ರಸ್ತೆ ರೋಕೋ ನಡೆಸಿದರು. ರೈತರನ್ನು ಉದ್ದೇಶಿಸಿ ಕಲ್ಲಪ್ಪ ಕಿರಣಗಿ, ಸಿ.ಪಿ.ಐ.ನ ಅಡೆಪ್ಪ ರೈತರ ಹೋರಾಟದ ಬಗ್ಗೆ ಮಾತನಾಡಿದರು.

ಪೋಲೀಸರು 250 ರೈತರನ್ನು ಬಂಧಿಸಿ ಸಂಜೆ 5 ಗಂಟೆಗೆ ಬಿಡುಗಡೆ ಮಾಡಿದರು.

ಆಳಂದ

ದಿ. 2-9-88ರಂದು ಕರ್ನಾಟಕ ಪ್ರಾಂತ ರೈತ ಸಂಘದಿಂದ ಸನಗುಂದಾ. ಸಾವಳಗಿ, ಖಂಡಾಳ, ಮತ್ತು ತಡೊಳಾ ಗ್ರಾಮದ 60ಜನ ರೈತರು ಕೃಷಿ ಕೂಲಿಕಾರರು ಧಾರಾಕಾರ ಮಳೆಯಲ್ಲೂ ಘೋಷಣೆ ಕೂಗುತ್ತಾ ತಹಸೀಲ್ದಾರ ಕಛೇರಿ ಮುಂದೆ ರಾಷ್ಟ್ರ ಮಟ್ಟದ 13 ಬೇಡಿಕೆಗಳಲ್ಲದೆ, ಸ್ಥಳೀಯ ಬೇಡಿಕೆಗಳ ಈಡೇರಿಕೆಗಾಗಿ ಧರಣಿ ಸತ್ಯಾಗ್ರಹ ನಡೆಸಿದರು.

ಈ ಸಮಯದಲ್ಲ ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಬಸವರಾಜು ಮುರಡಿಯವರು ಗ್ರಾಮಗಳಲ್ಲಿ ಮಳೆ ಬಿದ್ದು ಹಾನಿಗೊಳಗಾದ ರೈತ ಕೃಷಿ ಕೂಲಿಕಾರರಿಗೆ ತುರ್ತು ಪರಿಹಾರ ಕೊಡಲು ಮನವಿ ಅರ್ಪಿಸಿದರು.

ಕುಂದಾಪುರ

ದಿ. 13-9-88 ರಂದು ಕುಂದಾಪುರದಲ್ಲಿ 'ರಾಸ್ತಾ ರೋಕೋ' ಚಳುವಳಿ ಮಾಡಿ 525 ಮಂದಿ ರೈತ–ಕೃಷಿ ಕೂಲಿಗಾರರು ಬಂಧನಕ್ಕೊಳಗಾದರು.

ಇದರಲ್ಲಿ 303 ಮಂದಿ ಮಹಿಳೆಯರು ಭಾಗವಹಿಸಿದ್ದರು. ಈ ಚಳುವಳಿಯಲ್ಲಿ ರೈತರು, ಕೃಷಿ ಕೂಲಿಕಾರರು, ಹಂಚು ಕಾರ್ಮಿಕರು, ಬೀಡಿ ಕಾರ್ಮಿಕರು, ರಿಕ್ಷಾ ಚಾಲಕರು, ವಿದ್ಯಾರ್ಥಿಗಳು ಹಾಗೂ ಯುವ ಜನರು ಸೇರಿದ್ದರು.

ಚಳುವಳಿಯ ನೇತೃತ್ವವನ್ನು ಕಾ|| ಅಬ್ರಹಾಂ ಕರ್ಕಡ, ಕೆ. ಶಂಕರ್, ಸಿ. ನಾರಾಯ, ಯು. ದಾಸಭಂಡಾರಿ ವಿ. ಮಹಾಬಲ, ವಿ.ನರಸಿಂಹ. ಬಿ.ಟಿ. ಮಂಜು ಮತ್ತು ಶಿವರಾಮಶೆಟ್ಟರು ವಹಿಸಿದ್ದರು.

ಮುಖಂಡರು ಮಾತನಾಡಿ ಬಂಧನಕ್ಕೊಳಗಾದವರಿಗೆ ಅಭಿನಂದನೆ ತಿಳಿಸಿದರು.

ಬಿಜಾಪುರ

ದಿ. 8.9.88 ರಂದು ತಿಕೋಟಾದಲ್ಲಿ ರಸ್ತಾರೋಕೋ ಮಾಡಲಾಯಿತು. ಕಾ|| ಭೀಮಾಸಿ ಕಲಾದಗಿಯವರು ನೇತೃತ್ವ ವಹಿಸಿದ್ದ ಈ ಚಳವಳಿಯಲ್ಲಿ 23 ಜನರು ಬಂಧಿತರಾದರು. ರಾತ್ರಿ ಎಂಟುಗಂಟೆಯಾದರೂ ಜೈಲಿನಲ್ಲಿ ಊಟ ಒದಗಿಸಿ ಎಂದು ಭೀಮಸಿ ಕೇಳಿದಾಗ ಅವರನ್ನು

ಪಿ.ಎಸ್.ಐ. ನಾಗರಾಜ ಹೀನಾಯವಾಗಿ ಬೈಯ್ದರು. ಇದನ್ನು ಪ್ರತಿಭಟಿಸಿದ್ದಕ್ಕಾಗಿ ತನ್ನ ಪೋಲೀಸ್ ಬುದ್ಧಿ ತೋರಿಸಿದ ಪಿ.ಎಸ್.ಐ. ಕಾ|| ಭೀಮಯ್ಯನವರ ಮೇಲೆ ಹಲ್ಲೆ ನಡೆಸಿದ.

ಈ ಹಲ್ಲೆಯನ್ನು ಖಂಡಿಸಿ ಡಿ.ವೈ.ಎಫ್.ಐ. ಕೃಷಿ ಕಾರ್ಮಿಕರ ಸಂಘ, ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ಪತ್ರಿಕಾ ಹೇಳಿಕೆ ನೀಡಿ. ಐ.ಎಸ್.ಐ. ನಾಗರಾಜರವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸೂಪರಿಂಟೆಂಟ್ ಪೋಲಿಸರವರಿಗೆ ಮನವಿ ಸಲ್ಲಿಸಲಾಗಿದೆ.

ಉಪನ್ಯಾಸಕರನ್ನು ನೇಮಿಸಲು ಒತ್ತಾಯ

ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ಕಾರ್ಪೋರೇಷನ್ ಜೂನಿಯರ್ ಕಾಲೇಜಿನ ವಿದ್ಯಾರ್ಥಿಗಳು ಪ್ರಥಮ ಮತ್ತು ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಉಪನ್ಯಾಸಕರನ್ನು ನೇಮಿಸುವಂತೆ ಡಿ.ವೈ.ಎಫ್.ಐ. ಮುಖಂಡತ್ವದಲ್ಲಿ ಕಾರ್ಪೋರೇಷನ್ ಕಛೇರಿ ಎದುರು ದಿ. 20.9.88 ಧರಣಿ ನಡೆಸಲಾಯಿತು.

ಧರಣಿಯ ಮುಖಂಡತ್ವವನ್ನು ವಿದ್ಯಾರ್ಥಿ ಮುಖಂಡರಾದ ಶಿವಕುಮಾರ್, ಮಹದೇವ್ ಹಾಗೂ ಡಿ. ವೈ. ಎಫ್. ಐ. ಜಿಲ್ಲಾ ಕಾರ್ಯದರ್ಶಿ ಟಿ. ಶಿವಶಂಕರ್ ವಹಿಸಿದ್ದರು. ಡೆಪ್ಯೂಟಿ ಮೇಯರ್‌ರವರಿಗೆ ಮನವಿ ಅರ್ಪಿಸಿ ಉಪನ್ಯಾಸಕರ ನೇಮಕ ಹಾಗೂ ನಿರ್ದಿಷ್ಟ ಪ್ರಿನ್ಸಿಪಾಲರನ್ನು ಕಾಲೇಜಿಗೆ ನೇಮಿಸಬೇಕೆಂದು ಒತ್ತಾಯಿಸಲಾಗಿದೆ.

ಮಾನಹಾನಿ ಮಸೂದೆ ಪ್ರಜಾಪ್ರಭುತ್ವದ ಮೇಲಿನ ಹಲ್ಲೆ

[2 ನೇ ಪುಟದಿಂದ]

ದಲ್ಲಿ ಎಲ್ಲಾ ಪತ್ರಕರ್ತರು, ವಕೀಲರು, ಬುದ್ಧಿಜೀವಿಗಳು ಹಾಗೂ ನಾಗರಿಕರು ಕಿಕ್ಕಿರಿದು ಸೇರಿದ್ದು ಎಲ್ಲರೂ ಕಪ್ಪುಪಟ್ಟಿಯನ್ನು ಧರಿಸಿ ಮಸೂದೆಗೆ ಪ್ರತಿಭಟನೆ ತೋರಿದರು, ಸಂಕಿರಣದಲ್ಲಿ ಭಾಗವಹಿಸಿದ ಎಲ್ಲರೂ 'ಕಿಲ್ ದಿ ಬಿಲ್' ಘೋಷಣೆಗೆ ಸಹಿಮಾಡಿ ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸ್ವಾತಿ ಸಿಂಡಿಕೇಟ್ಸ್‌ನ ನಿರ್ದೇಶಕರಾದ ಜಿ. ಎನ್. ಮೋಹನ್‌ರವರು 'ಕಿಲ್ ದಿ ಬಿಲ್' ನಮ್ಮ ಘೋಷಣೆ. ರಾಜೀವ್ ಸರ್ಕಾರ ಮಸೂದೆಯನ್ನು ಮುಂದೂಡುವುದಲ್ಲ. ಈ ತಕ್ಷಣವೇ ಅದನ್ನು ಕೈ ಬಿಡಬೇಕು ಎಂದು ಹೇಳುತ್ತಾ, ಸಂಕಿರಣದ ಒಟ್ಟಾಭಿಪ್ರಾಯವನ್ನು ಕೇಂದ್ರ ಸರ್ಕಾರ ಹಾಗೂ ಪತ್ರಿಕಾ ಮಂಡಳಿಗೆ ಕಳುಹಿಸಿಕೊಡುವುದಾಗಿ ಹೇಳಿದರು.

ಮಾನಹಾನಿ ಮಸೂದೆಯ ವಿರುದ್ಧದ ಎಲ್ಲರ ಅಭಿಪ್ರಾಯಗಳೂ ಸ್ವಾಗತಾರ್ಹವಾಗಿದ್ದು. ಈ ಮಸೂದೆ ನಾಗರಿಕರ ವಿರುದ್ಧ ಎಂದು ಗುರುತಿಸಿದ್ದು ಮೆಚ್ಚತಕ್ಕ ಅಂಶ. ಆದರೆ ಇದೇ ಸಂದರ್ಭದಲ್ಲಿ ಕೆಲವರು ಈ ಮಸೂದೆಯನ್ನು ಹೆಗಡೆಯವರು ಮಂಡಿಸಿದ್ದ ಮಸೂದೆಯ ಜೊತೆಗೇ ತಳುಕು ಹಾಕಲು ಪ್ರಯತ್ನಿಸಿದ್ದು ಕೇಂದ್ರದ ಮಸೂದೆಯ ಅಗಾಧ ಹಾನಿಕಾರಕ ಶಕ್ತಿಗೂ ಜನತಾ ಸರ್ಕಾರ ಪರಬಯಸಿದ ಮಸೂದೆಯ ಪೊಳ್ಳುತನಕ್ಕೂ ಹೋಲಿಸುವುದು ಅವರ sense of proportion ಅನ್ನು ಬಯಲಿಗೆಳೆಯಿತು.

ಹೆಗಡೆಯವರು ಮಂಡಿಸಿದ ಮಸೂದೆ ಈಗಾಗಲೇ ಇದ್ದ ಸ್ವಾತಂತ್ರ್ಯಕ್ಕೆ ಸಂವಿಧಾನದ ಚೌಕಟ್ಟು ನೀಡಿತ್ತು. ಆದರೆ ರಾಜೀವರ ಮಸೂದೆ ಸ್ವಾತಂತ್ರ್ಯವನ್ನೇ ಉಡುಗಿಸುವಂತಹದ್ದು ಎಂಬ ಅಂಶವನ್ನು ಗುರುತಿಸಿ ಮುಂದುವರೆಯಬೇಕು. ಇಲ್ಲದಿದ್ದಲ್ಲಿ ರಾಜೀವರ ದುರಾಡಳಿತ, ಕರಾಳ ಮಸೂದೆಗಳ ವಿರುದ್ಧದ ಆಂದೋಲನವು ಆರಂಭದಲ್ಲಿಯೇ ಮುಗ್ಗರಿಸುತ್ತವೆ.

ಪತ್ರಿಕೆ ಮತ್ತು ಪ್ರಜೆಗಳು

[2ನೇ ಪುಟದಿಂದ]

ಬೋಫೋರ್ಸ್ ಇತರೆ ಹಗರಣಗಳು ಬಯಲಿಗೆ ಬಿದ್ದಿವೆ. ಇಂತಹ ವಿವಾದಾತ್ಮಕ ಹಗರಣ ಬಯಲಿಗೆ ಬಿದ್ದಾಗ ಜನರಿಗೆ ತಾವು ಆರಿಸಿ ಕಳಿಸಿದ ವ್ಯಕ್ತಿಗಳು ಹೇಗೆ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂಬುದು ಗೊತ್ತಾಗುತ್ತದೆ. ಆದ್ದರಿಂದಲೇ ಈ ಅರ್ಥದಲ್ಲಿ ಜನರಿಗೆ, ಮತದಾರನಿಗೆ ಅಧಿಕಾರದಲ್ಲಿರುವವರನ್ನು ಬಯಲಿಗೆಳೆಯುವ, ಟೀಕಿಸುವ ಸ್ವಾತಂತ್ರ್ಯ ಅಗತ್ಯವಾಗಿದೆ.

ಪತ್ರಿಕೆಗಳ ಮಧ್ಯೆ ವ್ಯಕ್ತಿಯ ಹಕ್ಕನ್ನು ಎತ್ತಿ ಹಿಡಿಯುವ ರಾಜೀವ್‌ಗಾಂಧಿಯವರ ಈ ಆಲೋಚನೆ ಮಧ್ಯ ವ್ಯಕ್ತಿಗಳೇ ಸರಕಾರವನ್ನು ವಂಚಿಸುವುದರತ್ತ ಗಮನ ಬೀರಿಲ್ಲ.

ಬೋಫೋರ್ಸ್ ಗನ್ ಹಗರಣವಾದಿಯಾಗಿ ಇತರೆ ಎಲ್ಲಾ ರಕ್ಷಣಾತ್ಮಕ ವ್ಯವಹಾರಗಳು ಪತ್ರಿಕೆಗಳ ಪುಟಗಳಲ್ಲಿ ಬಯಲಿಗೆ ಬೀಳುತ್ತಿರುವುದು ಹಾಗೂ ಈ ಹಗರಣಗಳಲ್ಲಿ ಪ್ರಧಾನ ಮಂತ್ರಿಗಳ ಹತ್ತಿರದವರೇ ಇರುವುದರ ಹಿನ್ನೆಲೆಯಲ್ಲಿ ಈ ಮಸೂದೆಯನ್ನು ತಂದಿರುವುದು ಹಾಗೂ ಅವನ್ನು ಸಮರ್ಥಿಸಿರುವುದು ಗಮನಿಸಬೇಕಾದದ್ದು. ಎಲ್ಲಾ ಹಗರಣಗಳನ್ನು ಮುಚ್ಚಿಹಾಕಲು ನೇಮಿಸಿದ ಸಮಿತಿಗಳ ವರದಿಗಳು ಬಂದಾಗಲೇ ಭಾರತದ ಪತ್ರಿಕೆಗಳು ಈ ವ್ಯವಹಾರಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಪ್ರಕಟಿಸುತ್ತಿರುವುದು ರಾಜೀವ್‌ಗಾಂಧಿಯವರಿಗೆ ಪತ್ರಿಕೆಗಳು ಅನ್ಯಾಯವಾಗಿ ಟೀಕಿಸುವ ವ್ಯಕ್ತಿಗಳಾಗಿ ಕಂಡುಬರುತ್ತಿದ್ದಾರೆ.

ಅಧಿಕಾರದಲ್ಲಿರುವವರು, ಜನರಿಂದ ಆರಿಸಿ ಕಳಿಸಲ್ಪಟ್ಟವರು ಪತ್ರಿಕೆಗಳಲ್ಲಿ ಬಯಲಾಗುವುದರ ಬಗ್ಗೆ ವಿರೋಧಪಕ್ಷಗಳಿಗೆ ಹೆದರಬೇಕಾಗಿಲ್ಲ. ಈ ಎಲ್ಲರೂ ಅಧಿಕಾರದಲ್ಲಿರುವವರ ಅನೀತಿಗಳನ್ನು ಜನರ ಎದುರು ಇಡಲು ಬದ್ಧರಾಗಿರುತ್ತಾರೆ. ಅಧಿಕಾರದಲ್ಲಿರುವವರು ಈ ಸಂದರ್ಭದಲ್ಲಿ ತಮ್ಮನ್ನು ರಕ್ಷಿಸಿಕೊಳ್ಳಲು, ಹಗರಣಗಳ ಬಗ್ಗೆ ವ್ಯಾಖ್ಯಾನ ನೀಡಲು ಸ್ವತಂತ್ರರಿರುತ್ತಾರೆ. ಆದರೆ ವಿರೋಧದ ಧ್ವನಿಯನ್ನು ಮುಚ್ಚಲು ಅಲ್ಲ.

ತಮ್ಮ ಪಕ್ಷದಲ್ಲಿನ ವಿರೋಧದ ಧ್ವನಿಯನ್ನೇ ತುಳಿಯಲು ಯತ್ನಿಸುವುದು, ವಿರೋಧ ಪಕ್ಷಗಳ ಮೇಲೆ ಕೆಂಡ ಕಾರುವುದು ಹಾಗೂ ಅಧಿಕಾರದಲ್ಲಿರುವವರನ್ನು ಟೀಕಿಸದಿರುವಂತೆ ಮಸೂದೆಗಳ ಮೂಲಕ ಕಾನೂನು ಮಾಡಲು ಹೊರಟರೆ ಪ್ರಜಾಪ್ರಭುತ್ವ ಸಾಯುತ್ತದೆ. ಪ್ರಜೆಗಳ ಪ್ರಜಾಸತ್ತಾತ್ಮಕ ಹಕ್ಕುಗಳ ಬಗ್ಗೆ ಕಾಳಜಿ ಇರುವ ಎಲ್ಲಾ ವರ್ಗದ ಜನವು ಈ ಕಾರಣದಿಂದಾಗಿಯೇ ರಾಜೀವ್ ಗಾಂಧಿಯವರ ಅಧಿಕಾರದಲ್ಲಿರುವವರನ್ನು ರಕ್ಷಿಸುವ ಈ ಮಸೂದೆಯ ವಿರುದ್ಧ ಎದ್ದು ಬರಬೇಕಾಗಿದೆ.

ಚಿಲಿಯಲ್ಲಿ ಬೃಹತ್ ಪಿನೋಚೆ ವಿರೋಧಿ ರ್‍ಯಾಲಿ

ಡಾ॥ ಅಲೆಂಡೆ ನೇತೃತ್ವದ ಪ್ರಗತಿಪರ ಸರಕಾರವನ್ನು ಸಾಮ್ರಾಜ್ಯಶಾಹಿಗಳ ನೆರವಿನಿಂದ ಪದಚ್ಯುತಗೊಳಿಸಿ, ಡಾ॥ ಅಲೆಂದೆಯವರನ್ನು ಕೊಂದು, ಸಾವಿರಾರು ಕಮ್ಯುನಿಸ್ಟರು ಹಾಗೂ ಸೋಷಲಿಸ್ಟರನ್ನು ಸತತ ಚಿತ್ರಹಿಂಸೆಗೆ ಗುರಿಪಡಿಸಲಾರಂಭಿಸಿದ ಜನರಲ್ ಪಿನೋಚೆಯ ಮಿಲಿಟರಿ ಆಳ್ವಿಕೆ ಆರಂಭವಾಗಿ 15 ವರ್ಷಗಳು ಕಳೆದುಹೋಗಿವೆ. ಈ 15 ವರ್ಷಗಳಲ್ಲೇ ಅತ್ಯಂತ ದೊಡ್ಡದಾದ ರ್‍ಯಾಲಿ ಚಿಲಿಯ ರಾಜಧಾನಿ ಸ್ಯಾಂಜಿಮಾನೋದಲ್ಲಿ ಇದೇ ಸೆಪ್ಟೆಂಬರ್ 11 ರಂದು ನಡೆಯಿತು. ಸುಮಾರು ಒಂದು ಲಕ್ಷ ಮಂದಿ ಇದರಲ್ಲಿ ಭಾಗವಹಿಸಿದ್ದರೆಂದು ತಿಳಿದು ಬಂದಿದೆ.

ಹಿಂದೆ ರಾಜಧಾನಿಯಲ್ಲಿ ಇಂತಹ ಪ್ರದರ್ಶನಗಳಿಗೆ ಪಿನೋಚೆ ಸರ್ವಾಧಿಕಾರೀ ಆಳ್ವಿಕೆ ಅವಕಾಶವೇ ಕೊಡುತ್ತಿರಲಿಲ್ಲ. ಮುಂದಿನ ತಿಂಗಳು ಜನರಲ್ ಪಿನೋಚೆಯನ್ನು ಎಂಟು ವರ್ಷದ ಇನ್ನೊಂದು ಅವಧಿಗೆ ಅಧ್ಯಕ್ಷರಾಗಿ ಮಾಡಬೇಕೆಂಬ ಸೇನೆಯ ಪ್ರಸ್ತಾಪದ ಬಗ್ಗೆ ನಡೆಯಲಿರುವ ಜನಾಭಿಪ್ರಾಯ ಸಂಗ್ರಹಣೆಯ ಹಿನ್ನೆಲೆಯಲ್ಲಿಯಷ್ಟೇ ಇದಕ್ಕೆ ಅವಕಾಶ ನೀಡಲಾಗಿತ್ತು. ಜನತೆ ಈ ಪ್ರಸ್ತಾಪಕ್ಕೆ ಬೇಕು ಅಥವಾ ಬೇಡವೆಂದಷ್ಟೇ ಹೇಳಬೇಕು. ಇದಕ್ಕೆ 'ಬೇಡ' ಎಂಬ ಉತ್ತರ ಕೊಡಬೇಕೆನ್ನುವ ಒಂದು ಆಂದೋಲನವೇ ಮೂಡಿಬಂದಿದೆ. ಇದರ ಅಂಗವಾಗಿಯೇ ಮೇಲೆ ಹೇಳಿದ ರ್‍ಯಾಲಿ ನಡೆಯಿತು.

ಈ ಸಭೆಯ ನಂತರ ಸಾವಿರಾರು ಮಂದಿ ಅಧ್ಯಕ್ಷೀಯ ಭವನ ಲಾ ಮೊನೆಡಾದತ್ತ ಸಾಗಿದರು. ಅಲ್ಲಿ ಮತಪ್ರದರ್ಶನವನ್ನು ಫ್ಯಾಸಿಸ್ಟ್ ಸರಕಾರದ ಪೊಲೀಸರು ಅಶ್ರುವಾಯು ಹಾಗೂ ನೀರಿನ ಚೆಂಡುಗಳ ಮೂಲಕ ಚದುರಿಸಿದರು.

ಇತ್ತೀಚೆಗೆ ಪ್ರಜಾಪ್ರಭುತ್ವ ಚಳುವಳಿ ಚಿಲಿಯಲ್ಲಿ ಮತ್ತೆ ತೀವ್ರಗೊಳ್ಳುತ್ತಿರುವಂತೆ ಕಾಣುತ್ತಿದೆ. ಪಿನೋಚೆ ಆಡಳಿತದಲ್ಲಿ ಅತ್ಯಂತ ಹೆಚ್ಚು ಚಿತ್ರಹಿಂಸೆ ಮತ್ತಿತರ ಕಿರುಕುಳ ಕ್ಕೊಳಗಾಗಿರುವ ಕಮ್ಯುನಿಸ್ಟ್ ಪಕ್ಷದ ಪ್ರಮುಖ ಮುಖಂಡರು ಗಡೀಪಾರಿನಿಂದ ಮತ್ತೆ ದೇಶಕ್ಕೆ ಮರಳುತ್ತಿರುವುದು ಜನರಲ್ಲಿ ಅತ್ಯಂತ ಹೆಚ್ಚಿನ ನಿರೀಕ್ಷೆಯನ್ನುಂಟು ಮಾಡಿದೆ. ಮೇಲೆ ಹೇಳಿದ ರ್‍ಯಾಲಿಯಲ್ಲಿ ಕಂಡ ಉಲ್ಲಾಸದ ವಾತಾವರಣ ಇದರ ದ್ಯೋತಕವೆನ್ನಲಾಗುತ್ತಿದೆ.

ಈ ನಡುವೆ ಚಿಲಿಯಲ್ಲಿ ಮಿಲಿಟರಿ ಸರ್ವಾಧಿಕಾರ ಬರಲು ನೆರವು ನೀಡಿದ್ದ ಬ್ರಿಟನ್ ಮತ್ತು ಅಮೇರಿಕಾ ನಡುವೆಯೇ ಬಿಕ್ಕಟ್ಟು ಬಂದಿರುವಂತಿದೆ. ಪಿನೋಚೆ ಸರಕಾರದೊಂದಿಗೆ ಬ್ರಿಟನ್ ತನ್ನ ಮಿಲಿಟರಿ ಸಂಬಂಧವನ್ನು ಕಡಿತಗೊಳಿಸಬೇಕು ಎಂದು ಅಮೇರಿಕಾ ಬ್ರಿಟನ್‌ನಲ್ಲಿ ಒತ್ತಾಯಿಸುತ್ತಿದೆ! ಪಿನೋಚೆಯ ಫ್ಯಾಸಿಸ್ಟ್ ಆಳ್ವಿಕೆ ಅಮೇರಿಕಾವನ್ನು ಹೆಚ್ಚೆಚ್ಚು ಮುಜುಗರಕ್ಕೆ ಒಳಗಾಗುವಂತೆ ಮಾಡುತ್ತಿರಬೇಕು!

ಸೆಪ್ಟೆಂಬರ್ ಚಳುವಳಿ ಎಲ್ಲೆಡೆ ಯಶಸ್ವಿ

ತ್ರಿಪುರಾ

ತ್ರಿಪುರಾದಲ್ಲಿ ಭಯದ ವಾತಾವರಣವಿದ್ದರೂ ಕೂಡ ಸುಮಾರು 30 ಸಾವಿರ ಕಾರ್ಯಕರ್ತರು ಬಂಧನಕ್ಕೊಳಗಾದರು. ಸೆ. 12ರಂದು ಎಸ್.ಎಫ್.ಐ, ಡಿ.ವೈ.ಎಫ್.ಐ. ಸಿ.ಐ.ಟಿ.ಯು. ಎ.ಐ.ಡಿ.ಡಬ್ಲ್ಯೂ.ಎ ಮತ್ತು ಇತರೆ ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರು ಕೂಡ ಭಾಗ ವಹಿಸಿದ್ದು ರೈತರ ಕೃಷಿಕೂಲಿಗಾರರ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಬೆಂಬಲ ವ್ಯಕ್ತಪಡಿಸಿದ್ದಾರೆ. ಕಾ॥ ನೃಪೇನ್ ಚಕ್ರವರ್ತಿ ಮತ್ತು ದಶರಥ್ ದೇಬ್ ಮಾಜಿ ಕೃಷಿ ಸಚಿವರು, ಉಪ ಮುಖ್ಯಮಂತ್ರಿಗಳು ಕೂಡ ಭಾಗ ವಹಿಸಿದ್ದರು.

ಸೆ. 12ರಂದು ತ್ರಿಪುರ ಪೋಲೀಸರು ಅಮಾನುಷವಾಗಿ, ಅತಿ ಕ್ರೂರವಾದ ರೀತಿಯಲ್ಲಿ ಕಾರ್ಯಕರ್ತರ ಮೇಲೆ ಲಾಠಿ ಚಾರ್ಜ್ ಪ್ರಯೋಗ ಮಾಡಿದರು. ಕಾ॥ ನೃಪೇನ್ ಚಕ್ರವರ್ತಿಯವರು, ಇದರ ನೇತೃತ್ವ ವಹಿಸಿದ್ದರು. ಸುಮಾರು 200 ಜನ ಕಾರ್ಯಕರ್ತರು ಮತ್ತು ಕಾ॥ ನೃಪೇನ್ ಸೇರಿದಂತೆ ಲಾಠಿ ಚಾರ್ಜ್‌ನಲ್ಲಿ ಏಟು ತಿಂದರು. ಈ ಸಂಧರ್ಭದಲ್ಲಿ ಅವರ ಎದೆಯ ಮೇಲೆ ಬಿದ್ದ ಏಟಿನ ಪರಿಣಾಮವಾಗಿ ಅವರನ್ನು ಜಿ. ಬಿ. ಪಾಂಟ್ ಆಸ್ಪತ್ರೆಗೆ ಸೇರಿಸಿದ್ದು ಅರೆಪ್ರಜ್ಞೆಯಲ್ಲಿದ್ದರು.

ಸುಮಾರು 65 ಸಾವಿರ ಜನ ಬಂಧನಕ್ಕೊಳಗಾಗಿದ್ದು ಸೆ. 14 ರಂದು ರಾಜ್ಯಾದ್ಯಂತ ಬಂದ್‌ಗೆ ಕರೆ ಕೊಡಲಾಯಿತು.

ಕಾಂಗ್ರೆಸ್ ಗೂಂಡಾಗಳು ಸಭೆ, ಮೆರವಣಿಗೆಗಳು ನಡೆಯುವ ಸ್ಥಳಗಳಲ್ಲಿ ಗಲಾಟೆಗಳನ್ನು ಮತ್ತು ರೈತರಿಗೆ. ಕಾರ್ಯಕರ್ತರಿಗೆ ಕಿರುಕುಳ ಕೊಟ್ಟರು. ಈ ಸಂದರ್ಭ ದಶರಥ್ ದೇಬ್‌ರವರು ಸಮಾವೇಶಕ್ಕೆ ಹೋಗುತ್ತಿರುವಾಗ ಅವರನ್ನು ಕೊಲೆ ಮಾಡಲು ಕಾಂಗ್ರೆಸ್ ಗೂಂಡಾಗಳು ಯತ್ನಿಸಿದರು.

ಕೇರಳ

ಸೆಪ್ಟೆಂಬರ್ 9 ರಂದು ಕೇರಳದಲ್ಲಿ ನಡೆದ ಕಾರ್ಯಕ್ರಮವನ್ನು ಅಖಿಲ ಭಾರತ ಕಿಸಾನ್ ಸಭಾದ ಉಪಾಧ್ಯಕ್ಷರಾದ ಕಾ॥ ಹರಿಕಿಶನ್ ಸಿಂಗ್ ಸುರ್ಜಿತ್‌ರವರು ಕೊಚ್ಚಿನ್ ಸಮೀಪವಿರುವ ಪ್ಯಾಪೊನಿತುರ ಹತ್ತಿರ ಉದ್ಘಾಟಿಸಿದರು. ಕಾ॥ ಪಿ. ಕೆ. ಕುಂಜಚ್ಚನ್ ಎಂ.ಪಿ. ಪ್ರಧಾನ ಕಾರ್ಯದರ್ಶಿ ಅಖಿಲ ಭಾರತ ಕೃಷಿ ಸಂಘದ ಪ್ರಧಾನ ಕಾರ್ಯದರ್ಶಿಯವರು ತ್ರಿವೇಂಡ್ರಂನಲ್ಲಿ ಉದ್ಘಾಟಿಸಿದರು. ಕ್ರಮವಾಗಿ ಸುಮಾರು 2,500 ಮತ್ತು 1,000 ಜನರು ಬಂಧನಕ್ಕೊಳಗಾದರು. ಸುಮಾರು 1 ಲಕ್ಷ ಕಾರ್ಯಕರ್ತರು ಇಡೀ ರಾಜ್ಯದಲ್ಲಿ ಸೆಪ್ಟೆಂಬರ್ 9 - 10 ರಂದು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸುಮಾರು 25 ಸಾವಿರ ಕಾರ್ಯಕರ್ತರು ಕೇಂದ್ರ ಸರಕಾರದ ಕಛೇರಿಗಳ ಮುಂದೆ ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾಗಿ ಬಿಡುಗಡೆಯಾದರು. ಇದೇ ರೀತಿಯ ಕಾರ್ಯಕ್ರಮ 15 ರವರೆಗೆ ನಿರಂತರವಾಗಿ ನಡೆಯಿತು. ಪಿಕೆಟಿಂಗ್ ನಡೆಸುವ ಸಂದರ್ಭದಲ್ಲಿ ಭೂಮಿಯನ್ನು ವಶಪಡಿಸಿಕೊಳ್ಳುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸೆಪ್ಟೆಂಬರ್ 15ರವರೆಗೆ ಕಾರ್ಯಕ್ರಮದಲ್ಲಿ ಸುಮಾರು 12 ಲಕ್ಷ ಜನ ರೈತರು ಕೃಷಿ ಕೂಲಿಕಾರರು ಭಾಗವಹಿಸಿದ್ದರು.

ಪಶ್ಚಿಮ ಬಂಗಾಳ

ಸೆ. 7 ರಿಂದ 13 ರವರೆಗೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಸಮಾವೇಶಗಳು ಜರುಗಿದ್ದು, ಸೆ. 14 ರಂದು ಪಶ್ಚಿಮ ಬಂಗಾಳದ ಬಂದ್‌ಗೆ ಕರೆ ಕೊಡಲಾಯಿತು. ಅಖಿಲ ಭಾರತ ಕಿಸಾನ್ ಸಭಾದ ಬೇಡಿಕೆಗಳ ಜೊತೆಯಲ್ಲಿ ರಾಜ್ಯಕ್ಕೆ ಕೇಂದ್ರದಿಂದ ಕೊಡಬೇಕಾದ ಸವಲತ್ತುಗಳನ್ನು ಕೊಡುವುದರಲ್ಲಿ ತಾರತಮ್ಯ ಮಾಡುವುದನ್ನು ಖಂಡಿಸಿ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಈ ಬಂದ್‌ಗೆ ಕರೆ ಕೊಡಲಾಗಿತ್ತು.

ಸುಮಾರು 50 ಲಕ್ಷ ಕಾರ್ಯಕರ್ತರು ಧರಣಿ ಮತ್ತು ಮೆರವಣಿಗೆಗಳಲ್ಲಿ ಭಾಗವಹಿಸಿದ್ದರು. ರೈತರು ದೊಡ್ಡ ರೀತಿಯಲ್ಲಿ ತಮ್ಮ ಪ್ರಮುಖ 5 ಬೇಡಿಕೆಗಳನ್ನು ಒತ್ತಾಯಿಸಿ ಮೆರವಣಿಗೆ, ಧರಣಿ, ಪಿಕೆಟಿಂಗ್ ನಡೆಸಿದರು. ಸುಮಾರು 1 ಲಕ್ಷ ಎಕರೆ ಭೂಮಿಯನ್ನು ಕಿಸಾನ್ ಸಭಾದ ನೇತೃತ್ವದಲ್ಲಿ ಭೂಮಿ ಇಲ್ಲದ ರೈತರಿಗೆ, ಕೃಷಿ ಕೂಲಿಗಾರರಿಗೆ ಹಂಚಿಸಲಾಗಿತ್ತು. ಇದಕ್ಕೆ ಪಂಚಾಯತ್‌ನ ಬೆಂಬಲ ಸಹಾಯವನ್ನೂ ತೆಗೆದುಕೊಂಡಿತ್ತು.

ಸೆಪ್ಟೆಂಬರ್ ಚಳುವಳಿ ಕರ್ನಾಟಕ ರಾಜ್ಯದಲ್ಲಿ

ಉಡುಪಿ

ಕುಂದಾಪುರ ತಹಶೀಲ್ದಾರರ ಕಛೇರಿ ಪಿಕೆಟಿಂಗ್ ನಡೆಸಿದ 630 ಕ್ಕೂ ಹೆಚ್ಚು ರೈತರು ಸೆಪ್ಟೆಂಬರ್ 13 ರಂದು ಬಂಧನಕ್ಕೊಳಗಾದರು.

ಇವರೆಲ್ಲರೂ ತಂಡೋಪ ತಂಡಗಳಾಗಿ ತಮ್ಮ ಬೇಡಿಕೆಗಳಿಗಾಗಿ ಒತ್ತಾಯಿಸಿ 13 ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ತಾಲೂಕು ಕಛೇರಿ ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾದರು

ಸಂಜೆ ಬಿಡುಗಡೆಯಾದ ನಂತರ ಬಹಿರಂಗ ಸಭೆಯಲ್ಲಿ ಕಾಂ॥ ಶಂಕರ ಎನ್. ಸೆಟ್ಟಿಗಾರ ಮತ್ತು ಡೇವಿಡ್ ಎ. ಕರ್ಕಡರು ಮಾತನಾಡಿ ಚಳುವಳಿಯಲ್ಲಿ ಭಾಗವಹಿಸಿ ಸಹಕರಿಸಿದವರಿಗೆ ಕೃತಜ್ಞತೆ ಸಲ್ಲಿಸಿದರು. ಎಡ ಪಕ್ಷಗಳ ನೇತೃತ್ವದಲ್ಲಿ ನಡೆಸಲಾದ ದೇಶವ್ಯಾಪಿ ಚಳುವಳಿಯ ಸತ್ಯಾಗ್ರಹದಲ್ಲಿ ಭಾಗವಹಿಸಿ ಬಂಧನಕ್ಕೊಳಗಾದವರೆಲ್ಲ ಸೇರಿ ಗ್ರಾಮಾಂತರದಲ್ಲಿ ಜನತೆಯನ್ನು ಜಾಗೃತಿಗೊಳಿಸುವ ಪ್ರಚಾರದಲ್ಲಿ ಭಾಗಿಗಳಾಗಿ ಸಂಘಟನೆ ಬಲಪಡಿಸಲು ನೆರವಾಗುವಂತೆ ವಿನಂತಿಸಿದರು.

ಬೀಳಗಿ

ಚಳವಳಿಯಲ್ಲಿ ಒಂದು ಸಾವಿರಕ್ಕೂ ಹೆಚ್ಚು ರೈತರು ಭಾಗವಹಿಸಿದ್ದರು. ಬೀಳಗಿ ತಾಲೂಕು ದೊಡ್ಡ ಗಲಿಗಲಿಯಲ್ಲಿ ರೈತ ಕೃಷಿ ಕೂಲಿಕಾರರು ತಮ್ಮ ಬೇಡಿಕೆಗಳಾದ ಬಗರಹುಕುಂ ಸಾಗುವಳಿದಾರರಿಗೆ ಹಕ್ಕು ಪತ್ರ ಕೊಡಬೇಕು. ನಿವೇಶನ ರಹಿತರಿಗೆ ನಿವೇಶನ ಹಂಚಬೇಕು. ಮುಳವಾಡ ಯಾತ ನೀರಾವರಿ ತೀವ್ರವಾಗಿ ಮುಗಿಸಬೇಕು. ಕಂದಾಯ ಇಲಾಖೆಯಲ್ಲಿ ನಡೆಯುವ ಭ್ರಷ್ಟಾಚಾರ ನಿಲ್ಲಬೇಕು ಎಂದು 4 ತಾಸು ರಸ್ತಾ ರೋಖೋ ಮಾಡಿದಾಗ ಪೋಲೀಸರು 120 ಜನರನ್ನು ಬಂಧನ ಮಾಡಿ ಬಿಡುಗಡೆ ಮಾಡಿದರು. ಚಳುವಳಿಯ ನೇತೃತ್ವವನ್ನು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಉಪಾಧ್ಯಕ್ಷರಾದ ಎಚ್. ಎಚ್. ಹೊನ್ನಟಗಿ ವಹಿಸಿದ್ದರು.

ಬಾಂಗ್ಲಾ ನೆರೆಗೆ ಬಲಿಯಾದವರು-2500

ಬಾಂಗ್ಲಾ ದೇಶದ ರಾಜಧಾನಿ ಢಾಕ್ಕಾವೂ ಸೇರಿದಂತೆ ಸುಮಾರು 70 ಶೇಕಡಾ ಭಾಗವನ್ನು ವ್ಯಾಪಿಸಿರುವ ತೀವ್ರ ನೆರೆಯಿಂದಾಗಿ 2.500 ಮಂದಿ ಪ್ರಾಣ ಕಳೆಕೊಂಡಿದ್ದಾರೆ. ಸಾವಿರಾರು ಮಂದಿ ನಿರಾಶ್ರಿತರಾಗಿದ್ದಾರೆ. ಪರಿಹಾರ ಸಾಮಗ್ರಿ ತಲುಪದೆ ಹಸಿವಿನಿಂದ ಜನ ಸತ್ತಿರುವ ಸುದ್ದಿಗಳೂ ಬಂದಿವೆ.

ಮುಗಾಬೆಯವರಿಗೆ ಪ್ರಶಸ್ತಿ

ಜಿಂಬಾಬ್ವೆ ಅಧ್ಯಕ್ಷ ಹಾಗೂ ಅಲಿಪ್ತ ಆಂದೋಲನದ ಮುಖಂಡ ರೋಬರ್ಟ್ ಮುಗಾಬೆಯವರಿಗೆ "ಆಫ್ರಿಕಾ ಬಹುಮಾನ"ವನ್ನು ರಾಷ್ಟ್ರೀಯ, ಪ್ರಾದೇಶಿಕ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಹಸಿವನ್ನು ತೊಲಗಿಸುವಲ್ಲಿ ನೀಡಿದ ಅಪಾರ ಕಾಣಿಕೆಗಾಗಿ ನೀಡಲಾಗಿದೆ. 1 ಲಕ್ಷ ಡಾಲರ್ ಬೆಲೆ ಬಾಳುವ ಈ ಬಹುಮಾನವನ್ನು ನ್ಯೂಯಾರ್ಕ್‌ನ 'ಹಂಗರ್ ಪ್ರಾಜೆಕ್ಟ್' ಸಂಸ್ಥೆ ನೀಡಿದೆ.

ಅಲಿಪ್ತ ಆಂದೋಲನದ 9ನೇ ಶೃಂಗಸಭೆ

ನಿಕೋಸಿಯಾದಲ್ಲಿ ನಡೆದ ಅಲಿಪ್ತ ಆಂದೋಲನ ದೇಶಗಳ ಸಮ್ಮೇಳನ ಯುಗೊಸ್ಲೋವಿಯಾ ಅಲಿಪ್ತ ಆಂದೋಲನದ ಮುಂದಿನ ಅಧ್ಯಕ್ಷ ಎಂದು ಎಂದು ನಿರ್ಧರಿಸಿದೆ. 9ನೇ ಶೃಂಗಸಭೆ ಯುಗೋಸ್ಲಾವಿಯಾದಲ್ಲಿ ನಡೆಯುತ್ತದೆ.

2ನೇ ಮಹಾಯುದ್ಧದಲ್ಲಿ ಜಪಾನ್ ವಿಷವಾಯು ಬಳಸಿತ್ತು

ದ್ವಿತೀಯ ಮಹಾಯುದ್ಧದ ಸಮಯದಲ್ಲಿ ಜಪಾನ್ ಯುದ್ಧಕೈದಿಗಳ ಮೇಲೆ ವಿಷವಾಯುವಿನ ಪ್ರಯೋಗ ನಡೆಸಿತ್ತು ಹಾಗೂ ಚೀಣಾದ ಮೇಲೆ ವಿಷವಾಯುಗಳನ್ನು ಬಳಸಿತ್ತು ಎಂದು ಅಣುವಿಜ್ಞಾನಿಗಳ ಬುಲೆಟಿನ್ ತಿಳಿಸಿದೆ. ಅಮೆರಿಕಾಕ್ಕೆ ಈ ಬಗ್ಗೆ ತಿಳಿದಿದ್ದರೂ ದ್ವಿತೀಯ ಮಹಾಯುದ್ಧಾನಂತರ ಟೋಕಿಯೋದಲ್ಲಿ ನಡೆದ ಯುದ್ಧ ಅಪರಾಧಗಳ ವಿಚಾರದಲ್ಲಿ ಈ ಅಂಶವನ್ನು ಹೇಳಲೇ ಇಲ್ಲ.

ಜನರಿಗಾಗಿ ವಿಜ್ಞಾನ-ತಂತ್ರಜ್ಞಾನ

ಸೋವಿಯತ್ ಮತ್ತು ಕ್ಯೂಬಾದ ವಿಜ್ಞಾನಿಗಳು ಸುಂಟರಗಾಳಿಯ 'ಕಣ್ಣನ್ನು' ಹೊಕ್ಕು ಬಂದಿದ್ದಾರೆ – ಒಂದಲ್ಲ ಹನ್ನೊಂದು ಬಾರಿ. ಇದರ ಉದ್ದೇಶ ಗಿಲ್ಬರ್ಟ್ ಎಂದು ಹೆಸರಿಸಲ್ಪಟ್ಟ ಭೀಕರ ಸುಂಟರಗಾಳಿಯ ಕೇಂದ್ರವನ್ನು ಗುರುತಿಸಿ, ಅದರ ಬಲವನ್ನು ಹಾಗೂ ಇತರ ಲಕ್ಷಣಗಳನ್ನು ಅಧ್ಯಯನ ಮಾಡಿ ಅದರಿಂದಾಗಬಹುದಾದ ಅಪಾಯದ ಪರಿಮಾಣವನ್ನು ನಿರ್ಧರಿಸುವುದು. ಸೋವಿಯತ್ ಎ.ಎನ್-12 ವಿಮಾನದಲ್ಲಿ ಸುಂಟರಗಾಳಿಯ ಕಣ್ಣನ್ನು ಹೊಕ್ಕ ಈ ವಿಜ್ಞಾನಿಗಳಿಗೆ ಇದರಿಂದಾಗಿ ಈ ಸುಂಟರಗಾಳಿಯಿಂದ ಕ್ಯೂಬಾದ ಪೂರ್ವ ಪ್ರಾಂತ್ಯಗಳಿಗೆ ತಟ್ಟಬಹುದಾದ ಅಪಾಯವನ್ನು ಅಂದಾಜು ಮಾಡಲು ಸಾಧ್ಯವಾಗಿದೆ.

ಚೀನಾಕ್ಕೆ ಭಾರತದ ವೈದ್ಯಕೀಯ ಮಿಶನ್ನಿನ 50ನೇ ವಾರ್ಷಿಕ

1930 ರ ದಶಕ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸೋಷಲಿಸ್ಟರು, ಕಮ್ಯುನಿಸ್ಟರು, ಮತ್ತಿತರ ಎಡಪಂಥೀಯರು ಸಕ್ರಿಯರಾಗಿದ್ದ ಸಾಮ್ರಾಜ್ಯಶಾಹಿ ವಿರೋಧಿ ಸಂಯುಕ್ತರಂಗವಾಗಿ ಮೂಡಿಬಂದಿದ್ದ ಕಾಲ. ಈ ಅವಧಿಯಲ್ಲಿಯೇ ಅಂದು ಜಪಾನಿನ ಮಿಲಿಟರಿಶಾಹಿ ವಿರುದ್ಧ ಹೋರಾಡುತ್ತಿದ್ದ ಚೀಣಾಕ್ಕೆ ಕಾಂಗ್ರೆಸ್ ಒಂದು ವೈದ್ಯಕೀಯ ಮಿಶನ್ ಕಳಿಸಿತ್ತು. ಡಾ॥ ಕೋಟ್ನಿಸ್ ಇದರ ನೇತೃತ್ವ ವಹಿಸಿದ್ದರು. ಈ ಮಿಶನ್ನಿನ 50 ನೇ ವಾರ್ಷಿಕೋತ್ಸವವನ್ನು ಬೈಜಿಂಗ್‌ನಲ್ಲಿ ಸೆಪ್ಟೆಂಬರ್ 3ರಂದು ಆಚರಿಸಲಾಯಿತು. ಡೇನಿಯಲ್ ಲತೀಫ್ ನೇತೃತ್ವದ ಅಖಿಲ ಭಾರತ ಕೊಟ್ನಿಸ್ ಸ್ಮಾರಕ ಸಮಿತಿಯ ನಿಗಮ ಕೂಡ ಈ ಕಾರ್ಯಕ್ರಮದಲ್ಲಿ ಭಾಗವಹಿಸಿತು.

ಜಪಾನೀ ಆಕ್ರಮಣಕಾರರ ವಿರುದ್ಧ ಹೋರಾಡುವಲ್ಲಿ ಭಾರತದ ನೆರವನ್ನು ಇನ್ನು 50 ವರ್ಷಗಳ ನಂತರವಷ್ಟೇ ಅಲ್ಲ, 500 ವರ್ಷಗಳ ಮೇಲೂ ಸ್ಮರಿಸಲಾಗುತ್ತದೆ ಎಂದು ಚೀಣೀ ಮುಖಂಡ ವೋ ಪುಚು ಈ ಸಂದರ್ಭದಲ್ಲಿ ಹೇಳಿದರು.

ಹೇಬೇಯ್ ಪ್ರಾಂತದ ರಾಜಧಾನಿ ಶಿಜಿಯಾ ಜುವಾಂಗ್‌ನಲ್ಲಿ ಕ್ರಾಂತಿ ಹುತಾತ್ಮರ ಸ್ಮಾರಕಗಳ ಬಳಿ ಭಾರತೀಯ ವೈದ್ಯಕೀಯ ಮಿಶನ್ ಸ್ಮಾರಕ ಸಭಾಂಗಣವನ್ನು ಉದ್ಘಾಟಿಸಲಾಯಿತು.

ಸಿಂಧಗಿ

ಸಿಂದಗಿ ಕಂದಾಯ ಇಲಾಖೆಯಲ್ಲಿ ಭ್ರಷ್ಟಾಚಾರ ತಡೆಗಟ್ಟಬೇಕು. ಪಿ.ಎಸ್, ಐ. ಸೂರ್ಯವಂಶಿಯವರನ್ನು ಸಸ್ಪೆಂಡ್ ಮಾಡಬೇಕು. ಮಳೆಯ ಅನಾವೃಷ್ಟಿಯಿಂದ ಪರಿಹಾರ ಕೊಡಬೇಕು ಎಂದು ಘೋಷಣೆ ಕೂಗುತ್ತಾ ಮುಖ್ಯರಸ್ತೆಯಲ್ಲಿ ಮೆರವಣಿಗೆ ನಡೆಸಿ ಬಸ್ ನಿಲ್ದಾಣದಿಂದ ಎರಡೂ ಬಾಗಿಲನ್ನು ತಡೆದು ರಸ್ತಾ ರೋಖೊ ಸುಮಾರು 3ಗಂಟೆ ಕಾಲ ಸಾರಿಗೆ ವ್ಯವಸ್ಥೆ ನಿಲ್ಲಿಸಲಾಗಿತ್ತು. ಪೋಲೀಸರು 28 ಜನರನ್ನು ಬಂಧಿಸಿ ಬಿಡುಗಡೆ ಮಾಡಿದರು.

ಈ ಚಳುವಳಿಯ ನೇತೃತ್ವವನ್ನು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಅಣ್ಣಾರಾಯಿ ಇಳಗೇರ, ಶಿವಶರಣ ಸಿಂಗಾಡೆ, ಕಾಮಣ್ಣ ನಿರೋಳಿ, ಸಿದ್ದಣ್ಣ ಐರೋಡಗಿ ವಿರೋಬ ಬಸನಾಳ, ಮೋದಿನ ಸಾಬ್, ನದಾಫ ವಹಿಸಿದ್ದರು. ಕಾ॥ ಭೀಮಸೀ ಕಲಾದಗಿಯವರು ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದರು.

ನಿಜವಾದ ಬದಲಿಯ ಅಗತ್ಯ

(1 ನೇ ಪುಟದಿಂದ)

ಹೆಸರು, ಧ್ವಜ ಮತ್ತು ಚಿಹ್ನೆಯನ್ನು ತರಾತುರಿಯಲ್ಲಿ ಘೋಷಿಸಲಾಯಿತು. ಆದರೆ ಕಾರ್ಯಕ್ರಮದ ಬಗ್ಗೆ ಯಾವುದೇ ತರಾತುರಿ ಕಂಡುಬರಲಿಲ್ಲ. ರಾಜೀವ ಗಾಂಧಿ ಸರಕಾರವನ್ನು ಸೋಲಿಸಲು ಬರಿಯ ಧ್ವಜ, ಚಿಹ್ನೆಗಳಿಂದ ಸಾಧ್ಯವಿಲ್ಲ ಎಂಬುದನ್ನು ಈ ಪಕ್ಷಗಳು ಪೂರ್ಣ ಮರೆತಂತಿತ್ತು. ಕನಿಷ್ಟ ಕಾರ್ಯಕ್ರಮವಿರುವ ಒಂದು ವೇದಿಕೆಯ ಅಗತ್ಯವಿದೆ ಎಂದೂ ಇವರಿಗೆ ಹೊಳೆಯದಿದ್ದುದು ಆಶ್ಚರ್ಯ. ಆದರೆ ತರಾತುರಿ ಎಷ್ಟಿತ್ತೆಂದರೆ ಎಲ್ಲಾ ಪಕ್ಷಗಳ ನಾಯಕರನ್ನೂ, ಕಾರ್ಯಕರ್ತರನ್ನೂ ಈ ವಿಲೀನ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡದ್ದು ಕಾಣಲಿಲ್ಲ. ಇದು ಕೆಲವೇ ಕೆಲವು ನಾಯಕರ ಅವಸರದ ನಿರ್ಧಾರವಾಗಿತ್ತು. ಕಳೆದ ಒಂದೂವರೆ ತಿಂಗಳಲ್ಲಿ ಈ ಹೊಸ ಪಕ್ಷ ಇನ್ನೂ ಕಣ್ಣು ತೆರೆದಿಲ್ಲ. ಐಕ್ಯತೆಯ ಬದಲು ಪ್ರತಿ ಪಕ್ಷದಲ್ಲೂ ಇನ್ನಷ್ಟು ಅನೈಕ್ಯತೆ ಹೆಚ್ಚಿದೆ.

ಹಿಂದೆ ಜನತಾಪಕ್ಷ ಮತ್ತು ಲೋಕದಳ (ಅ)ದ ವಿಲೀನ ಐಕ್ಯತೆಯತ್ತ ಮೊದಲ ಹೆಜ್ಜೆಯಾಗಿತ್ತು. ಇದರ ಬಗ್ಗೆ ಹಲವು ನಾಯಕರುಗಳಿಗೆ ಭಿನ್ನಾಭಿಪ್ರಾಯಗಳಿದ್ದರೂ, ಕೊನೆಗೆ ಎರಡೂ ಪಕ್ಷದ ಕಾರ್ಯಕಾರಿ ಸಮಿತಿಗಳು ಇದಕ್ಕೆ ಅಸ್ತು ನೀಡಿ ಜಂಟಿ ನಾಯಕತ್ವ ಸ್ಥಾಪನೆಯಾಯಿತು. ಆದರೆ ದುರದೃಷ್ಟವಶಾತ್, ಸೆಪ್ಟೆಂಬರ್ 30 ರಂದು ಸಮಾವೇಶ ಕರೆದಿರುವ ನಾಯಕರು ಈ ವಿಲೀನದ ಯಥಾರ್ಥತೆಯನ್ನೇ ಪ್ರಶ್ನಿಸುತ್ತಿದ್ದಾರೆ. ಇದು ಅವರ ಘನತೆಗೆ ತಕ್ಕುದಲ್ಲ. ಇದಕ್ಕೆ ಹಲವು ಹಿರಿಯ ನಾಯಕರ ಬೆಂಬಲವಿದ್ದರೂ, ಈ ಬಗ್ಗೆ ಕರ್ನಾಟಕದ ಜನತಾ ಪಕ್ಷದ ನಿಲುವು ಅತ್ಯಂತ ಪ್ರಮುಖ ಪ್ರಶ್ನೆಯಾಗಿದೆ. ಕರ್ನಾಟಕದಲ್ಲಿ ಜನತಾ ಪಕ್ಷದ ಸರ್ಕಾರವನ್ನು ಉಳಿಸುವ ಅಗತ್ಯವನ್ನು ಹೀಗಳೆಯುವುದು ಸಲ್ಲದು. ಇದು ಮುಖ್ಯ ಕಾಳಜಿಯಾಗಬೇಕು. ಜನತಾ ಸರ್ಕಾರವೇನಾದರೂ ಆಂತರಿಕ ಭಿನ್ನಾಭಿಪ್ರಾಯದಿಂದ ಕರ್ನಾಟಕದಲ್ಲಿ ಉರುಳಿದರೆ, ಉತ್ತೇಜನ ನೀಡಿದಂತೆ. ವಿರೋಧ ಪಕ್ಷಗಳ ಕಾರ್ಯಕರ್ತರು ಇದರಿಂದ ಹತಾಶರಾಗುತ್ತಾರೆ. ಆದ್ದರಿಂದ ಜನತಾ ಪಕ್ಷದಲ್ಲಿನ ಬಿಕ್ಕಟ್ಟು ವಿಭಜನೆಗೆ ಎಡೆ ಕೊಡಬಾರದು. ಇಂತಹ ಪ್ರಮಾದವಾಗದಂತೆ ಎಲ್ಲಾ ಜಾಗರೂಕತೆ ವಹಿಸಬೇಕು.

ಇದೇ ರೀತಿ ವಿಲೀನದ ನಿರ್ಧಾರವನ್ನು ಅನುಮೋದಿಸಿದ್ದ ಲೋಕದಳ (ಬ) ಆಂತರಿಕ ಕಾದಾಟದಲ್ಲಿ ಮುಳುಗಿಹೋಗಿದೆ. ನಾಯಕರ ಬಗ್ಗೆ ವ್ಯಕ್ತಿಗತವಾಗಿ ಏನೇ ಅಭಿಪ್ರಾಯವಿರಲಿ ಲೋಕದಳ (ಬ)ದಲ್ಲಿ ವಿಭಜನೆ ಐಕ್ಯ ವಿರೋಧ ಪಕ್ಷದ ರಚನೆಗೆ ತಣ್ಣೀರೆರಚಿದಂತೆ.

ಕಳೆದ ಒಂದೆರಡು ತಿಂಗಳಲ್ಲಿ ಜನರನ್ನು ಬಾಧಿಸುವ ಸಮಸ್ಯೆಗಳನ್ನೆತ್ತಿಕೊಳ್ಳದೆ, ವಿರೋಧ ಪಕ್ಷದ ನಾಯಕರು ತಮ್ಮೊಳಗೆ ಯಾರು ನಾಯಕರಾಗುವುದೆಂದು ತಲೆ ಕೆಡಿಸಿಕೊಳ್ಳುತ್ತಿದ್ದಾರೆ. ಅವರು 1977ರ ಬಗೆಗೂ ಮಾತಾಡುತ್ತಿದ್ದಾರೆ. ರಾಜೀವ ಗಾಂಧಿಯ ಪರಾಭವ ಖಚಿತ ಎಂದು ಅವರು ತಿಳಿದುಕೊಂಡಂತಿದೆ. ಆದರೆ 1977ರಲ್ಲಿ ಎರಡು ಪ್ರಮುಖ ಅಂಶಗಳಿದ್ದವು ಎಂದು ಅವರು ಮರೆಯುತ್ತಾರೆ. ಮೊದಲನೆಯದಾಗಿ 1974 ರಿಂದ ಜಯಪ್ರಕಾಶ್ ನಾರಾಯಣ್ ಕೇಂದ್ರ ಸರ್ಕಾರದ ವಿರುದ್ಧ ಇಡೀ ದೇಶದಲ್ಲಿ (ಅದರಲ್ಲೂ ಹಿಂದಿ ರಾಜ್ಯಗಳಲ್ಲಿ) ಭಾರಿ ಚಳುವಳಿಯನ್ನು ಬೆಳೆಸಿದ್ದರು. ಎರಡನೆಯದಾಗಿ ಇಂದಿರಾಗಾಂಧಿ ದೇಶದ ಮೇಲೆ ಹೊರಿಸಿದ ತುರ್ತು ಪರಿಸ್ಥಿತಿ ಅವಧಿಯ ಅತ್ಯಾಚಾರಗಳು ಅಲ್ಪಸಂಖ್ಯಾತರು, ಬಡವರನ್ನು ಸೇರಿಸಿದಂತೆ ದೊಡ್ಡ ಜನ ವಿಭಾಗಗಳನ್ನು ರೊಚ್ಚಿಗೆಬ್ಬಿಸಿದ್ದವು.

ನಾಲ್ಕು ಪಕ್ಷಗಳ ವಿಲೀನ ಸಾಧ್ಯವಾಗದೆ ಹೋದರೂ, ರಾಷ್ಟ್ರೀಯ ರಂಗದ ರಚನೆಯನ್ನು ಜನತೆ ಸ್ವಾಗತಿಸಿತು. ರಂಗ ಬಿ.ಜೆ.ಪಿ.ಯಂತಹ ಕೋಮುವಾದಿ ಪಕ್ಷಗಳನ್ನು ದೂರವಿರಿಸಿದ್ದು ಸ್ವಾಗತಾರ್ಹವಾಯಿತು. ವಿರೋಧ ಪಕ್ಷಗಳು ಒಟ್ಟಿಗೆ ಕೆಲಸ ಮಾಡಬಲ್ಲವು ಎಂದು ಜನರಿಗೆ ಸ್ವಲ್ಪ ಮಟ್ಟಿನ ಭರವಸೆ ಬರುವಂತಾಯಿತು.

ಆದರೆ ರಂಗ ಕಾರ್ಯಕ್ರಮ ರೂಪಿಸುವಲ್ಲಿ ಹೆಚ್ಚಿನ ಗಂಭೀರತೆ ತೋರಿಸಿಲ್ಲ. ರಾಷ್ಟ್ರೀಯ ರಂಗದ ರಚನೆಯನ್ನು ನಮ್ಮ ಪಕ್ಷ ಈಗಾಗಲೇ ಸ್ವಾಗತಿಸಿದೆ. ಆದರೆ ಅದೇ ಸಮಯದಲ್ಲಿ – ಪ್ರಾದೇಶಿಕ ಪಕ್ಷಗಳ ಜತೆ ರಾಜಿ ಮನೋಭಾವ, ಅಲಿಪ್ತ ನೀತಿ ಬಗ್ಗೆ ನಿರ್ಲಕ್ಷ್ಯ, ಸಾಮ್ರಾಜ್ಯಶಾಹಿಗಳಿಂದ ಅಪಾಯದ ಬಗ್ಗೆ ಅಸಡ್ಡೆ – ಇವುಗಳನ್ನು ಟೀಕಿಸಲಾಗಿದೆ. ಕೆಲವು ನಾಯಕರುಗಳು ಯಾವುದೇ ಕಾರ್ಯಕ್ರಮವನ್ನು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ, ಚುನಾವಣೆಗಳು ಕಾರ್ಯಕ್ರಮದ ಆಧಾರದ ಮೇಲೆ ನಡೆಯುವುದಿಲ್ಲ ಎಂಬುದು ಅವರ ಅಭಿಪ್ರಾಯ.

ಇವೆಲ್ಲದರಿಂದ ವಿರೋಧ ಪಕ್ಷಗಳ ಐಕ್ಯ ಕಾರ್ಯಾಚರಣೆ ಬಗ್ಗೆ ವಿಶ್ವಾಸ ಕಳೆದುಕೊಳ್ಳಬೇಕಾಗಿಲ್ಲ. ಎರಡು ಅಂಶಗಳು ಮುಂಬರುವ ರಾಜಕೀಯ ಬೆಳವಣಿಯ ಮೇಲೆ ಪ್ರಬಲ ಪರಿಣಾಮ ಬೀರುತ್ತವೆ. ಮೊದಲನೆಯದಾಗಿ ರಾಜೀವ ಗಾಂಧಿ ಸರ್ಕಾರದ ಪ್ರಜಾಪ್ರಭುತ್ವ ವಿರೋಧಿ ಜನವಿರೋಧಿ ನೀತಿಗಳು ದಿನೇದಿನೇ ಜನರನ್ನು ರೊಚ್ಚಿಗೆಬ್ಬಿಸುತ್ತಿವೆ. ಎರಡನೆಯದಾಗಿ ವಿರೋಧಿ ಐಕ್ಯತೆ ಬಗ್ಗೆ ಜನತೆಯ ಕಾಳಜಿ ಮತ್ತು ಕಾಂಗ್ರೆಸ್ ಸರ್ಕಾರ ಕಿತ್ತೊಗೆಯುವ ಬಗ್ಗೆ ದೃಢ ನಿರ್ಧಾರ ಹೆಚ್ಚಾಗುತ್ತಾ ಹೋಗುತ್ತಿದೆ. ಈ ಎರಡೂ ಅಂಶಗಳು ವಿರೋಧ ನಾಯಕರ ವರ್ತನೆ ಬದಲಿಸಲು ಒತ್ತಡ ಹೇರುತ್ತವೆ. ಜನತೆಯ ಆಶಯಗಳಿಗೆ ಪ್ರತಿಸ್ಪಂದಿಸದ ಪಕ್ಷಗಳು ಮೂಲೆಗುಂಪಾಗುತ್ತವೆ. ಆದ್ದರಿಂದ ತಮ್ಮ ವೈಯಕ್ತಿಕ ಆಕಾಂಕ್ಷೆಗಳನ್ನು ಬದಿಗಿರಿಸಿ, ದೇಶದ ಹಿತಕ್ಕಾಗಿ ಎಡ ಮತ್ತು ಜಾತ್ಯಾತೀತ ಪಕ್ಷಗಳ ಐಕ್ಯ ಕಾರ್ಯಾಚರಣೆಗೆ ದುಡಿಯಬೇಕು. ಆದರೂ ದೈನಂದಿನ ಬೇಡಿಕೆಗಳನ್ನು ತೆಗೆದುಕೊಂಡು ಹೋರಾಟ ರೂಪಿಸುವುದಷ್ಟೇ ಜನತೆಯ ಆಶಯ.

ಏಜೆಂಟರು-ಚಂದಾದಾರರಿಗೆ ಸೂಚನೆ

'ಐಕ್ಯರಂಗ'ಕ್ಕೆ ಸಂಬಂಧಿಸಿದ ಬಿಲ್‌ಗಳು ಹಾಗೂ ಸಂದಾಯದಲ್ಲಿ ತಮಗೆ ಯಾವ ರೀತಿಯ ವ್ಯತ್ಯಾಸಗಳಿದ್ದರೂ ದಯವಿಟ್ಟು ಬರೆದು ತಿಳಿಸಿ. ಅಕ್ಟೋಬರ್ 5ರ ಒಳಗೆ ತಿಳಿಸಿದರೆ ಲೆಕ್ಕಪತ್ರಗಳನ್ನೆಲ್ಲಾ ಒಮ್ಮೆಗೆ ಪರಿಶೀಲಿಸಿ ತೊಂದರೆಯನ್ನು ಸರಿಪಡಿಸಲು ಅನುಕೂಲವಾಗುವುದು. ಈ ವ್ಯತ್ಯಾಸವಾಗಿರುವ ಹಣದ ಮೊತ್ತಕ್ಕೆ ಸಂಬಂಧಿಸಿದಂತೆ ತಾವು ಅದನ್ನು ಯಾರ ಅಥವಾ ಯಾವ ಮೂಲಕ ಐಕ್ಯರಂಗಕ್ಕೆ ತಲುಪಿಸಿದ್ದೀರಿ ಎಂಬುದನ್ನು ಹಾಗೂ ದಿನಾಂಕವನ್ನು ದಯವಿಟ್ಟು ತಿಳಿಸಿ. ಈ ಸಂಬಂಧದಲ್ಲಿ ನಿಮಗೆ ಆದ ತೊಂದರೆಗೆ ವಿಷಾದಿಸುತ್ತೇವೆ.

—ವ್ಯವಸ್ಥಾಪಕರು

ಮಾನಹಾನಿ ಮಸೂದೆ ಹೋರಾಟಕ್ಕೆ ಜಯ

(1 ನೇ ಪುಟದಿಂದ)

ಸಮಸ್ತ ಪತ್ರಿಕಾ ರಂಗವೇ ಅಲ್ಲ, ಕಾರ್ಮಿಕರ, ನೌಕರರ ಸಂಘಟನೆಗಳು, ರೈತರ, ಕೃಷಿ ಕಾರ್ಮಿಕರ ಸಂಘಟನೆಗಳು ಇದು ತಮ್ಮ ಮೂಲಭೂತ ಹಕ್ಕುಗಳ ಮೇಲಿನ ಹಲ್ಲೆ ಎಂದು ಅರಿತು ಸಂಸತ್ತಿನಲ್ಲಿ ವಿರೋಧ ಪಕ್ಷಗಳು ವ್ಯಕ್ತಪಡಿಸಿದ ಪ್ರತಿರೋಧವನ್ನು ಮತ್ತಷ್ಟು, ಇನ್ನಷ್ಟು ಬಲಯುತಗೊಳಿಸಿದವು. ಸಪ್ಟಂಬರ್ 6 ರಂದು ಪತ್ರಿಕಾರಂಗದಲ್ಲಿ ಮುಷ್ಕರದ ಕರೆ. ಅದಕ್ಕೆ ಎಲ್ಲೆಡೆ ವ್ಯಕ್ತಪಟ್ಟ ಅಪೂರ್ವ ಬೆಂಬಲದಿಂದಾಗಿ ಸರ್ಕಾರ ರಾಜ್ಯಸಭೆಯ ಪ್ರಸಕ್ತ ಅಧಿವೇಶನದಲ್ಲಿ ಇದನ್ನು ಮಂಡಿಸುವುದಿಲ್ಲ ಎಂದಿತು. ಆದರೂ ಅದನ್ನು ಶಾಸನವನ್ನಾಗಿ ಮಾಡುವುದು ಖಂಡಿತ ಎಂದು ಹೇಳಲಾರಂಭಿಸಿತು. ಈ ಮಸೂದೆ ನಿರಪಾಯಕಾರಿ, ಬೇಕಾದರೆ ಕೆಲವೆಡೆ ಸಣ್ಣಪುಟ್ಟ ಬದಲಾವಣೆ ಮಾಡಲು ಪತ್ರಿಕಾರಂಗ ಸರ್ಕಾರದೊಂದಿಗೆ ಮಾತುಕತೆ ನಡೆಸಲಿ, ಇದಕ್ಕಾಗಿ ಉದಾರ ಮನಸ್ಸಿನಿಂದ ಏಳು ಕೇಂದ್ರ ಮಂತ್ರಿಗಳಿರುವ ಸಮಿತಿಯನ್ನು ರಚಿಸಿದ್ದೇವೆ ಎಂದರು ರಾಜೀವ್‌ಗಾಂಧಿ.

ಪತ್ರಿಕಾರಂಗವಾಗಲೀ, ಬೇರೆ ಜನವಿಭಾಗಗಳಾಗಲೀ ಈ ಕುತಂತ್ರಕ್ಕೆ ಬಲಿಬೀಳಲು ನಿರಾಕರಿಸಿದರು. ಬುಧವಾರ ಸೆಪ್ಟಂಬರ್ 21 ರಂದು ಈ ಮಂತ್ರಿ ಮಂಡಳಿಯ ಸಮಿತಿಯ ಕಲಾಪ ಆರಂಭವಾಯಿತು. ಬಹುತೇಕ ಬಹಿಷ್ಕಾರಕ್ಕೊಳಗಾಯಿತು. ಮಾತುಕತೆಗೆ ಬಂದ ಕೆಲವು ಬಾಲಬಡುಕರು ಮಸೂದೆಯನ್ನು ಕೈಬಿಡಬೇಕೆಂದರು. ಸಮಿತಿ ತನ್ನ ಕಹಿ ಅನುಭವವನ್ನು ವರದಿ ಮಾಡಿತು.

ಜ್ಯೋತಿಬಸುರವರು ಅಂದಂತೆ ತಡವಾಗಿಯಾದರೂ ನಿರೀಕ್ಷೆಯಂತೆ ಸರ್ಕಾರ ಈ ಮಸೂದೆಯನ್ನು ಕೈ ಬಿಡಬೇಕಾಗಿ ಬಂತು.

ಮಂಗಳೂರಿನಲ್ಲಿ 2,000 ರೈತರ ಬಂಧನ

ಸೆಪ್ಟೆಂಬರ್ ಚಳುವಳಿಯನ್ನು ಮಂಗಳೂರು ತಾಲ್ಲೋಕಿನಲ್ಲಿ ಯಶಸ್ವಿಗೊಳಿಸಲು ಆಗಸ್ಟ್ 11 ರಿಂದ 31ರ ವರೆಗೆ ಸುಮಾರು 35 ಗ್ರಾಮಗಳಲ್ಲಿ ಪ್ರಚಾರ ಸಭೆಗಳನ್ನು ನಡೆಸಲಾಯಿತು. 31 ಹಾಗೂ ಸೆಪ್ಟೆಂಬರ್ 1 ರಂದು ಜೀಪು ಪ್ರಚಾರ ಸಭೆಗಳನ್ನು ನಡೆಸಲಾಯಿತು. ಸೆಪ್ಟೆಂಬರ್ 5 ರಿಂದ 12ರ ವರೆವಿಗೆ ದ.ಕ. ಜಿಲ್ಲಾಧಿಕಾರಿ ಕಛೇರಿ ಮುಂದೆ ನಡೆದ ಧರಣಿ ಸತ್ಯಾಗ್ರಹದಲ್ಲಿ ಒಟ್ಟು 835 ಮಂದಿ ರೈತರು ಪಾಲ್ಗೊಂಡಿದ್ದರು. ಸೆಪ್ಟೆಂಬರ್ 13 ರಂದು ತಂಡೋಪತಂಡವಾಗಿ ಜಿಲ್ಲಾಧಿಕಾರಿ ಕಛೇರಿ ಪಿಕೆಟಿಂಗ್ ಮಾಡಿದ 2 ಸಾವಿರ ರೈತರನ್ನು ಬಂಧಿಸಲಾಯಿತು. ವಿವಿಧ ಕಾರ್ಮಿಕ ಸಂಘಗಳ ಪ್ರಮುಖ ನಾಯಕರು ಭಾಗವಹಿಸಿ ಬಂಧನಕ್ಕೊಳಗಾದರು. ಪಿಕೆಟಿಂಗ್ ನೇತೃತ್ವವನ್ನು ರೈತ ಸಂಘದ ಜಿಲ್ಲಾ ಅಧ್ಯಕ್ಷ ಕಾ|| ಕೆ. ಆರ್. ಶ್ರೀಯಾನ್ ಉಪಾಧ್ಯಕ್ಷ ಕಾ|| ಯು. ಜನಾರ್ಧನ ನಾಯಕ್, ರಾಮಚಂದ್ರ ಉಚ್ಚಿಲ್ ಮುಂತಾದವರು ವಹಿಸಿದ್ದರು.

ಪೆಪ್ಸಿಕೋಲಾ ಪ್ರವೇಶಕ್ಕೆ ಸರ್ಕಾರದ ಅನುಮತಿ

ಪಾಲಿಟ್ ಬ್ಯೂರೋ ಖಂಡನೆ

ಕೇಂದ್ರ ಸರ್ಕಾರ ಅಮೇರಿಕಾದ ಕುಪ್ರಸಿದ್ಧ ಬಹುರಾಷ್ಟ್ರೀಯ ಕಂಪೆನಿ ಪೆಪ್ಸಿ ಕೋಲಾದ ಕೃಷಿ–ಉದ್ದಿಮೆಯ ಯೋಜನೆಯೊಂದಕ್ಕೆ ತನ್ನ ಅಂತಿಮ ಒಪ್ಪಿಗೆ ನೀಡಿ ನಮ್ಮ ದೇಶದ ಕೃಷಿ ಆಧಾರಿತ ಉದ್ದಿಮೆ ರಂಗದಲ್ಲಿ ಮೊತ್ತಮೊದಲ ಬಾರಿಗೆ ಪ್ರವೇಶಿಸಿ ಅದನ್ನು ಕೊಳ್ಳೆ ಹೊಡೆಯಲು ಅವಕಾಶ ಮಾಡಿಕೊಟ್ಟಿದೆ.

22 ಕೋಟಿ ರೂ.ಗಳ ಈ ಬೃಹತ್ ಆಹಾರ ಸಂಸ್ಕರಣ ಉದ್ದಿಮೆಯನ್ನು ಪೆಪ್ಸಿ ಕೋಲಾ ಭಾರತದ ಪ್ರಮುಖ ಗುತ್ತೇದಾರಿ ಗುಂಪಾದ ಟಾಟಾಗಳು ಮತ್ತು ಪಂಜಾಬ್ ಕೃಷಿ–ಉದ್ದಿಮೆ ನಿಗಮದ ಜತೆಗೂಡಿ ಆರಂಭಿಸಲಿದೆ. ಈ ಪ್ರಾಜೆಕ್ಟ್‌ಗೆ ಕೇಂದ್ರ ಮಂತ್ರಿ ಮಂಡಳದ ಆರ್ಥಿಕ ವ್ಯವಹಾರಗಳ ಸಮಿತಿ ತನ್ನ ಸೆಪ್ಟಂಬರ್ 19ರ ಸಭೆಯಲ್ಲಿ ಮಂಜೂರಾತಿ ನೀಡಿತು. ಇದಲ್ಲದೆ ಈ ರೀತಿ ವಿದೇಶೀ ಗುತ್ತೆದಾರಿಗಳಿಗೆ ದೇಶದ ಕೃಷಿ ಆಧಾರಿತ ಉದ್ದಿಮೆ ರಂಗದಲ್ಲಿ ಸವಲತ್ತುಗಳ ಒಂದು ದೊಡ್ಡಪಟ್ಟಿಯನ್ನೆ ಈ ಸಮಿತಿ ಅಂಗೀಕರಿಸಿದೆಯಂತೆ. ಉದ್ದಿಮೆಗಳು ಸಂಸ್ಕರಿಸಿದ ಆಹಾರೋತ್ಪನ್ನಗಳು ಪೂರ್ಣವಾಗಿ ರಫ್ತಿಗಾಗಿದ್ದು ಇದೇ ವಿದೇಶಿ ಕಂಪೆನಿಗಳು ರಫ್ತು ಮಾಡುತ್ತವೆಯಂತೆ. ಇದರಿಂದ ದೇಶಕ್ಕೆ ಬಹಳ ವಿದೇಶಿ ವಿನಿಮಯ ಮತ್ತು ಹಲವರಿಗೆ ಉದ್ಯೋಗವಕಾಶ ದೊರೆಯುತ್ತದೆ ಎಂದು ಹೇಳಲಾಗಿದೆ. ಆದರೆ ಅದಕ್ಕಾಗಿ ದೇಶ ತೆರಬೇಕಾದ ಬೆಲೆಯೆಷ್ಟು, ಆರ್ಥಿಕ ದಾಸ್ಯ ಎಷ್ಟು ಎಂತು ಹೇಳಲಾಗಿಲ್ಲ.

ಕೇಂದ್ರ ಸರ್ಕಾರದ ಈ ದೇಶ–ವಿರೋಧಿ ಕ್ರಮವನ್ನು ಸಿ.ಪಿ.ಐ.(ಎಂ)ನ ಪಾಲಿಟ್ ಬ್ಯೂರೋ ತೀವ್ರವಾಗಿ ಖಂಡಿಸಿದೆ. ಹೊಸ ಆರ್ಥಿಕ ನೀತಿಯ ಮೂಲಕ ದೇಶದ ಆರ್ಥಿಕವನ್ನು ವಿದೇಶಿ ಗುತ್ತೇದಾರಿಗಳಿಗೆ ವ್ಯವಸ್ಥಿತವಾಗಿ ಒತ್ತೆಯಿಡಲಾರಂಭಿಸಿದ ರಾಜೀವ್ ಸರ್ಕಾರ ಈಗ ಈ ಕುಪ್ರಸಿದ್ಧ ಬಹುರಾಷ್ಟ್ರೀಯ ಕಂಪೆನಿಗೆ ಭಾರತದ ಕೃಷಿ-ಕೈಗಾರಿಕಾ ರಂಗದಲ್ಲಿ ಮೊತ್ತಮೊದಲ ಬಾರಿಗೆ ಪ್ರವೇಶ ನೀಡಿಲ್ಲ ತನ್ನನ್ನೇ ಮಾರಿಕೊಳ್ಳುವ ಈ ಕ್ರಮ ಕೈಗೊಂಡು ಈ ದಿಕ್ಕಿನಲ್ಲಿ ಇನ್ನಷ್ಟು ಮುಂದುವರಿದಿದೆ ಎಂದು ಪಾಲಿಟ್‌ಬ್ಯೂರೋ ಹೇಳಿಕೆ ವರ್ಣಿಸಿದೆ.

ಎಲ್ಲಾ ದೇಶ ಪ್ರೇಮಿ ಶಕ್ತಿಗಳು ಈ ಪ್ರಾಜೆಕ್ಟ್‌ಗೆ ನೀಡಿರುವ ಅನುಮತಿಯನ್ನು ತಕ್ಷಣ ರದ್ದುಪಡಿಸಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕೆಂದು ಪಾಲಿಟ್‌ಬ್ಯೂರೋ ಕರೆ ನೀಡಿದೆ.

ಕರ್ನಾಟಕಕ್ಕೆ ಕಳಂಕ ತರುವ ಘಟನೆಗಳು

[ಒಂದನೇ ಪುಟದಿಂದ]

ಆರ್. ಎಸ್. ಎಸ್ ಎಂಬ ಹಿಂದೂಗಳ ಮತೀಯ ಸಂಘಟನೆಯವರು ಈ ಕೃತ್ಯಗಳ ಹಿಂದೆ ಇದ್ದಾರೆ ಎಂಬ ಸುದ್ದಿ ನಿಜವಾದರೆ, ಯಾರೇ ಆಗಲಿ, ಅವರನ್ನು ಬಯಲಿಗೆಳೆದು ಶಿಕ್ಷಿಸುವ ಕಾರ್ಯವನ್ನು ಬೊಮ್ಮಾಯಿ ಸರಕಾರವು ಮಾಡುವುದೆಂದು ನಮ್ಮ ಪಕ್ಷವು ಆಶಿಸುತ್ತದೆ.

ಪೋಲೀಸು ಅಧಿಕಾರಿಗಳು ಈ ಸಂದರ್ಭದಲ್ಲಿ ವರ್ತಿಸಿದ ಬಗ್ಗೆಯೂ ಹಲವಾರೂ 'ಸಂಶಯಾತ್ಮಕ ಸುದ್ದಿಗಳು' ಇವೆ.

ಇವನ್ನೆಲ್ಲಾ ಸ್ಪಷ್ಟವಾಗಿ ಹೊರಗೆಡಹುವ 'ಜ್ಯುಡಿಶಿಯಲ್ ತನಿಖೆ'ಯಾದರೆ ಮಾತ್ರ 'ರಾಜ್ಯದ ಜಾತ್ಯಾತೀತ ಪರಂಪರೆ'ಯನ್ನು ಮುಂದುವರಿಸುವ ಅಚಲ ಇಚ್ಛೆ ಸರಕಾರಕ್ಕೆ ಇದೆ ಎಂದು ಭರವಸೆಯಾಗುವುದು.

ರಾಜ್ಯದ ಜನತಾ ಸರಕಾರವು ಗಂಭೀರವಾದ ನಿಲುವು ವಹಿಸುವುದು ಎಂದು ನಮ್ಮ ಪಕ್ಷವು ವಿಶ್ವಾಸವಿಡುತ್ತದೆ.

ಎಸ್.ಎಫ್.ಐ. ಖಂಡನೆ

ಬೀದರ್‌ನಲ್ಲಿಯ ಈ ಭೀಕರ ಘಟನೆಗಳ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸಿರುವ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಕರ್ನಾಟಕ ರಾಜ್ಯ ಸಮಿತಿಯು ಈ ಕುರಿತು ನಿಷ್ಪಕ್ಷವಾದ ನ್ಯಾಯಾಂಗ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕೆಂದು ಸರ್ಕಾರವನ್ನು ಆಗ್ರಹಪಡಿಸಿದೆ. ವಿದ್ಯಾರ್ಥಿಗಳು ಹಾಗೂ ನಾಗರೀಕ ಸಮುದಾಯ ಸೌಹಾರ್ದತೆ ಕಾಪಾಡಿಕೊಂಡು ಬರಬೇಕೆಂದು ವಿನಂತಿಸಿದೆ.

ತಿದ್ದುಪಡಿ

ಸೆಪ್ಟೆಂಬರ್ ಚಳುವಳಿ ಎಲ್ಲೆಡೆ ಯಶಸ್ವಿ ಪುಟ 6ರ ಸುದ್ದಿಯ ಟಿಪ್ಪಣಿಯಲ್ಲಿನ ಹಲವು ದೋಷಗಳು ಬಂದಿದ್ದು ಅದನ್ನು ಈ ಕೆಳಕಂಡಂತೆ ಓದಿಕೊಳ್ಳಬೇಕಾಗಿ ವಿನಂತಿ.

ಅಖಿಲ ಭಾರತ ಕಿಸಾನ್ ಸಭಾ ಹಾಗೂ ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘ ಮತ್ತಿತರ ಎಡಪಕ್ಷಗಳ ರೈತಸಂಘಗಳು ನೀಡಿದ ಕರೆಯಂತೆ ಸೆಪ್ಟೆಂಬರ್ 10ರಿಂದ 15ರವರೆವಿಗೆ ದೇಶದ ವಿವಿಧ ರಾಜ್ಯಗಳಲ್ಲಿ ನಡೆದ ಚಳುವಳಿಯ ವರದಿ ಇಲ್ಲಿ ನೀಡಲಾಗಿದೆ.

Printed & Published by P. Ramachandra Rao on behalf of the Communist Party of India (Marxist) Karnataka State Committee, K. V. Temple Street Sulthanpet, Bangalore-560053. Editorial and Managerial Office: L-56, K. V. Temple Street, Sulthanpet, B-53, Phone: 75331.
Editor: P. Ramachandra Rao, Managing Editor: N. K. Upadhayaya. Janagere Mudrana, Bangalore-21.